"ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿನ ಬಹುಮಾನಿತ ಆಯ್ದ ಕತೆಗಳ ಒಂದು ಅಧ್ಯಯನ"

(ಎಂ.ಫಿಲ್ ಅಂಶಿಕ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಸಿ.ಎನ್. ರಂಗನಾಥ್

ಮಾರ್ಗದರ್ಶಕರು
ಡಾ. ಮಾಧವ ಪೆರಾಜೆ
ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೬

631

"ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿನ ಬಹುಮಾನಿತ ಆಯ್ದ ಕತೆಗಳ ಒಂದು ಅಧ್ಯಯನ"

(ಎಂ.ಫಿಲ್. ಅಂಶಿಕ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಸಿ.ಎನ್. ರಂಗನಾಥ್

ಮಾರ್ಗದರ್ಶಕರು
ಡಾ. ಮಾಧವ ಪೆರಾಜೆ
ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ –೫೮೩೨೭೬
೨೦೦೯

ಮಾರ್ಗದರ್ಶಕರ ದೃಢೀಕರಣ ಪತ್ರ

'ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿನ ಬಹುಮಾನಿತ ಆಯ್ದ ಕತೆಗಳ ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಿ.ಎನ್.ರಂಗನಾಥ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂದವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಮಾಧವ ಪೆರಾಜೆ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ
ದಿನಾಂಕ: 08-10-09

ಸಂಶೋಧಕರ ಪ್ರಮಾಣ ಪತ್ರ

'ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿನ ಬಹುಮಾನಿತ ಆಯ್ದ ಕತೆಗಳ ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು ಡಾ. ಮಾಧವ ಪೆರಾಜೆ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಿ. ಎನ್. ರಂಗನಾಥ್
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ: 08-10-09

ಪರಿವಿಡಿ

ಅಧ್ಯಾಯ — ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೧-೩

ಅಧ್ಯಾಯ — ೨
ಪ್ರಸ್ತಾವನೆ : ಕನ್ನಡದ ಸಣ್ಣ ಕತೆಗಳು -ಚಾರಿತ್ರಿಕ ನೆಲೆ ೪-೧೧

ಅಧ್ಯಾಯ — ೩
ಇತ್ತೀಚಿನ ಸಣ್ಣ ಕತೆಗಳು ೧೨-೧೮

ಅಧ್ಯಾಯ — ೪
ದೀಪಾವಳಿ ವಿಶೇಷಾಂಕದ ಸಣ್ಣ ಕತೆಗಳು ೧೯-೪೫

ಅಧ್ಯಾಯ — ೫
ಕತೆಗಳ ವೈಶಿಷ್ಟ್ಯ ೪೬-೬೬

ಅಧ್ಯಾಯ — ೬
ಸಮಾರೋಪ ೬೭-೬೮

ಅಧ್ಯಾಯ — ೭
ಆಕರ ಗ್ರಂಥಗಳು ೬೯-೭೦

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ಒಂದು ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿದೆ. ಸಣ್ಣಕತೆಯು ಒಂದು ಪ್ರಸಂಗವನ್ನು ಹಲವು ನೆಲೆಗಳಲ್ಲಿ ಚಿಂತಿಸಿ ಚಿಕ್ಕದಾಗಿ ಸ್ವಾರಸ್ಯವಾಗಿ ಚಿತ್ರಿಸಿಕೊಡುತ್ತದೆ. ಹೊಸಗನ್ನಡ ಸಾಹಿತ್ಯದ ಆರಂಭದಲ್ಲಿ ನಾವು ಸಣ್ಣಕಥೆಗಳನ್ನು ಗುರುತಿಸುತ್ತೇವೆ. ಸಣ್ಣ ಕಥೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡದ್ದು ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಲೆ.

ಪ್ರಾರಂಭದಲ್ಲಿ ಸಣ್ಣಕಥೆಗಳು ಹೊರಬಂದದ್ದು ಪತ್ರಿಕೆಯ ಮೂಲಕವೇ, ಪ್ರಪ್ರಥಮವಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಯನ್ನು ಬರೆದವರು 'ಪಂಜೆ ಮಂಗೇಶರಾಯರು'. ಇವರ 'ನನ್ನ ಚಿಕ್ಕ ತಂದೆ' ಕತೆಯು 'ಸುಹಾಸಿನಿ' ಪತ್ರಿಕೆಯಲ್ಲಿ ಪ್ರಪ್ರಥಮವಾಗಿ ಪ್ರಕಟವಾಯಿತು. ನಂತರ ಬಂದಂತಹ ಕತೆಗಾರರು ಸಾಮಾಜಿಕ, ರಾಜಕೀಯ, ಐತಿಹಾಸಿಕ, ಪೌರಾಣಿಕ ಹಿನ್ನಲೆಯಲ್ಲಿ ಕತೆಗಳನ್ನು ಬರೆಯತೊಡಗಿದರು. ಈ ರೀತಿ ನವೋದಯ ಸಾಹಿತ್ಯದಲ್ಲಿ ಆರಂಭಗೊಂಡ ಸಣ್ಣಕಥೆ ಮುಂದಿನ ಮೂರು ಸಾಹಿತ್ಯ ಘಟ್ಟಗಳಲ್ಲಿ ತನ್ನದೇ ಆದಂತಹ ವಿಶಿಷ್ಠ ಸ್ವರೂಪವನ್ನು ಪಡೆದುಕೊಂಡು ಇಂದು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದಂತಹ ಒಂದು ಛಾಪನ್ನು ಮೂಡಿಸಿದೆ. ದಲಿತ ಮತ್ತು ಬಂಡಾಯ ಸಾಹಿತ್ಯ ಘಟ್ಟದಲ್ಲಿ ಸ್ತ್ರೀಸಂವೇದನೆ, ದಲಿತಸಂವೇದನೆ, ಮುಸ್ಲಿಂಸಂವೇದನೆಯನ್ನು ಪ್ರತಿಬಿಂಬಿಸುತ್ತಾ ಸಮಕಾಲಿನ ಸಮಾಜವನ್ನು ತಿದ್ದುವಂತಹ, ಓದುಗರಿಗೆ ಅರಿವನ್ನು ಮೂಡಿಸು-ವಂತಹ ಕೆಲಸವನ್ನು ಮಾಡುತ್ತಿದೆ.

ಪ್ರಜಾವಾಣಿ ಪತ್ರಿಕೆಯು ಪ್ರಾರಂಭದಿಂದಲೂ ಸಹ ತನ್ನ ಪತ್ರಿಕೆಗಳಲ್ಲಿ ಉತ್ತಮ ಕಥೆಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಉತ್ತಮ ಕತೆಗಳನ್ನು ಗುರುತಿಸುವಂತಹ ಹಾಗು ಬರಹಗಾರರನ್ನು ಪ್ರೇರೇಪಸಿಸುವಂತಹ ಉದ್ದೇಶದಿಂದ ಪ್ರಜಾವಾಣಿ ಪತ್ರಿಕೆಯು ದೀಪಾವಳಿ ವಿಶೇಷಾಂಕದಲ್ಲಿ ಕಥಾ ಸ್ಪರ್ಧೆಯನ್ನು ಏರ್ಪಡಿಸುತ್ತಿದೆ. ಇತ್ತೀಚಿನ ಕೆಲವು ದಶಕಗಳಿಂದ ವಿಶೇಷ ಸಂಚಿಕೆಯಲ್ಲಿ ಬಹುಮಾನಿತ ಕಥೆಗಳನ್ನು ಪ್ರಕಟಿಸುತ್ತಿದೆ. ಈ ಸಂಚಿಕೆಯು ಬಹುಮಾನಿತ ಕತೆಗಳ-ನ್ನಲ್ಲದೆ, ಕವಿತೆಗಳನ್ನು ಉತ್ತಮ ಲೇಖನಗಳನ್ನು, ಹನಿಗವನಗಳನ್ನು, ಜಾಹೀರಾತುಗಳನ್ನು ಹಾಗು ನಾಡು ನುಡಿಗೆ ಸಂಬಂಧಿಸಿದಂತಹ ಹಲವು ವಿಚಾರಗಳನ್ನು ಪ್ರಕಟಿಸುತ್ತಿದೆ. ಈ ರೀತಿಯಾಗಿ ಪ್ರಜಾವಾಣಿ ಪತ್ರಿಕೆಯು ಯುವ ಬರಹಗಾರರು ಹಾಗೂ ಯುವ

ಚಿಂತಕರಿಗೆ ಪ್ರೋತ್ಸಾಹವನ್ನು ಮತ್ತು ಅವರ ಸೃಜನಾತ್ಮಕ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯನ್ನು ಒದಗಿಸಿಕೊಟ್ಟಿದೆ.

ದೀಪಾವಳಿ ವಿಶೇಷಾಂಕವನ್ನು ಹೊರ ತರುವ ಮೊದಲು ಕಥೆಗಳಿಗಾಗಿ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಜಾಹೀರಾತು ಮೂಲಕ ಕಥೆಗಳನ್ನು ಆಹ್ವಾನಿಸಲಾಗುತ್ತದೆ. ಸ್ಪರ್ಧೆಗಾಗಿ ಬಂದಂತಹ ಕಥೆಗಳಲ್ಲಿ ಸಂಪಾದಕ ಮಂಡಳಿ ಮೊದಲು ಕೆಲವು ಕಥೆಗಳನ್ನು ಆಯ್ದು ತಾವು ನೇಮಿಸಿರುವಂತಹ ತೀರ್ಪುಗಾರರ ಕೈಗೆ ನೀಡುತ್ತದೆ. ಅವರು ಆಯ್ಕೆ ಮಾಡಿಕೊಟ್ಟಂತಹ ಕಥೆಗಳನ್ನು ಬಹುಮಾನಿತ ಕಥೆಗಳನ್ನಾಗಿ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಈ ಕಥೆಗಳು ಸಮಕಾಲೀನ ಸಮಾಜವನ್ನು ಸ್ತ್ರೀಸಂವೇದನೆಯನ್ನು ಹೆಣ್ಣಿನ ಮಾನಸಿಕ ತುಮುಲಗಳನ್ನು ಜಾತಿ ಪದ್ಧತಿಯನ್ನು ಹೀಗೆ ಇಂದಿನ ಸಮಾಜದಲ್ಲಿ ನಾವು ದಿನ ನಿತ್ಯ ಕಾಣುತ್ತಿರುವ ಸನ್ನಿವೇಶಗಳೇ ಈ ಕಥೆಗಳಲ್ಲಿ ವಸ್ತುವಾಗಿ ರೂಪತಾಳಿವೆ.

ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಬಹುಮಾನಿತ ಆಯ್ದ ಕತೆಗಳ ಸಂಚಿಕೆ ಸುಮಾರು ಅರವತ್ತೈದು ವರ್ಷಗಳ ಇತಿಹಾಸವನ್ನು ಹೊಂದಿದೆ. ನಾನು ಅಧ್ಯಯನದ ಅನುಕೂಲಕ್ಕೋಸ್ಕರ ಹಾಗೂ ನನಗೆ ದೊರೆತಿರುವ ಸೀಮಿತ ಅವಧಿಯಲ್ಲಿ ಈ ಪ್ರಬಂಧವನ್ನು ಮಂಡಿಸುವ ಸಲುವಾಗಿ ೧೯೯೫ ರಿಂದ ೨೦೦೮ರ ವರೆಗಿನ ಸಂಚಿಕೆಗಳನ್ನು ಆಯ್ದು ಅದರಲ್ಲಿ ನನಗೆ ಇಷ್ಟವಾದ ಮತ್ತು ಬರವಣಿಗೆಗೆ ಅನುಕೂಲವಾಗುವಂತಹ ೨೦ ಕಥೆಗಳನ್ನು ಮಾತ್ರ ಆಯ್ದುಕೊಂಡಿದ್ದೇನೆ. ಈ ಕತೆಗಳು ಯಾವ ಮಾದರಿಯನ್ನು ಅನುಸರಿಸುತ್ತಿವೆ? ಅವುಗಳ ವೈಶಿಷ್ಟ್ಯವೇನು? ಹೊಸ ಮಾದರಿಯ ಕಥೆಗಳಲ್ಲಿ ಲೇಖಕರ ತುಡಿತಗಳೇನು? ಒಟ್ಟಾರೆ ಕನ್ನಡದ ಇತ್ತೀಚಿನ ಸಣ್ಣ ಕಥೆಗಳು ಯಾವ ಮಾದರಿಯಲ್ಲಿ ಸಾಗುತ್ತಿವೆ? ಇತ್ಯಾದಿ ವಿಷಯಗಳನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ಈ ಅಧ್ಯಯನದಲ್ಲಿ ಏಳು ಅಧ್ಯಾಯಗಳನ್ನು ಮಾಡಿಕೊಂಡು ಈ ಪ್ರಬಂಧವನ್ನು ರಚಿಸಿದ್ದೇನೆ ಮೊದಲನೇಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಸವಿಸ್ತಾರವಾಗಿ ವಿವರಿಸಿದ್ದೇನೆ. ಎರಡನೇ ಅಧ್ಯಾಯದಲ್ಲಿ ಸಣ್ಣ ಕಥೆ ಕನ್ನಡ ಸಾಹಿತ್ಯದಲ್ಲಿ ಹುಟ್ಟಿ, ಪ್ರೇರಣೆ ಪ್ರಭಾವಗಳಿಗೊಳಗಾಗಿ ನವೋದಯದಿಂದಿಡಿದು, ದಲಿತ ಮತ್ತು ಬಂಡಾಯ ಸಾಹಿತ್ಯ ಘಟ್ಟದ ವರೆವಿಗೆ ಯಾವ ರೀತಿ ಚಾರಿತ್ರಿಕ ಕ್ರಮದಲ್ಲಿ ಬೆಳದು ಬಂದಿತು ಎಂಬುದನ್ನು ವಿವರಿಸಿದ್ದೇನೆ. ಮೂರನೇಯ ಅಧ್ಯಾಯದಲ್ಲಿ ಇತ್ತೀಚಿನ ಸಣ್ಣ ಕಥೆಗಳು ಯಾವ ವಸ್ತು ತಂತ್ರಗಳನ್ನು ಅಳವಡಿಸಿಕೊಂಡು ಸಮಕಾಲಿನ ಸಮಾಜವನ್ನು ಯಾವ ರೀತಿ ಪ್ರತಿನಿಧಿಸುತ್ತವೆ

P.T.O

ಎಂಬುದನ್ನು ಸ್ವಾರಸ್ಯವಾಗಿ ವಿವರಿಸಿದ್ದೇನೆ. ನಾಲ್ಕನೇ ಅಧ್ಯಾಯನದಲ್ಲಿ ದೀಪಾವಳಿ ವಿಶೇಷಾಂಕದ ಸಣ್ಣ ಕಥೆಗಳ ಮೌಲ್ಯಯುತವಾದಂತ ಭಾಷೆ, ವಸ್ತು, ಕಥೆಗಳ ಪರಿಚಯ, ಕವಿಗಳ ಬಗ್ಗೆ ಮಾಹಿತಿ ಹಾಗೂ ಆಯ್ದುಕೊಂಡ ಕತೆಗಳ ಧೋರಣೆಗಳನ್ನು ತಿಳಿಸಿದ್ದೇನೆ.

ಐದನೇ ಅಧ್ಯಾಯದಲ್ಲಿ ಬಹುಮಾನಿತ ಕಥೆಗಳ ವೈಶಿಷ್ಟ್ಯ, ತೀರ್ಪುಗಾರರ ಅಭಿಪ್ರಾಯ, ಕತೆಯಲ್ಲಿ ಸ್ಥಿರವಾಗಿ ನೆಲೆಯೂರಿರುವ ಅಂಶಗಳ ಬಗ್ಗೆ ತಿಳಿಸಿದ್ದೇನೆ. ಆರನೇ ಅಧ್ಯಾಯದಲ್ಲಿ ಸಮಾರೋಪದ ಅಂಶಗಳನ್ನು ಅಂದರೆ ಈ ಅಧ್ಯಯನದಿಂದ ದೊರಕುವ ಫಲಿತಗಳನ್ನು ತಿಳಿಸಿದ್ದೇನೆ. ಏಳನೇ ಅಧ್ಯಾಯದಲ್ಲಿ ಈ ಪ್ರಬಂಧದ ರಚನೆಗೆ ಸಹಕಾರಿಯಾದ ಗ್ರಂಥಗಳನ್ನು ಹಾಗೂ ಅಧ್ಯಯನ ಮಾಡಲು ನೆರವಾದ ಲೇಖನಗಳನ್ನು ಹೆಸರಿಸಿದ್ದೇನೆ. ಈ ರೀತಿ ವ್ಯವಸ್ಥಾಬದ್ಧವಾಗಿ ಈ ಪ್ರಬಂಧವನ್ನು ಸಿದ್ಧಗೊಳಿಸಿದ್ದೇನೆ.

ಅಧ್ಯಾಯ-೨

ಪ್ರಸ್ತಾವನೆ

ಕನ್ನಡದ ಸಣ್ಣ ಕತೆಗಳು- ಚಾರಿತ್ರಿಕ ನೆಲೆ

ಕನ್ನಡ ಸಾಹಿತ್ಯ ೧೯೦೦ ವರ್ಷಗಳಷ್ಟು ಪುರಾತನವಾದ ಇತಿಹಾಸವನ್ನು ಹೊಂದಿದೆ. ಹಲ್ಮಿಡಿ ಶಾಸನದಿಂದ ಇಲ್ಲಿಯವರೆಗೆ ಅಂದರೆ ದಲಿತ ಬಂಡಾಯ ಸಾಹಿತ್ಯದವರೆಗೆ ತನ್ನದೇ ಆದ ವಿವಿಧ ಘಟ್ಟಗಳಲ್ಲಿ, ಪ್ರಕಾರಗಳಲ್ಲಿ ತನ್ನತನವನ್ನು, ಸಮಗ್ರತೆಯನ್ನು ತೋರಿಸುತ್ತಾ ಬಂದಿದೆ. ನವೋದಯ ಕಾಲಘಟ್ಟದವರೆಗೂ ಪೌರಾಣಿಕ ವಸ್ತುಗಳನ್ನೇ ಕಾವ್ಯದ ಆಶಯವಾಗಿಟ್ಟುಕೊಂಡಿದ್ದ ಕನ್ನಡ ಸಾಹಿತ್ಯ ನವೋದಯ ಕಾಲದಿಂದೀಚೆಗೆ ಇಂಗ್ಲೀಷ್ ಸಾಹಿತ್ಯದ ಹಾಗೂ ಶಿಕ್ಷಣದ ಪ್ರಭಾವದಿಂದ ನಮ್ಮ ಸೃಜನಶೀಲ ಬರಹಗಾರರ ಆಲೋಚನಾ ಕ್ರಮಗಳಿಂದ ಹೊಸ ಹೊಸ ವಸ್ತುಗಳನ್ನು ಹಾಗೂ ಪ್ರಕಾರಗಳನ್ನು ಕಂಡುಕೊಂಡು ಸಾಹಿತ್ಯ ಪ್ರಕಾರಗಳ ಪ್ರತಿಯೊಂದು ಮೂಲೆಯನ್ನು ಕೆದಕುವ, ವಿಮರ್ಶಿಸುವ, ಪ್ರಶ್ನಿಸುವ ಹಂತಕ್ಕೆ ಇಂದು ಬೆಳೆದು ನಿಂತಿದೆ.

ನವೋದಯ ಕಾಲಘಟ್ಟದಲ್ಲಿ ಕಂಡುಕೊಂಡ ಹೊಸ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕತೆಯೂ ಒಂದು. ಸಣ್ಣ ಕತೆ ಎಂದರೆ ಸಾಮಾಜಿಕವಾಗಿ, ಪ್ರಾಕೃತಿಕವಾಗಿ ಕಂಡು ಕೇಳಿರುವ ಸಂಗತಿಗಳನ್ನು ನವಿರಾಗಿ, ಸರಳವಾಗಿ ಕೊಂಚವಾಗಿ ನಮ್ಮ ಮುಂದಿಡುವ ಸಾಹಿತ್ಯ ಪ್ರಕಾರವೇ ಸಣ್ಣಕತೆ, ಸಣ್ಣಕತೆಗಳು ಅರ್ಧಗಂಟೆ, ಒಂದು ಗಂಟೆ, ಅಥವಾ ಒಂದೂವರೆಗಂಟೆಯೊಳಗೆ ಓದಿ ಮುಗಿಸುವಂತಹ ಪ್ರಸಂಗಗಳಾಗಿರುತ್ತವೆ. ಸಣ್ಣ ಕತೆಗಳು ವಿವರಿಸುವ ಪ್ರಸಂಗಗಳು ಚಿಕ್ಕದಾಗಿ ಅರ್ಥಬದ್ಧವಾಗಿ, ಸ್ವಾರಸ್ಯವಾಗಿ ಓದುಗರ ಮನಸ್ಸಿಗೆ ತಟ್ಟುವಂತೆ ವಿವರವಾಗಿರುತ್ತವೆ. ಪ್ರಾರಂಭದ ಹಂತದಲ್ಲಿ ಸಣ್ಣಕತೆಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ್ದರಿಂದ ಸಣ್ಣಕತೆಗಳನ್ನು 'ವೃತ್ತ ಪತ್ರಿಕೆಗಳ ಕೂಸು' ಎಂದು ಕರೆಯುತ್ತಾರೆ.

ಸಣ್ಣ ಕತೆಗೆ ಸಂಬಂಧಿಸಿದಂತ ವ್ಯಾಖ್ಯಾನಗಳು

ಸಣ್ಣಕತೆ ಎಂಬ ಪೆದವನ್ನು ನಾವು ಇಂಗ್ಲೀಷನ 'Short story 'ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತೇವೆ.

- **'ಎಡ್ಗರ್‌ಅಲನ್‌ಪೋ'** ರವರು ಹೇಳುವಂತೆ –ಸಣ್ಣಕತೆ ಓದಿ ಮುಗಿಸಲು ಅರ್ಧಗಂಟೆ –ಯಿಂದ ಒಂದು ಗಂಟೆಬೇಕಾಗುವ ಗದ್ಯಕಥನ ಎಂದು ಹೇಳಿದ್ದಾರೆ.
- **'ಕುವೆಂಪು'** ರವರ ಪ್ರಕಾರ – ಸಣ್ಣಕತೆ ಸಾವಿನ ಸುದ್ದಿಯನ್ನು ತೆಗೆದುಕೊಂಡು

ಹೋಗುವ ಹಾಗೆ ಎಂದಿದ್ದಾರೆ.

ಈ ರೀತಿಯಾಗಿ ಅನೇಕ ವಿದ್ವಾಂಸರು ತಮ್ಮದೇ ಆದಂತಹ ವ್ಯಾಖ್ಯಾನಗಳನ್ನು ನೀಡುತ್ತಾರೆ. ಒಂದೇ ಬಾರಿಗೆ ಓದಿಮುಗಿಸುವ ಕತೆಯನ್ನು ನಾವು ಸಣ್ಣಕತೆ ಎನ್ನಬಹುದು. ಈ ದಿನಗಳಲ್ಲಿ ಜನರು ಕೆಲಸದ ಒತ್ತಡಗಳಲ್ಲಿ ಸಿಲುಕಿರುವುದರಿಂದ, ಕಾದಂಬರಿಗಳನ್ನು ಹಾಗೂ ನೀಳ್ಗತೆಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ. ಸಣ್ಣ ಕತೆಗಳು ಇಂದು ಓದುಗರನ್ನು ಸೆಳೆಯುವ ಅವರ ಮನಸ್ಸನ್ನು ಸಂತೃಪ್ತಿಗೊಳಿಸುವ ಕೆಲಸವನ್ನು ಮಾಡುತ್ತಿವೆ.

ಪ್ರೇರಣೆ ಮತ್ತು ಪ್ರಭಾವ

ನವೋದಯ ಪೂರ್ವಕಾಲದಲ್ಲಿ ಪಾಶ್ಚಾತ್ಯ ಸಾಹಿತ್ಯದಿಂದ ಹಾಗೂ ಶಿಕ್ಷಣದಿಂದ ಪ್ರೇರಣೆಗೊಂಡಂತಹ ಅನೇಕ ಕನ್ನಡ ಓದುಗರು ಪಾಶ್ಚಾತ್ಯ ಸಾಹಿತ್ಯದಲ್ಲಿರುವಂತೆ ನಮ್ಮಲ್ಲೂ ಸಣ್ಣಕತೆಗಳು ರಚನೆಯಾಗಬೇಕೆಂದು ಬಯಸಿ ಪಾಶ್ಚಾತ್ಯ ಕತೆಗಳನ್ನು ಓದಿಕೊಂಡು ಹೊಸ ಚಿಂತನೆಗಳತ್ತ ತಮ್ಮ ಗಮನವನ್ನು ಹರಿಸಿದರು. ಪಾಶ್ಚಾತ್ಯ ಸಾಹಿತ್ಯ ನಮ್ಮ ಮೇಲೆ ಪ್ರಭಾವ ಬೀರುವುದಕ್ಕೂ ಮೊದಲು ವಡ್ಡಾರಾಧನೆ (ಶಿವಕೋಟ್ಯಾ ಚಾರ್ಯ) ಪಂಚತಂತ್ರದಕತೆಗಳು (ದುರ್ಗಸಿಂಹ) ಈ ಕೃತಿಗಳಲ್ಲಿ ಸಣ್ಣಕತೆಗಳು ಕಂಡು ಬಂದರೂ ಅವು ಕೇವಲ ಒಂದು ಧಾರ್ಮಿಕ ಜೀವನದ ಸತ್ವವನ್ನು ಹಾಗೂ ಅಂದಿನ ಕಾಲದಲ್ಲಿದ್ದ ಸಂಸ್ಕೃತ ಭೂಯಿಷ್ಠವಾದ ಶಿಷ್ಠ ಭಾಷೆಯನ್ನು ಬಳಸುತ್ತಿದ್ದರು. ಇವರು ಅಂದಿನ ಕಾಲದ ಸಾಮಾಜಿಕ ಸಂಗತಿಗಳನ್ನು, ಜನರ ಜೀವನ ವಿಧಾನಗಳನ್ನು ತಮ್ಮ ಕತೆಗಳಲ್ಲಿ ಬಿಂಬಿಸದೇ ಹೋಗಿರುವುದನ್ನು ಕಾಣಬಹುದು.

ಕನ್ನಡ ಸಣ್ಣಕತೆಗಳ ಮೇಲೆ ಪ್ರಭಾವನ್ನು ಬೀರಿದ ಪ್ರಮುಖ ಪಾಶ್ಚಾತ್ಯ ಬರಹಗಾರರೆಂದರೆ ಆಲ್ಬರ್ಟ್‌ಕಮು, ಫ್ರಾನ್ಜಕಾಫ್ಕಾ, ಬಾಲ್ಜಾಕ್, ವಾಲ್ಟರ್‌ಸ್ಕಾಟ್, ಲಿಯೋಟಾಲ್ ಸ್ಟಾಯ್ ಮೊದಲಾದ ಪ್ರಸಿದ್ಧ ಬರಹಗಾರರು ಪ್ರಭಾವ ಬೀರಿರುವುದನ್ನು ನಾವು ಕಾಣುತ್ತೇವೆ. ಇವರು ಬರೆದಂತಹ ಕತೆಗಳಿಂದ ಹಾಗೂ ಕಥಾವಸ್ತುಗಳಿಂದ ಪ್ರಭಾವಿತಗೊಂಡು ಸಣ್ಣಕತೆಗಳನ್ನು ರಚಿಸಲು ಕನ್ನಡ ಬರಹಗಾರರು ಮುಂದಾದರು. ಅಂತಹ ಪ್ರಮುಖ ಬರಹಗಾರರೆಂದರೆ– ಪಂಜೆ ಮಂಗೇಶರಾಯರು, ಎಂ.ಎನ್. ಕಾಮತರು, ಕೆರೂರು ವಾಸು ದೇವಾಚಾರ್ಯರು ಹಾಗೂ ಕನ್ನಡ ಸಣ್ಣಕತೆಗಳಿಗೆ ಹೊಸ ರೂಪವನ್ನು ತಂದು ಕೊಟ್ಟ, ಪ್ರಮುಖರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರನ್ನು ಪ್ರಮುಖವಾಗಿ ಗುರುತಿಸಬಹುದು.

ಬೆಳೆದು ಬಂದ ಬಗೆ

ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿ ಹುಟ್ಟಿಕೊಂಡ ಸಣ್ಣಕತಾ ಸಾಹಿತ್ಯ ಪ್ರಕಾರ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಹೀಗೆ ಐದು ಸಾಹಿತ್ಯ ಘಟ್ಟಗಳ ಮೂಲಕ ಬೆಳೆದು ಬಂದು ಇಂದು ತನ್ನದೇ ಆದ ಹೊಸ ಪರಂಪರೆಯನ್ನು ಹುಟ್ಟು ಹಾಕಿರುವುದನ್ನು ನಾವು ಕಾಣುತ್ತೇವೆ.

❖ ನವೋದಯ ಪೂರ್ವ (೧೮೭೦-೧೯೨೦)

ನವೋದಯ ಪೂರ್ವಕಾಲವನ್ನು ನಾವು ಹೊಸಗನ್ನಡ ಸಾಹಿತ್ಯ ಪ್ರಕಾರಗಳ ಸಿದ್ದತಾ ಹಂತವೆನ್ನಬಹುದು. ಏಕೆಂದರೆ ಈ ಹಂತದಲ್ಲಿಯೇ ಎಲ್ಲಾ ಪ್ರಕಾರಗಳು ಸಣ್ಣದಾಗಿ ಕಾಣಿಸಿಕೊಂಡದ್ದು, ಸಣ್ಣಕತೆಯು ೧೯೦೦ರ ಹೊತ್ತಿಗೆ ಪಂಜೆಮಂಗೇಶರಾಯರು 'ಸುಹಾಸಿನಿ' ಎಂಬ ಮಾಸ ಪತ್ರಿಕೆಯಲ್ಲಿ ಮೊಟ್ಟ ಮೊದಲಬಾರಿಗೆ ತಮ್ಮ ಕತೆಗಳಾದ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕತಂದೆ' ಎಂಬ ಎರಡು ಕತೆಗಳನ್ನು ಪ್ರಕಟಿಸಿದರು. ಎಂ. ಎಸ್. ಕಾಮತರು ಇಂಗ್ಲೀಷ್ ಭಾಷೆಯಲ್ಲಿ ಪ್ರಸಿದ್ಧ ಪತ್ತೇದಾರ ಷರ್ಲಾಕ್ ಹೋಮ್ಸ್ ನಾಯಕನಾದ ಕತೆಗಳಲ್ಲಿ ಕೆಲವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದೇ ರೀತಿ ಸ್ವತಂತ್ರ ಕತೆಗಳನ್ನು ರಚನೆ ಮಾಡಿದ್ದಾರೆ. ಪ್ರಮುಖ ವಾದವೆಂದರೆ 'ಕದ್ದವರು ಯಾರು'?, 'ಆ ಮಗು', 'ಅಂದಿನ ಆವೂರು', 'ಆವೂರ ಮಠ', ಮುಂತಾದವು.

ಕೆರೂರು ವಾಸುದೇವಾಚಾರ್ಯರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಪತ್ತೇದಾರಿ ಕತೆಗಳನ್ನು ಬರೆದಿದ್ದಾರೆ. ಇವರ ಪ್ರಮುಖ **ಕಥಾ ಸಂಕಲನಗಳು** –ಪ್ರೇಮ ವಿಜಯ, ತೊಳೆದ ಮುತ್ತು, ಬೆಳಗಿದ ದೀಪಗಳು. ಇವರ **ಪತ್ತೇದಾರಿ ಕತೆಗಳು**– 'ರಾಖಿ ಬಂಧನ', 'ಬಂಧುತ್ವ', 'ಪ್ರಣಯ ದರ್ಪಣ', 'ಶಿಲ್ಪಗನ ಶಿಲಾಮೂರ್ತಿ' **ಸಾಮಾಜಿಕ ಕತೆಗಳು**– 'ಮಲ್ಲೇಶಿಯ ನಲ್ಲೆಯರು', 'ಪ್ರಕೃತಿ ಬಲ', ಮನೆ ಮನೆಯ ಸಮಾಚಾರ. **ಐತಿಹಾಸಿಕ ಕತೆಗಳು** 'ನರಗುಂದದ ಬಾಯಿ', 'ನೂರು ಜಹಾನ', 'ಸಿಕಂದರ ಬಾದಷಹ', ಮಹಾರಾಣ ಪ್ರತಾಪಸಿಂಹ ಮುಂತಾದವು.

ಮಾಸ್ತಿಯವರು ಸಣ್ಣಕತೆಗಳನ್ನು ಗಂಭೀರ ಜೀವನ ಚಿಂತನೆಯ ಮಾಧ್ಯಮಾವನ್ನಾಗಿ ಮಾಡಿ ಭಾಷೆಯನ್ನು ಅದಕ್ಕೆ ಹದಗೊಳಿಸಿದರು. ಇವರ **ಪ್ರಮುಖ ಕತೆಗಳೆಂದರೆ**– ಗೌತಮಿ ಹೇಳಿದ ಕತೆ, ಕೃಷ್ಣಮೂರ್ತಿಯ ಹೆಂಡತಿ, ವೆಂಕಟಶಾಮಿಯ ಪ್ರಣಯ, ಮಸುಮತ್ತಿ, ಮೊಸರಿನ ಮಂಗಮ್ಮ, ಜ್ಯೋಗ್ಯೋರ ಅಂಜಪ್ಪನ ಕೋಳಿ ಕತೆ, ವಿಚಿತ್ರ ಪ್ರೇಮ

ಮುಂತಾದವು. ಇವರು ೧೯೧೧ ರಿಂದ ೧೯೨೦ರಲ್ಲಿ ಪ್ರಕಟಗೊಂಡ ಕತೆಗಳಲ್ಲಿ ಪ್ರಮುಖ –ವಾದವು ರಂಗಪ್ಪನ ಮದುವೆ. ರಂಗಪ್ಪನ ದೀಪಾವಳಿ ಮುಂತಾದವು.

❖ ನವೋದಯ ಕಾಲಘಟ್ಟ (೧೯೨೦ ರಿಂದ ೧೯೪೫)

ನವೋದಯ ಕಾಲಘಟ್ಟದಲ್ಲಿ ಭಾವಗೀತೆಯಂತೆ ಸಣ್ಣಕತೆಯೂ ಪ್ರಮುಖವಾಗಿ ಗುರುತಿಸಿಕೊಂಡವನ್ನು ನಾವು ಕಾಣಬಹುದು. ಈ ಕಾಲದ ಕತೆಗಾರರು ಮನುಷ್ಯನ ಹಿರಿಮೆಯನ್ನು. ಅವನ ಬಾಳಿನ ಮೌಲ್ಯಗಳನ್ನು, ತಮ್ಮ ಕತೆಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾರೆ. ಕುವೆಂಪುರವರ 'ಧನ್ವಂತರಿಯ ಚಿಕಿತ್ಸೆ' ಯಂತ ಭಾರತದ ಬಡವರ ಘೋರ ಕಷ್ಟಗಳನ್ನು ಚಿತ್ರಿಸುವ ಕತೆಗಳನ್ನು ಬರೆದರು. ಬೇಂದ್ರೆಯವರ 'ನಿರಾಭರಣ ಸುಂದರಿ' ಕಥಾ ಸಂಕಲನವನ್ನು ಹೊರ ತರುತ್ತಾರೆ. ಬೆಟಗೇರಿ ಕೃಷ್ಣಶರ್ಮ, ದೇವುಡು ನರಸಿಂಹಶಾಸ್ತ್ರಿ, ಸಿ.ಕೆ. ವೆಂಕಟರಾಮಯ್ಯ, ಟೀಂಗ್ಸೆ ಗೋವಿಂದ ರಾವ್, ರಂ. ಶ್ರೀ ಮುಗಳಿಯವರು

ಒಳ್ಳೆಯ ಕತೆಗಳನ್ನು ಕಾಣಿಕೆಯಾಗಿ ನೀಡಿದ್ದನ್ನು ಗಮನಿಸಬಹುದು. ಬೆಟಗೇರಿ ಕೃಷ್ಣಶರ್ಮರಲ್ಲಿ ಮಾಸ್ತಿಯವರ ಕತಾಶೈಲಿಯನ್ನು ನಾವು ಮತ್ತೆ ಕಾಣಬಹುದು. ಅವರ ಕತೆಗಳಲ್ಲಿ ಭಾವತೀವ್ರತೆ ದುಃಖ ನಲಿವು, ಅನುರಾಗ ಎಲ್ಲವೂ ಸಹ ಮಾಸ್ತಿಯವರ ಕತಾಶೈಲಿಯವೇ, ಇವರ ಪ್ರಮುಖ ಕತೆಗಳೆಂದರೆ 'ನಾನುಕೊಂದ ಹುಡುಗಿ', 'ಜೊಚ್ಚಲು ಸಂಭ್ರಮ', 'ಮಾಟಗಾತಿ', 'ಹೆಂಡತಿಯ ಕಾಗದ', ಮೊದಲಾದವನ್ನು ಗುರುತಿಸಬಹುದು. ಎಂ.ವಿ. ಸೀತಾರಾಮಯ್ಯನವರು ಮಧ್ಯಮ ವರ್ಗದ ಜನರ ಜೀವನಗಳ ಕಷ್ಟ ಕಾರ್ಪಣ್ಯಗಳನ್ನು ಆ ಆವರಣದಲ್ಲೆ ಅರಳುವ ಅನುಕಂಪವನ್ನು ಒಳ್ಳೆಯ ತನವನ್ನು ಚಿತ್ರಿಸಿದ್ದಾರೆ. ಅದೇ ರೀತಿ ಜಿ.ಪಿ.ರಾಜರತ್ನಂ ರವರು ಒಳ್ಳೆಯ ಹನಿಗತೆಗಳನ್ನು ಕೊಡುಗೆಯಾಗಿ ನೀಡಿದರು.

ಕೊಡಗಿನ ಗೌರಮ್ಮ, ಚದುರಂಗ, ತ್ರಿವೇಣಿ, ಶ್ಯಾಮಲಾದೇವಿ, ಕೃಷ್ಣಕುಮಾರ ಕಲ್ಲೂರ್, ಸಿ.ಕೆ. ನಾಗರಾಜರಾವ್, ಎಲ್. ಎಸ್. ಶೇಷಗಿರಿರಾವ್, ಎನ್. ಸೂರಪ್ಪ, ಎಂ. ನರೇಂದ್ರಬಾಬು, ದೊಡ್ಡೇರಿ ವೆಂಟಕಗಿರಿರಾವ್, ಶ್ರೀನಿವಾಸ ಹಾವನೂರ, ಹಿರೇಮಲ್ಲೂರ ಈಶ್ವರನ್, ದ.ಬಾ. ಕುಲಕರ್ಣಿ, ಮಿರ್ಜಿ ಅಣ್ಣಾರಾಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಈ ರೀತಿಯಾಗಿ ನವೋದಯ ಕಾಲಘಟ್ಟದಲ್ಲಿ ಪ್ರಮುಖ ಕತೆಗಾರರನ್ನು ಹೆಸರಿಸಬಹುದು.

❖ ಪ್ರಗತಿಶೀಲ ಸಾಹಿತ್ಯ (೧೯೪೫-೧೯೫೦)

ಈ ಕಾಲಘಟ್ಟ ಕೆಲವೇ ವರ್ಷಗಳವರೆಗೆ ಅಸ್ತಿತ್ವದಲ್ಲಿದ್ದರೂ ತನ್ನದೇ ಆದಂತಹ ಪ್ರಭಾವವನ್ನು ಸಾಹಿತ್ಯದ ಮೇಲೆ ಬೀರುತ್ತದೆ. ನವೋದಯ ಸಾಹಿತ್ಯದ ದೋರಣೆಗಳನ್ನು ಖಂಡಿಸಿ ಸಮಾಜದಲ್ಲಿದ್ದಂತಹ ಶೋಷಣೆಯ ವಿರುದ್ಧವಾಗಿ ತಲೆ ಎತ್ತುತ್ತದೆ. ಈ ಸಾಹಿತ್ಯ ಪ್ರಕಾರದ ಪ್ರಮುಖ ಅಭಿವ್ಯಕ್ತಿ ಮಾಧ್ಯಮ ಸಣ್ಣಕತೆ ಮತ್ತು ಕಾದಂಬರಿಗಳಾಗಿವೆ. ಪ್ರಾರಂಭದಲ್ಲಿ ಅ.ನ.ಕೃಷ್ಣರಾಯರು ಪ್ರಗತಿಶೀಲ ದೃಷ್ಟಿಕೋನಗಳನ್ನು 'ಕಾಮನ ಬಿಲ್ಲು' ಕಥಾಸಂಕಲನದಲ್ಲಿ ಹೊರತರುತ್ತಾರೆ. ೧೯೩೨ ರಲ್ಲಿ ಪ್ರಕಟವಾದ ಭಾರತೀಯರ 'ಮೋಚಿ', ೧೯೩೮ರಲ್ಲಿ ಬಂದ ಕೊರಡ್ಕಲ್ ಶ್ರೀನಿವಾಸರಾವ್‌ರವರ 'ಧನಿಯರ ಸತ್ಯನಾರಾಯಣ' ಕಥೆಗಳು ಬಹುಶಃ ಕನ್ನಡದಲ್ಲಿ ನಿಜವಾದ ಮಾರ್ಕ್ಸ್‌ವಾದಿ ನೆಲೆಯ ಸಣ್ಣಕತೆಗಳು. ಬಸವರಾಜ ಕಟ್ಟಿಮನಿಯವರ 'ಗಿರಿಜಾ ಕಂಡ ಸಿನಿಮಾ', ನಿರಂಜನರ 'ಕೊನೆಯ ಗಿರಾಕಿ', ಚದುರಂಗರ 'ಶವದ ಮನೆ', 'ನಾಲ್ಕು ಮೊಳ ಭೂಮಿ', ತರಾಸು ರವರ ೦-೦=೦ ಮುಂತಾದವು ಪ್ರಗತಿಶೀಲ ಹಿನ್ನಲೆಯ ಪ್ರಮುಖ ಕತೆಗಳಾಗಿವೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಹಳ್ಳಿಯ ಜೀವನದ ಪರಿಪೂರ್ಣ ಅಂಶವನ್ನು ತಮ್ಮ ಕತೆಗಳ ಮೂಲಕ ಕಟ್ಟಿ ಕೊಡುತ್ತಾರೆ. ಪ್ರಮುಖ ಕತೆಗಳೆಂದರೆ-'ಭೂತಯ್ಯನ ಮಗ ಅಯ್ಯು', 'ಬೆಸ್ತರ ಕರಿಯ', 'ಗಂಡು ಬೀರಿ ಹೊಸಬಿ', 'ಕೋರ್ಟಿನಲ್ಲಿ ಗೆದ್ದ ಎತ್ತು' ಮುಂತಾದವು. ಈ ರೀತಿಯಾಗಿ ಈ ಕಾಲಘಟ್ಟದ ಸಣ್ಣಕತೆಗಳು ದೃಷ್ಟ ಸಮಾಜದ ಶೋಷಣೆಗೆ ಸಿಕ್ಕಿ ನಲುಗಿದವರ, ತುಳಿತಕ್ಕೆ ಒಳಗಾದವರ ಪಾಡನ್ನು ಓದುಗರ ಕಣ್ಣಿಗೆ ಕಟ್ಟುವಂತೆ ಚಿತ್ರೀಕರಿಸುತ್ತವೆ.

❖ ನವ್ಯ ಸಾಹಿತ್ಯ (೧೯೫೦-೧೯೭೦)

ಇಂಗ್ಲೀಷ್‌ನ 'Modernism' ಗೆ ಸಂವಾದಿಯಾಗಿ ನಾವು ನವ್ಯ ಎನ್ನುವಂತಹ ಪದವನ್ನು ಬಳಸುತ್ತೇವೆ. ಈ ಸಾಹಿತ್ಯ ಪಂಥ ೧೯೫೦ರಲ್ಲಿ ವಿ. ಕೃ. ಗೋಕಾಕರು ನವ್ಯತ್ವವನ್ನು ಕುರಿತು ಮಾಡಿದ ಧಾರವಾಡ ಕೇಂದ್ರದ ಬಾನುಲಿ ಭಾಷಣವೇ ಇದರ ಆರಂಭ. ಈ ಕಾಲ ಘಟ್ಟದ ಕತಾ ವಸ್ತುವಿನಲ್ಲಿ ಮನುಷ್ಯನ ಮನಸ್ಸಿನ ಆಸಕ್ತಿ, ಅನುಭವದ ವಿಶ್ಲೇಷಣೆಯನ್ನು ಕಾಣಬಹುದು.

ನವ್ಯ ಕತೆಗಳ ಆದ್ಯ ಪ್ರವರ್ತಕರೆಂದರೆ ರಾಜಲಕ್ಷ್ಮೀ ಎನ್. ರಾವ್, ತ.ರಾ.ಸು, ರಾಮಚಂದ್ರ ಶರ್ಮ, ಕೆ. ಸದಾಶಿವ, ರಾಜಲಕ್ಷ್ಮಿ ಎನ್. ರಾವ್. ರವರ ಆವೇಮರಿಯಾ

ತ.ರಾ.ಸು ರವರ '೦-೦=೦', ರಾಮಚಂದ್ರ ಶರ್ಮರ 'ಸೆರಗಿನ ಕೆಂಡ', ಕೆ. ಸದಾಶಿವರ 'ನಲ್ಲಿಯಲ್ಲಿ ನೀರು ಬಂದಿತು' ಎಂಬ ಕತೆಗಳು ನವ್ಯತೆಗೆ ಹೊಸ ದಾರಿಯನ್ನು ಮಾಡಿಕೊಟ್ಟವು. ಈ ಕಾಲ ಘಟ್ಟದ ಪ್ರಮುಖ ಕತೆಗಳು ಹಾಗು ಕತೆಗಾರರೆಂದರೆ. ಯು.ಆರ್. ಅನಂತಮೂರ್ತಿ ಇವರ ಕತೆಗಳಲ್ಲಿ ಪರಂಪರಾಗತವಾಗಿ -ಬಂದ ಮೌಲ್ಯಗಳ ಪರೀಕ್ಷೆಯನ್ನು ಕಾಣಬಹುದು. ಅಂತಹ ಕತೆಗಳೆಂದರೆ ಪ್ರಕೃತಿ, ಪ್ರಶ್ನೆ, ಖೋಜರಾಜ, ಕ್ಲಿಪ್ ಜಾಯಿಂಟ್, ಕಾರ್ತೀಕ, ಘಟಶ್ರಾದ್ಧ, ವ್ರತ ಮುಂತಾದವು. ಪಿ. ಲಂಕೇಶರ ಕತೆಗಳಲ್ಲಿ ಸಂಕೇತದ ಬಳಕೆ ಬಹಳ ಸ್ಪಷ್ಟವಾಗಿರುವುದನ್ನು ನಾವು ಕಾಣಬಹುದು. ಇವರ ಪ್ರಮುಖ ಕತೆಗಳೆಂದರೆ-ವಾಮನ, ನಾನಲ್ಲ (ಕಥಾಸಂಕಲನ), ಉಮಾಪತಿಯ ಸ್ಕಾಲರ್‌ಶೀಪ್ ಯಾತ್ರೆ ಮಾರಲಾಗದ ನೆಲ, ಕಲ್ಲುಕರಗುವ ಸಮಯ ಹಾಗೂ ಇತರ ಕಥಾ ಸಂಕಲನಗಳಿಂದ ಹಾಗೂ ಕತೆಗಳಿಂದ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಶಾಂತಿನಾಥ ದೇಸಾಯಿ ಯವರ ಕತೆಗಳಲ್ಲಿ ಉದ್ವೇಗವಿಲ್ಲ ಹಾಗೂ ಪರಿಸರಕ್ಕೆ ಹೊಂದಿಕೊಳ್ಳಲಾಗದ ವ್ಯಕ್ತಿತ್ವ ಇವರ ಕತೆಗಳಲ್ಲಿ ಬಿಚ್ಚಿಕೊಳ್ಳುತ್ತವೆ. ಇವರ ಪ್ರಮುಖ ಕತೆಗಳು 'ಕ್ಷಿತಿಜ', ಮಂಜುಗಡ್ಡೆ, ದಂಡೆ, ರಾಕ್ಷಸ, ಪರಿವರ್ತನೆ ಮುಂತಾದವು. ಈ ಕಾಲಘಟ್ಟದಲ್ಲಿ ಗುರುತಿಸಿ ಕೊಂಡ ಇತರ ಪ್ರಮುಖ ಕತೆಗಾರರೆಂದರೆ, ಗೀರಡ್ಡಿ ಗೋವಿಂದರಾಜು. ಜಿ.ಟಿ. ರಾಘವ, ಶ್ರೀಕ್ರಷ್ಣ ಆಲನಹಳ್ಳಿ, ವೀಣಾಶಾಂತೇಶ್ವರ್, ಚನ್ನವೀರ ಕಣವಿ, ಯಶವಂತ ಚಿತ್ತಾಲ, ಕೆ. ಮರುಳಸಿದ್ಧಪ್ಪ, ಎ.ಕೆ. ರಾಮಾನುಜನ್, ಹ.ಮಾ. ನಾಯಕ ಮುಂತಾದವರನ್ನು ಕಾಣಬಹುದು.

❖ ದಲಿತ ಬಂಡಾಯ ಸಾಹಿತ್ಯ (೧೯೭೦....ರಿಂದೀಚೆಗೆ)

ದಲಿತ ಬಂಡಾಯ ಸಾಹಿತ್ಯವು ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್ ವಾದದಿಂದ ಪ್ರೇರಣೆ ಹೊಂದಿ, ಆಂದ್ರದ ವಿರಸಂ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಕರ್ನಾಟಕದ ದಲಿತ ಕಲಾವಿದರ ಹಾಗೂ ಲೇಖಕರ ಒಕ್ಕೂಟ, ಬೂಸಾ ಪ್ರಕರಣ ಹೀಗೆ ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು.

ದಲಿತ ಸಾಹಿತ್ಯದ ಹುಟ್ಟನ್ನು ನಾವು ಮೊದಲು ಗುರುತಿಸುವುದು ದೇವನೂರು ಮಹಾದೇವರವರ 'ದ್ಯಾವನೂರು' ಕಥಾಸಂಕಲನದಿಂದ. ಈ ಕೃತಿ ದಲಿತ ಓದುಗರನ್ನು ಎಚ್ಚೆತ್ತು ಕೊಳ್ಳುವಂತೆ ಮಾಡಿ ಹಾಗೂ ಗ್ರಾಮ್ಯ ಭಾಷೆಯನ್ನು ದಲಿತ ಕೇರಿಗಳ ಚಿತ್ರಣವನ್ನು ಅವರ ಜೀವನ ವಿಧಾನಗಳನ್ನು ಕ್ರಾಂತಿಕಾರಿ ರೂಪದಲ್ಲಿ ಹೊರಹಾಕುತ್ತದೆ.

ಬೆಸಗರಳ್ಳಿ ರಾಮಣ್ಣನವರು ಪ್ರವೃತ್ತಿಯಲ್ಲಿ ಕಥೆಗಾರರಾಗಿ ನಮ್ಮ ಕತೆಗಳಲ್ಲಿ ಮಂಡ್ಯ ಜಿಲ್ಲೆಯ ಗ್ರಾಮೀಣ ಸೊಗಡನ್ನು ತುಂಬಿಕೊಡುತ್ತಾರೆ. ಈ ಘಟ್ಟದ ಕತೆಗಾರರ ವಸ್ತುಗಳೆಂದರೆ ಶೋಷಣೆ, ಹೋರಾಟ, ಬಡತನ, ಪ್ರೇಮ, ಕ್ರೌರ್ಯ ಇವೇ ಪ್ರಧಾನ ವಸ್ತುಗಳು. ಪ್ರಮುಖ ಕಥಾಸಂಕಲನಗಳು 'ನೆಲದ ಸಿರಿ', 'ಒಂದು ಹುಡುಗನಿಗೆ ಬಿದ್ದ ಕನಸು', 'ಸುಗ್ಗಿ' ಇವು ಪ್ರಮುಖವಾದವು. ಮುಸ್ಲಿಸಂವೇದನೆಯ ಹಿನ್ನೆಲೆಯಲ್ಲಿ ನಾವು ಬೊಳುವಾರ ಮಹಮದ್ ಕುಂಞ ರವರ 'ದೇವರುಗಳ ರಾಜ್ಯದಲ್ಲಿ', 'ಅಂಕ', 'ಆಕಾಶಕ್ಕೆ ನೀಲಿ ಪರದೆ', 'ತುಂಡು ಗೋಡೆ' ಕಥಾಸಂಕಲನಗಳನ್ನು ಗಮನಿಸಬಹುದು. ಸಾರಾ ಅಬೂಬಕರ್ ರವರು ಮುಸ್ಲಿಂ ಸಂವೇದನೆಯನ್ನು ಸ್ತ್ರೀಸಂವೇದನೆಯೊಂದಿಗೆ ಮೇಳೈಸಿ ತಮ್ಮ ಕತೆಗಳನ್ನು ಬರೆಯುತ್ತಾರೆ. ಇವರ ಪ್ರಮುಖ ಕತೆಗಳು 'ಚಪ್ಪಲಿಗಳು', 'ಪಯಣ ಮತ್ತು ಇತರ ಕತೆಗಳು', 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಇವರ ಕತಾಸಂಕಲನಗಳು. ಬಾನುಮುಸ್ತಾಕ್ ರವರ ಕತೆಗಳಲ್ಲೂ ಸಹ ಮುಸ್ಲಿಂ ಸಂವೇದನಾ ಅಂಶಗಳಿರುವುದನ್ನು ಗಮನಿಸಬಹುದು. ಹೀಗೆ ಮುಸ್ಲಿಂ ಲೇಖಕಿಯರು ತಮ್ಮ ಧರ್ಮದಲ್ಲಿರುವ ಹುಳುಕನ್ನು ಕತೆಗಳ ಮೂಲಕ ಹೊರಗೆಳೆಯುತ್ತಾರೆ.

ಕುಂ. ವೀರಭದ್ರಪ್ಪನವರು ತಮ್ಮ ಕತೆಗಳಲ್ಲಿ ಹೈದ್ರಾಬಾದ್, ಕರ್ನಾಟಕದ ಜನರ ಜೀನವ ಮತ್ತು ನೋವು ನಲಿವುಗಳನ್ನು ಬಿತ್ತರಿಸುತ್ತಾರೆ. ಇವರ ಕಥಾಸಂಕಲಗಳು 'ಡೋಮ ಮತ್ತು ಇತರ ಕತೆಗಳು', 'ಭಗವತಿಕಾಡು', 'ನಿಜಲಿಂಗ', 'ಅಪೂರ್ವ ಚಿಂತಾಮಣಿಕತೆ' ಮುಂತಾದವು. ಬರಗೂರು ರಾಮ ಚಂದ್ರಪ್ಪನವರೂ ಸಹ ತಮ್ಮ ಕತೆಗಳಲ್ಲಿ ಬಂಡಾಯದ ಅಂಶಗಳನ್ನು ಸೃಜಿಸುತ್ತಾ ಹೋಗುತ್ತಾರೆ. ಹೀಗೆ ದಲಿತ ಬಂಡಾಯ ಸಾಹಿತ್ಯದಲ್ಲಿ ಗುರುತಿಸಿ ಕೊಂಡ ಪ್ರಮುಖ ಕತೆಗಾರರೆಂದರೆ ಅರವಿಂದ ಮಾಲಗತ್ತಿ, ಮುಳ್ಳೂರ ನಾಗರಾಜ, ಮೊಗಳ್ಳಿಗಣೇಶ್, ದೇವಯ್ಯ ಹರವೆ, ಎಲ್. ಹನುಮಂತಯ್ಯ, ಚೆನ್ನಣ್ಣವಾಲಿಕಾರ, ಕರೀಗೌಡ ಬೀಜನಹಳ್ಳಿ, ಮ.ನಾ.ಜವರಯ್ಯ, ಟಿ.ಸುನಂದ, ಬಿ.ಟಿ. ಲಲಿತಾನಾಯಕ್, ವಿಜಯದಬ್ಬೆ, ಹೀಗೆ ಹಲವು ಪ್ರಮುಖ ಕತೆಗಾರರನ್ನು ನಾವು ಗುರುತಿಸಬಹುದು.

ಈ ರೀತಿಯಾಗಿ ಕನ್ನಡ ಸಣ್ಣಕಥಾ ಸಾಹಿತ್ಯ ಪರಂಪರೆ ನವೋದಯ ಪೂರ್ವದಲ್ಲಿ ಜನಿಸಿ ನಂತರ ನಾಲ್ಕು ಸಾಹಿತ್ಯ ಘಟ್ಟದಲ್ಲಿ ಸಾಗಿ ಬಂದು ಇಂದು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದಂತಹ ವಿಶಿಷ್ಠ ಸ್ಥಾನವನ್ನು ಪಡೆದು ಕೊಂಡಿದೆ. ಪ್ರತಿಯೊಂದು

ಘಟ್ಟದಲ್ಲಿಯೂ ತನ್ನದೇ ಆದ ಒಂದು ಹೊಸ ಹೊಸ ಅಂಶವನ್ನು ಬಿತ್ತರಿಸುತ್ತಾ ಕನ್ನಡ ಸಾಹಿತ್ಯ ತನ್ನದೇ ಆದ ವಿಶಿಷ್ಟ ಸ್ವರೂಪವನ್ನು ಪಡೆದು ಕೊಳ್ಳುವುದಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಅಧ್ಯಾಯ-೩

ಇತ್ತೀಚಿನ ಸಣ್ಣ ಕತೆಗಳು

ಭಾಗ -೧

ಇತ್ತೀಚಿನ ಸಣ್ಣಕತೆಗಳು ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಶೋಷಣೆ ಒಳಪಟ್ಟ ಜನ ಸಮುದಾಯ, ಶೂದ್ರರೆಂದು ಸಮಾಜದಲ್ಲಿ ಗುರುತಿಸಲ್ಪಟ್ಟವರು ಹಾಗೂ ಶತಶತಮಾನಗಳಿಂದ ಪುರುಷನ ಕಪಿಮುಷ್ಟಿಯಲ್ಲಿ ಸಿಲುಕಿ ಈಗ ತಾನೆ ಹೊರಬರುತ್ತಿರುವ ಸ್ತ್ರೀಯರು. ಮೇಲಿನ ಈ ಜನ ಸಮುದಾಯ ತಾವು ತಮ್ಮ ಸುತ್ತಲಿನ ಸಮಾಜದಿಂದ, ಸಮುದಾಯದಿಂದ ಅನುಭವಿಸುತ್ತಿದ್ದ ನೋವನ್ನು ಪ್ರತಿಭಟಿಸುವುದಕ್ಕೆ ಸಾಹಿತ್ಯವನ್ನು ವೇದಿಕೆಯನ್ನಾಗಿ ಮಾಡಿಕೊಂಡರು. ಇವರು ತಮ್ಮ ನೋವುಗಳನ್ನು ಹಾಗೂ ಅಸ್ಥಿತ್ವದಲ್ಲಿದ್ದ ಕೆಟ್ಟ ವ್ಯವಸ್ಥೆಯ ವಿರುದ್ಧ ಬಂಡೆದ್ದು ತಮಗೆ ಈ ಸಮಾಜದಿಂದಾದ ಅವಮಾನಗಳನ್ನು, ತಾವು ಕಂಡು ಕೇಳಿದ್ದನ್ನು ಕತೆ, ಕಾದಂಬರಿ, ಕವಿತೆ, ನಾಟಕ, ಹೀಗೆ ಹಲವಾರು ಪ್ರಕಾರಗಳಲ್ಲಿ ಅಭಿವ್ಯಕ್ತ ಪಡಿಸುತ್ತಾರೆ.

ಪ್ರಮುಖವಾಗಿ ಇತ್ತೀಚಿನ ಕತೆಗಳು ಸ್ತ್ರೀಸಂವೇದನೆಯನ್ನು, ಮುಸ್ಲಿಂ ಸಂವೇದನೆಯನ್ನು, ಮುಸ್ಲಿಂ ಸಂವೇದನೆಯನ್ನು, ದಲಿತ ಸಂವೇದನೆಯನ್ನು ಇಟ್ಟು ಕೊಂಡೇ ರಚನೆಯಾಗುತ್ತಿರುವುದನ್ನು ಕಾಣ -ಬಹುದು. ಈ ಕಾಲದ ಕತೆಗಾರರಿಗೆ ಪ್ರಗತಿಶೀಲ ಕತೆಗಾರರ ಕೆಲವು ಆಶಯಗಳು ಹಾಗೂ ನವೋದಯ ಕಾಲದ, ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಗುತ್ತಿಯಂತಹ ಪಾತ್ರಗಳು, ಕಾರಂತರ 'ಚೋಮನದುಡಿ' ಕಾದಂಬರಿಯ ಚೋಮಂತಹ ಪಾತ್ರಗಳು ಪ್ರೇರಣೆ ನೀಡಿವೆ. ಪ್ರಮುಖ ಕತೆಗಾರರೆಂದರೆ ದೇವನೂರು ಮಹಾದೇವಾ, ಬರಗೂರು ರಾಮಚಂದ್ರಪ್ಪ, ನಟರಾಜ್ ಹುಳಿಯಾರ್, ಕರೀಗೌಡ ಬೀಚನಹಳ್ಳಿ, ಕುಂ. ವೀರಭದ್ರಪ್ಪ, ಕಾ.ತ. ಚಿಕ್ಕಣ್ಣ, ಕಾಳೇಗೌಡನಾಗವಾರ, ಬೆಸಗರಳ್ಳಿ ರಾಮಣ್ಣ, ಬೋಳವಾರು ಮಹಮದ್ ಕಟ್ಪಾಡಿ, ಅಬ್ದುಲ್ ರಶೀದ್, ಗೋವಿಂದಯ್ಯ, ಅರವಿಂದ ಮಾಲಗತ್ತಿ, ಗೀತಾ ನಾಗಭೂಷಣ್, ಭಾನುಮಸ್ತಾಕ್, ಕೇಶವರೆಡ್ಡಿ ಹಂದ್ರಾಳ, ಬಿ.ಟಿ. ಲಲಿತಾನಾಯಕ್, ಜಯಂತ್, ಕಾಯ್ಕಿಣಿ, ಕೊಡ್ಲೆಕೆರೆ, ರಾಘವೇಂದ್ರ ಪಾಟೀಲ, ನೇಮಿಚಂದ್ರ, ವೈದೇಹಿ, ಮುಂತಾದವರನ್ನು ನಾವು ಗುರುತಿಸಬಹುದು.

ಈ ಮೇಲಿನ ಎಲ್ಲಾ ಲೇಖಕರೂ ಸಹ ತಳ ಮೂಲ ಸಮುದಾಯವನ್ನು ಎತ್ತಿಹಿಡಿಯುವ ಅವರ ನೋವನ್ನು ಅಸಹಾಯಕತೆಯನ್ನು ತಮ್ಮ ಕತೆಗಳಲ್ಲಿ ಬಿಂಬಿಸುತ್ತಾ,

ಹೋರಾಟದ ಕಿಚ್ಚ ಅವರಲ್ಲಿ ಮೂಡುವಂತೆ ಮಾಡುತ್ತಾ, ಸಮಾಜದಲ್ಲಿ ಸರ್ಪಾದಿ ಕಾರಿಗಳಂತೆ ಬೀಗುವ ಜನಕ್ಕೆ ಎಚ್ಚರಿಕೆಯನ್ನು ನೀಡುತ್ತಾರೆ.

ದೇವನೂರು ಮಹಾದೇವ ರವರ 'ಮಾರಿಕೊಂಡವರು', 'ಮೂಡಲ ಸೀಮೆಯಲ್ಲಿ ಕೊಲೆಗಿಲೆ' ಮುಂತಾಗಿ', 'ಒಡಲಾಳ' ಕತೆಗಳು ದಲಿತರ ಬದುಕಿನ ಮೂಲ ಸಮಸ್ಯೆಗಳ ದಾರಿದ್ರ್ಯದ ಬದುಕನ್ನು ಮನುಷ್ಯ ಲೋಕದಿಂದ ಹೊರ ಚೆಲ್ಲುತ್ತವೆ. ದೇವನೂರರು ತಮ್ಮ ಕತೆಗಳಲ್ಲಿ ಗ್ರಾಮೀಣ ಭಾಷೆಯನ್ನು, ಗ್ರಾಮಗಳಲ್ಲಿ ಜನರ ಜೀವನ ವಿಧಾನ, ಪರಸ್ಪರ ಅವರಲ್ಲಿರುವ ಹೊಂದಾಣಿಕೆ ಹೀಗೆ ದಲಿತ ಕೇರಿಯ ಪರಿಚಯವನ್ನು ತಮ್ಮ ಕತೆಗಳಲ್ಲಿ ಲೀಲಾಜಾಲವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಇವರು ತಮ್ಮ ಕತೆಗಳಲ್ಲಿ ದಲಿತ ಕೇರಿಗಳನ್ನು ಪರಿಚಯಿಸುವುದರ ಜೊತೆಗೆ ಮೇಲ್ವರ್ಗದ ಜನರಿಗೆ ದಲಿತರ ಜೀವನ ಚಿತ್ರಣವನ್ನು ಅರ್ಥೈಸಿಕೊಳ್ಳುವಂತೆ ಹಾಗೂ ಅವರು ಮೇಲ್ಬರುವುದಕ್ಕೆ ದಾರಿ ಮಾಡಿಕೊಡುವಂತೆ ಒಂದು ಹೆದ್ದಾರಿಯನ್ನು ಸೃಷ್ಟಿಸಿದ್ದಾರೆ. ಬೆಸಗರಹಳ್ಳಿ ರಾಮಣ್ಣನವರ 'ಸುಗ್ಗಿ', 'ಒಂದು ಹುಡುಗನಿಗೆ ಬಿದ್ದ ಕನಸು', 'ನೆಲದ ಸಿರಿ', 'ಗರ್ಜನೆ', 'ಚೆಲುವಯ್ಯನ ಪರಂಗಿ ಗಿಡಗಳು' ಮುಂತಾದವು. ಅದೇ ರೀತಿ ಇವರ ಕತೆಗಳಲ್ಲಿ ಜೀತ ಪದ್ಧತಿಯು ಅತ್ಯಂತ ವಿಶಿಷ್ಟವಾಗಿ ಮೂಡಿ ಬಂದಿರುವುದನ್ನು ನಾವು ಕಾಣಬಹುದು. ಬಡಮಕ್ಕಳನ್ನು ಶ್ರೀಮಂತರು ಜೀತಕ್ಕಿರಿಸಿಕೊಂಡು, ಅವರು ಕೊಡುವಂತಹ ಕಷ್ಟಗಳನ್ನು ಸಹಿಸಿಕೊಂಡು, ಅವರ ಮನೆಯಲ್ಲಿ ಕೆಲಸ ಮಾಡುವುದು. ಅದೇ ರೀತಿ ಜೀತಮುಕ್ತಿಗಾಗಿ ಅವರು ನೆಡೆಸುವಂತಹ ಹೋರಾಟದ ಅಂಶಗಳನ್ನು ತಮ್ಮ ಕಥೆಗಳಲ್ಲಿ ಸ್ವಾರಸ್ಯವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಕುಂ. ವೀರಭದ್ರಪ್ಪ ನವರು ಪ್ರೈಮರಿ ಸ್ಕೂಲ್‌ನ ಶಿಕ್ಷಕರಾದರೂ ಸಹ ಬರವಣಿಗೆಯಲ್ಲಿ ತಮ್ಮ ಪ್ರೌಢಿಮೆಯನ್ನು, ತಮ್ಮ ವ್ಯಕ್ತಿತ್ವವನ್ನು ಸ್ವಾರಸ್ಯವಾಗಿ ತೋರ್ಪಡಿಸಿದ್ದಾರೆ. ಇವರ ಪ್ರಮುಖ ಕಥಾ ಸಂಕಲನಗಳು- 'ಡೋಮ ಮತ್ತು ಇತರ ಕತೆಗಳು', ಭಗವತೀ ಕಾಡು', 'ನಿಜಲಿಂಗ', 'ಸುಶೀಲ', 'ದೇವರ ಹೆಣ', 'ಇನ್ನಾದರೂ ಸಾಯಬೇಕು' ಮುಂತಾದವು. ಇವರು ತಮ್ಮ ಕತೆಗಳಲ್ಲಿ ದಲಿತರ ನೋವು, ಬಡತನ, ಹಸಿವು ಇವುಗಳನ್ನೇ ತಮ್ಮ ಕತೆಗಳಲ್ಲಿ ಹೆಚ್ಚಾಗಿ ಚಿತ್ರಿಸುತ್ತಾರೆ. ದಲಿತ ಜನರು ಹಸಿವನ್ನು ತಾಳಲಾರದೆ. ಊರಿನ ಗೌಡನ ವಿರುದ್ಧ ತಿರುಗಿ ಬೀಳುವಂತಹ ಚಿತ್ರ 'ದೇವರ ಹೆಣ' ಕತೆಯಲ್ಲಿ ಚಿತ್ರಣಗೊಂಡಿರುವುದನ್ನು ನಾವು ಕಾಣಬಹುದು. ಈ ರೀತಿಯಾಗಿ ಇತ್ತೀಚಿನ ದಿನಗಳಲ್ಲಿ ರಚನೆಯಾಗು -ತ್ತಿರುವ ಕತೆಗಳಲ್ಲಿ ನಾವು ಶೋಷಿತರ ನೋವು ಹಾಗೂ ಅವರು ಮಾನಸಿಕವಾಗಿ ಅನುಭವಿಸುವ ಸಂಕಷ್ಟಗಳು, ಇಂತಹ ಬದುಕನ್ನು ಅವರು ಯಾವ ರೀತಿಯಾಗಿ ಎದುರಿಸಿ ನಿಲ್ಲಬೇಕು. ಜೀತಪದ್ದತಿಯಿಂದ ಅವರಿಗಾದ ಅನ್ಯಾಯ ಒಡೆಯನ ಅಡಿಯಾಳಾಗಿ ದುಡಿದು ಆತನ ಶೋಷಣೆಯನ್ನು ತಡೆಯಲಾರದೆ ಒಂದೇ ಬಾರಿಗೆ

ಪ್ರತಿಭಟಿಸಿ ನಿಲ್ಲುವಂತಹ ಅಂಶಗಳನ್ನು ಕಾಣಬಹುದು. ಇಂದಿನ ಸಮಾಜದಲ್ಲಿ ವಿದ್ಯಾವಂತರು ತಾವು ಸಂಪೂರ್ಣವಾಗಿ ತಿಳಿದವರಾಗಿ ಅವರು ಹಿಂದಿನ ಮೌಢ್ಯ ಪದ್ಧತಿಗಳನ್ನೇ ಅನುಸರಿಸುತ್ತಿರುವುದರ ದುರಂತ ಚಿತ್ರಣವನ್ನು ಇತ್ತೀಚಿನ ಕತೆಗಳು ಬಿಂಬಿಸುವುದನ್ನು ನಾವು ಕಾಣಬಹುದಾಗಿದೆ.

ಇತ್ತೀಚಿನ ಸಣ್ಣಕತೆಗಳಲ್ಲಿ ಸ್ತ್ರೀಸಂವೇದನಾ ಅಂಶಗಳನ್ನು ಕಾಣಬಹುದು. ದಲಿತ ಬಂಡಾಯ ಸಾಹಿತ್ಯದ ಪ್ರಮುಖ ದೋರಣೆಯಲ್ಲಿ ಸ್ತ್ರೀಸಂವೇದನೆಯೂ ಒಂದು. ಕತೆಗಳ ಮೂಲಕ ಲೇಖಕಿಯರು ತಮ್ಮ ಹೋರಾಟವನ್ನು ತಾವು ಈ ಪುರುಷ ಸಮಾಜದೆದಿರು ಶತಶತಮಾನಗಳಿಂದ ಅನುಭವಿಸುತ್ತಿರುವ ನೋವನ್ನು, ಕೆಲವು ಧರ್ಮಗಳಲ್ಲಿ ಅಡಗಿರುವ ಕೆಟ್ಟ ಆಚರಣಾ ಪದ್ದತಿಗಳನ್ನು ಬಯಲಿಗೆಳೆಯಲು ಕಥಾ ಸಾಹಿತ್ಯದ ಪ್ರಕಾರ ನೆರವಾಗಿದೆ. ಈಗಿನ ಸಾಮಾಜಿಕ ವ್ಯವಸ್ಥೆ ಪುರುಷನ ಪರವಾಗಿ ಸ್ತ್ರೀಯ ವಿರುದ್ಧವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಸ್ತ್ರೀಯೂ ಈ ಕೆಟ್ಟ ವ್ಯವಸ್ಥೆಯನ್ನು ವಿರೋಧಿಸಿ, ನಾನು ಸಹ ಪುರುಷನಷ್ಟೆ ಸಮಾನಳು, ನಾನು ಕೂಡ ಆತನಂತೆಯೇ ಸ್ವಾತಂತ್ರ್ಯವಾಗಿ ಜೀವಿಸಬೇಕು ಎಂಬ ಅಂಶವನ್ನು ತಮ್ಮ ಕಥೆಗಳ ಮೂಲಕ ವ್ಯಕ್ತಪಡಿಸುತ್ತಾರೆ.

ಬಿ.ಟಿ. ಲಲಿತಾ ನಾಯಕ್ ರವರು ಲಂಬಾಣಿ ಜನಾಂಗದ ಮಹಿಳೆಯಾಗಿ ಆಕೆ ತನ್ನ ಜನಾಂಗದ ಮಹಿಳೆಯರ ನೋವನ್ನು ಮತ್ತು ಅವರ ಸಾಂಸ್ಕೃತಿಕ ಜೀವನವನ್ನು ಸ್ವಾರಸ್ಯವಾಗಿ ವಿವರಿಸಿದ್ದಾರೆ. ಇವರು ತಮ್ಮ ಕತೆಗಳಲ್ಲಿ ಸ್ತ್ರೀ ಸಂವೇದನೆಯ ಜೊತೆಗೆ ಬಂಡಾಯದ ಕಾಳಜಿಯನ್ನು ಇಟ್ಟುಕೊಂಡು ಪ್ರಗತಿ ಹಾದಿಯಲ್ಲಿ ನಡೆದ ಅಪರೂಪದ ಲೇಖಕಿಯಾಗಿದ್ದಾರೆ.

ವೀಣಾ ಶಾಂತೇಶ್ವರ ರವರು ಪುರುಷ ಪ್ರಧಾನ ಸಮಾಜದ ಹಲವು ತೊಡಕುಗಳನ್ನು, ಶೋಷಣೆಯನ್ನು ಗಟ್ಟಿಧ್ವನಿಯಲ್ಲಿ ಪ್ರಶ್ನಿಸುತ್ತಾರೆ. ಇವರು ಬರೆದಿರುವಂತಹ ಕತೆಗಳಲ್ಲಿ ಹಸಿವು, ನೋವು, ಹತಾಶೆ, ಹೆಪ್ಪುಗಟ್ಟಿದ ಅವಮಾನ ಮುಂತಾದ ಹತ್ತು ಹಲವು ವಿಷಯಗಳಿವೆ. ಇವರು ಬರೆದಿರುವ ಕಥಾ ಸಂಕಲನಗಳು 'ಮುಳ್ಳುಗಳು', 'ಕವಲು', 'ಕೊನೆಯ ದಾರಿ', 'ಹಸಿವು' ಇವರ ಎಲ್ಲಾ ಕತೆಗಳು ಪುರುಷ ನಿರ್ಮಿದ ಸ್ತ್ರೀ ಹೆಜ್ಜೆ ಹೆಜ್ಜೆಗೂ ಯಾವ ರೀತಿಯ ಕಷ್ಟಗಳನ್ನು ಪಡುತ್ತಾಳೆ, ಸ್ತ್ರೀಗೆ ಒಳ್ಳೆಯದನ್ನು ಮಾಡುತ್ತೇನೆನ್ನುವ ಪುರುಷ ತನ್ನ ಕಾಮುಖತೆಯನ್ನು ಆಕೆಯ ಮೇಲೆ ಯಾವ ರೀತಿ ತೀರಿಕೊಳ್ಳುತ್ತಾನೆ. ಎಂಬ ಇತ್ಯಾದಿ ಸ್ತ್ರೀಸಂವೇದನಾ ಅಂಶಗಳನ್ನು ತಮ್ಮ ಕತೆಗಳ ಅಶಯವನ್ನಾಗಿಸಿ ಕೊಂಡಿರುವುದನ್ನು ಕಾಣಬಹುದು.

ಪ್ರತಿಭಟಿಸಿ ನಿಲ್ಲುವಂತಹ ಅಂಶಗಳನ್ನು ಕಾಣಬಹುದು. ಇಂದಿನ ಸಮಾಜದಲ್ಲಿ ವಿದ್ಯಾವಂತರು ತಾವು ಸಂಪೂರ್ಣವಾಗಿ ತಿಳಿದವರಾಗಿ ಅವರು ಹಿಂದಿನ ಮೌಢ್ಯ ಪದ್ಧತಿಗಳನ್ನೇ ಅನುಸರಿಸುತ್ತಿರುವುದರ ದುರಂತ ಚಿತ್ರಣವನ್ನು ಇತ್ತೀಚಿನ ಕತೆಗಳು ಬಿಂಬಿಸುವುದನ್ನು ನಾವು ಕಾಣಬಹುದಾಗಿದೆ.

ಇತ್ತೀಚಿನ ಸಣ್ಣಕತೆಗಳಲ್ಲಿ ಸ್ತ್ರೀಸಂವೇದನಾ ಅಂಶಗಳನ್ನು ಕಾಣಬಹುದು. ದಲಿತ ಬಂಡಾಯ ಸಾಹಿತ್ಯದ ಪ್ರಮುಖ ದೋರಣೆಯಲ್ಲಿ ಸ್ತ್ರೀಸಂವೇದನೆಯೂ ಒಂದು. ಕತೆಗಳ ಮೂಲಕ ಲೇಖಕಿಯರು ತಮ್ಮ ಹೋರಾಟವನ್ನು ತಾವು ಈ ಪುರುಷ ಸಮಾಜದೆದಿರು ಶತಶತಮಾನಗಳಿಂದ ಅನುಭವಿಸುತ್ತಿರುವ ನೋವನ್ನು, ಕೆಲವು ಧರ್ಮಗಳಲ್ಲಿ ಅಡಗಿರುವ ಕೆಟ್ಟ ಆಚರಣಾ ಪದ್ದತಿಗಳನ್ನು ಬಯಲಿಗೆಳೆಯಲು ಕಥಾ ಸಾಹಿತ್ಯದ ಪ್ರಕಾರ ನೆರವಾಗಿದೆ. ಈಗಿನ ಸಾಮಾಜಿಕ ವ್ಯವಸ್ಥೆ ಪುರುಷನ ಪರವಾಗಿ ಸ್ತ್ರೀಯ ವಿರುದ್ಧವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಸ್ತ್ರೀಯೂ ಈ ಕೆಟ್ಟ ವ್ಯವಸ್ಯೆಯನ್ನು ವಿರೋಧಿಸಿ, ನಾನು ಸಹ ಪುರುಷನಷ್ಟೆ ಸಮಾನಳು, ನಾನು ಕೂಡ ಆತನಂತೆಯೇ ಸ್ವಾತಂತ್ರ್ಯವಾಗಿ ಜೀವಿಸಬೇಕು ಎಂಬ ಅಂಶವನ್ನು ತಮ್ಮ ಕಥೆಗಳ ಮೂಲಕ ವ್ಯಕ್ತಪಡಿಸುತ್ತಾರೆ.

ಬಿ.ಟಿ. ಲಲಿತಾ ನಾಯಕ್ ರವರು ಲಂಬಾಣಿ ಜನಾಂಗದ ಮಹಿಳೆಯಾಗಿ ಆಕೆ ತನ್ನ ಜನಾಂಗದ ಮಹಿಳೆಯರ ನೋವನ್ನು ಮತ್ತು ಅವರ ಸಾಂಸ್ಕೃತಿಕ ಜೀವನವನ್ನು ಸ್ವಾರಸ್ಯವಾಗಿ ವಿವರಿಸಿದ್ದಾರೆ. ಇವರು ತಮ್ಮ ಕತೆಗಳಲ್ಲಿ ಸ್ತ್ರೀ ಸಂವೇದನೆಯ ಜೊತೆಗೆ ಬಂಡಾಯದ ಕಾಳಜಿಯನ್ನು ಇಟ್ಟುಕೊಂಡು ಪ್ರಗತಿ ಹಾದಿಯಲ್ಲಿ ನಡೆದ ಅಪರೂಪದ ಲೇಖಕಿಯಾಗಿದ್ದಾರೆ.

ವೀಣಾ ಶಾಂತೇಶ್ವರ ರವರು ಪುರುಷ ಪ್ರಧಾನ ಸಮಾಜದ ಹಲವು ತೊಡಕುಗಳನ್ನು, ಶೋಷಣೆಯನ್ನು ಗಟ್ಟಿಧ್ವನಿಯಲ್ಲಿ ಪ್ರಶ್ನಿಸುತ್ತಾರೆ. ಇವರು ಬರೆದಿರುವಂತಹ ಕತೆಗಳಲ್ಲಿ ಹಸಿವು, ನೋವು, ಹತಾಶೆ, ಹೆಪ್ಪುಗಟ್ಟಿದ ಅವಮಾನ ಮುಂತಾದ ಹತ್ತು ಹಲವು ವಿಷಯಗಳಿವೆ. ಇವರು ಬರೆದಿರುವ ಕಥಾ ಸಂಕಲನಗಳು 'ಮುಳ್ಳುಗಳು', 'ಕವಲು', 'ಕೊನೆಯ ದಾರಿ', 'ಹಸಿವು' ಇವರ ಎಲ್ಲಾ ಕತೆಗಳು ಪುರುಷ ನಿಂದ ಸ್ತ್ರೀ ಹೆಜ್ಜೆ ಹೆಜ್ಜೆಗೂ ಯಾವ ರೀತಿಯ ಕಷ್ಟಗಳನ್ನು ಪಡುತ್ತಾಳೆ, ಸ್ತ್ರೀಗೆ ಒಳ್ಳೆಯದನ್ನು ಮ್ಾಡುತ್ತೇನೆನ್ನುವ ಪುರುಷ ತನ್ನ ಕಾಮುಖತೆಯನ್ನು ಆಕೆಯ ಮೇಲೆ ಯಾವ ರೀತಿ ತೀರಿಕೊಳ್ಳುತ್ತಾನೆ. ಎಂಬ ಇತ್ಯಾದಿ ಸ್ತ್ರೀಸಂವೇದನಾ ಅಂಶಗಳನ್ನು ತಮ್ಮ ಕತೆಗಳ ಅಶಯವನ್ನಾಗಿಸಿ ಕೊಂಡಿರುವುದನ್ನು ಕಾಣಬಹುದು.

ಇತ್ತೀಚಿನ ಕನ್ನಡ ಕಥಾ ಸಾಹಿತ್ಯದಲ್ಲಿ ಅನೇಕ ಕವಿಗಳು ಸ್ತ್ರೀಸಂವೇದನೆಯನ್ನು ತಮ್ಮ ಕತೆಗಳಲ್ಲಿ ಪ್ರಧಾನ ಆಶಯವನ್ನಾಗಿಸಿ ಕೊಂಡಿರುವುದನ್ನು ನಾವು ಕಾಣಬಹುದು. ಅಂತಹ ಪ್ರಮುಖ ಲೇಖಕಿಯರೆಂದರೆ ಟಿ. ಸುನಂದ, ಸಾರಾ ಅಬೂಬ್ ಕರ್, ಭಾನುಮಷ್ತಾಕ್, ಹಂಪಾ ನಾಗರಾಜಯ್ಯ, ಕಮಲಾ ಹಂಪನ, ವೇದ ಹೀಗೆ ಮುಂತಾದ ಹಲವು ಲೇಖಕಿಯರು ಸ್ತ್ರೀಸಂವೇದನೆಗೆ ಸಂಬಂಧಿಸಿದ ಅಂಶವನ್ನು ತಮ್ಮದೇ ಆದ ನೆಲಗಟ್ಟಿನಿಟ್ಟುಕೊಂಡು ಚಿಂತಿಸಿದ್ದಾರೆ.

ಮುಸ್ಲಿಂ ಸಂವೇದನೆ, ಇತ್ತೀಚಿನ ಸಣ್ಣಕತೆಗಳಲ್ಲಿ ತನ್ನದೇ ಆದಂತಹ ವಿಶಿಷ್ಟಸ್ಥಾನ ಪಡೆದುಕೊಂಡಿರುವುದನ್ನು ನಾವು ಕಾಣಬಹುದು. ಮುಸ್ಲಿಂ ಲೇಖಕಿಯರು ತಮ್ಮ ಧರ್ಮದಲ್ಲಿ ತಾವು ಕಂಡಂತಹ ತಾವು ಅನುಭವಿಸಿದಂತ ನೋವನ್ನು ಹಿಂಸೆಯನ್ನು ಪುರುಷ ವ್ಯವಸ್ಥೆಯ ಕ್ರೌರ್ಯವನ್ನು ತಮ್ಮ ಕತೆಗಳಲ್ಲಿ ಬಿತ್ತರಿಸುತ್ತಾರೆ. ಪ್ರಮುಖ ಲೇಖಕರೆಂದರೆ ಸಾರಾ ಅಬೂಬ್ ಕರ್, ಬಾನುಮುಷ್ತಾಕ್,ಫಕೀರ್ ಮಹಮದ್ ಕಟ್ಪಾಡಿ ಹೀಗೆ ಹಲವು ಜನ ಮುಸ್ಲಿಂ ಲೇಖಕರು ತಮ್ಮ ಕತೆಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆಯನ್ನು ಕಟ್ಟಿಕೊಡುತ್ತಾರೆ. ಫಕೀರ್ ಮಹಮದ್ ಕಟ್ಪಾಡಿಯವರು ತಮ್ಮ ಕಥಾ ಸಂಕಲನವಾದ 'ನೋಂಬು' ಇದರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳ ಹಿನ್ನೆಲೆಯಲ್ಲಿ ಆ ಪ್ರದೇಶದಲ್ಲಿರುವ ಮುಸ್ಲಿಂ ಜನಾಂಗದ ಬದುಕನ್ನು ಚಿತ್ರಿಸುತ್ತಾರೆ. ಸಾರಾ ಅಬೂಬಕರ್ ರವರು ತಮ್ಮ ಕಥಾ ಸಂಕಲನಗಳಾದ 'ಚಪ್ಪಲಿಗಳು' 'ಪಯಣ ಮತ್ತು ಇತರ ಕತೆಗಳು', 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು'. ಹೀಗೆ ತಮ್ಮ ಹಲವು ಕಥಾಸಂಕಲನಗಳಲ್ಲಿ ಇವರು ಬರೆಯುವುದಕ್ಕೆ ಬಹಳಷ್ಟು ಸರಕುಗಳನ್ನು ಇಟ್ಟುಕೊಂಡು ಮುಸ್ಲಿಂ ಸಂವೇದನೆಯನ್ನು ಸ್ತ್ರೀಸಂವೇದನೆಯೊಂದಿಗೆ ಮೇಳೈಸಿ ಬರೆಯುತ್ತಾರೆ. ಸಾ.ರಾ. ಅಬೂಬಕರರ ಬರವಣಿಗೆಯನ್ನು ಬಹಳಷ್ಟು ಮುಸ್ಲಿಂ ಹೆಣ್ಣು ಮಕ್ಕಳು ತಮ್ಮ ಸಾಮಾಜಿಕ ಸಾಂಪ್ರದಾಯಿಕ ನಿಯಮ ನಿಬಂಧನೆಗಳಿಗೆ ಸಿಕ್ಕು ಬಿಡುಗಡೆಗೊಳ್ಳಲಾರದೆ ನರಳುವ ಸ್ಥಿತಿಯನ್ನು ಚಿತ್ರಿಸುತ್ತಾರೆ.

ಭಾನುಮುಷ್ತಾಕ್ ಅವರೂ ಸಹ ತಮ್ಮ ಕತೆಗಳಲ್ಲಿ ಮುಸ್ಲಿಂ ಜನಾಂಗದಲ್ಲಿ ಸ್ತ್ರೀ ತಾನು ಶತ ಶತಮಾನಗಳಿಂದಲೂ ಧರ್ಮ ಹಾಗೂ ಪುರುಷ ಈ ಎರಡು ವ್ಯವಸ್ಥೆಗಳ ನಡುವೆಯೂ ಸಿಲುಕಿ ತಾನು ಪಟ್ಟಂತಹ ಪಾಡನ್ನು ತಮ್ಮ ಕತೆಗಳಲ್ಲಿ ವ್ಯಕ್ತಪಡಿಸುತ್ತಾರೆ. ಹೀಗೆ ಮುಸ್ಲಿಂ ಜನಾಂಗದ ಸ್ತ್ರೀ ಸಂವೇದನಾತ್ಮಕ ಅಂಶಗಳು ದಲಿತ ಬಂಡಾಯ ಸಾಹಿತ್ಯದಲ್ಲಿ ತಮ್ಮದೇ ಆದ ರೀತಿಯಲ್ಲಿ ಗುರುತಿಸಿ ಕೊಂಡಿರುವುದನ್ನು ನಾವು ಕಾಣಬಹುದು.

ಈ ರೀತಿಯಾಗಿ ಇತ್ತೀಚಿನ ಸಣ್ಣಕತೆಗಳು ದಲಿತ ಬಂಡಾಯ ಸಾಹಿತ್ಯದ ದೋರಣೆಗಳನ್ನು ಹೊಂದಿವೆ. ಸ್ತ್ರೀಸಂವೇದನೆ, ಮುಸ್ಲಿಂ ಸಂವೇದನೆ, ದಲಿತ ಸಂವೇದನೆ ಎಂಬ ವಿಭಾಗೀಯ ಕ್ರಮದಲ್ಲಿ ಪ್ರಸ್ತುತ ಸಮಾಜದಲ್ಲಿ ನಾವು ಕಾಣುತ್ತಿರುವಂತಹ ಹಾಗೂ ಶತ ಶತಮಾನಗಳಿಂದ ಅನ್ಯಾಯಕೊಳ್ಳಗಾಗಿ ಇಂದು ಕ್ರಾಂತಿಕಾರಿಯಾಗಿ ಪ್ರತಿಭಟಿಸುವಂತಹ ಅಂಶಗಳು ಕತಾ ವಸ್ತುಗಳಾಗಿ ಕಂಡು ಬರುತ್ತವೆ. ಇಂದಿನ ರಾಜಕೀಯ, ದುಸ್ಥಿತಿ, ಸಮಾಜ ಅಭಿವೃದ್ಧಿಯಲ್ಲಿ ರಾಜಕೀಯದ ಪಾತ್ರ, ರಾಜಕಾರಣಿಗಳ ಮನೋಧರ್ಮ ಇತ್ಯಾದಿಗಳನ್ನು ತಮ್ಮ ಕತೆಗಳಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತಿರುವುದನ್ನು ಕಾಣಬಹುದು.

ಭಾಗ-೨

ಪ್ರಜಾವಾಣಿ ವಿಶೇಷಾಂಕಗಳಲ್ಲಿ ಬಹುಮಾನವನ್ನು ಪಡೆದು ಕೊಂಡಿರುವ ಕತೆಗಳೂ ಸಹ ದಲಿತ ಬಂಡಾಯ ಸಾಹಿತ್ಯದ ದೋರಣೆಗಳನ್ನೇ ಹೊಂದಿವೆ. ಈ ರೀತಿ ಹಿಂದಿನ ಕತೆಗಾರರ ರಚನಾಕ್ರಮಗಳನ್ನು ಅನುಸರಿಸಿದರೂ ಹೊಸ ಆಶಯಗಳನ್ನು, ತಂತ್ರ, ವಿನ್ಯಾಸಗಳನ್ನು ರೂಪಿಸಿಕೊಂಡು ತಮ್ಮದೇ ಆದ ಆಲೋಚನಾತ್ಮಕ ದಿಕ್ಕಿನೆಡೆಗೆ ಸಾಗುತ್ತಿವೆ. ಇಲ್ಲಿನ ಕತೆಗಳು ಹೆಚ್ಚಾಗಿ ಸ್ತ್ರೀಯನ್ನು ಕುರಿತಂತಹ ಕತೆಗಳೇ ಆಗಿವೆ. ಪ್ರಸ್ತುತ ಸಮಾಜದಲ್ಲಿ ಸ್ತ್ರೀ ಹೆಜ್ಜೆ ಹೆಜ್ಜೆಗೂ ಅನುಭವಿಸುತ್ತಿರುವ ಅಪಮಾನ, ನೋವು, ಕೆಲವು ಕತೆಗಳಲ್ಲಿ ಕಂಡು ಬರುತ್ತವೆ. ಮತ್ತೆ ಕೆಲವು ಕತೆಗಳಲ್ಲಿ ತಾನು ಕೂಡ ಪುರುಷನಂತೆ ಸ್ವತಂತ್ರವಾಗಿ ಜೀವಿಸಬಲ್ಲೆ ತನಗಾಗುತ್ತಿರುವ ಅಪಮಾನಗಳ ವಿರುದ್ಧ ಎದ್ದು ನಿಲ್ಲಬಲ್ಲೆ ಎಂಬ ಕ್ರಾಂತಿಕಾರಿ ಅಂಶಗಳನ್ನು ಚಿತ್ರಿಸುತ್ತವೆ. ಹೆಣ್ಣಿನ ಅಸಹಾಯಕತೆಗೆ ಉದಾಹರಣೆಯಾಗಿ ಮಂಜುನಾಥ ಗೀತಾರವರ 'ಹಸಿರುಗಾಜಿ ಬಳೆ' ಕತೆಯಲ್ಲಿ ಬರುವ ಸ್ತ್ರೀ ಪಾತ್ರವನ್ನು ಗಮನಿಸಬಹುದು. ಸ್ತ್ರೀಯ ದಿಟ್ಟತನಕ್ಕೆ ಉದಾಹರಣೆಯಾಗಿ ಶಿವಲಿಮಗು ಬಳಿಗಾರರ 'ಕಮಲಮ್ಮ ಕೊಲೆ ಧರ್ಮ ಮತ್ತು ಅಧಿಕಾರ' ಕತೆಯನ್ನು ಗಮನಿಸಬಹುದು.

ಇತ್ತೀಚಿನ ಬರಹಗಾರರು ಹೊಸ ಆಲೋಚನೆ ಮತ್ತು ಬರವಣಿಗೆಯ ವಿಧಾನಗಳಿಮದ ಸಾಹಿತ್ಯದ ಹೊಸ ರೂಪಕ್ಕೆ ನಾಂದಿಯನ್ನು ಹಾಡುತ್ತಿದ್ದಾರೆ. ಬಿ.ಎಂ. ಗಿರಿರಾಜ್ ರವರ 'ಎಲ್ಲೋ ಹುಟ್ಟಿ ಎಲ್ಲೋ ಬೆಳೆದು' ಈ ಕತೆಯಲ್ಲಿ ಇಸ್ಲಾಂ ಧರ್ಮದಿಂದ ಹೊರದೂಡಲ್ ಪಟ್ಟ ಸ್ತ್ರೀ ತನ್ನ ಕಾಲ ಮೇಲೆ ತಾನು ನಿಂತು ಹೊಸ ಬದುಕನ್ನು ಕಾಣುವ ಸಂಗತಿಯು, ಸಂಪ್ರದಾಯವನ್ನು ಹೊರದೂಡಿ, ಹೊಸ ಸಮಾಜ ನಿರ್ಮಾಣವಾಗುತ್ತಿರುವುದನ್ನು ತಿಳಿಸುತ್ತದೆ. ಮಂಜುನಾಥ್ ಗೀತಾರವರ 'ಒಳಗಲ ಜ್ಯೋತಿಯು' ಈ ಕತೆಯಲ್ಲಿ ದಲಿತರೂ ಹಾಗೂ ಶೋಷಿತರಾಗಿ ಹಿಂಸೆಗೊಳಗಾದ ಕುಟುಂಬ ಕೊನೆಯಲ್ಲಿ ಗೌಡನ ಮನೆಯ ಅಧಿಕಾರ ವಹಿಸುಕೊಳ್ಳುವ

ಪ್ರಸಂಗಗಳು ಹೊಸ ಬದಲಾವಣೆಯನ್ನು ಸಮಾಜಕ್ಕೆ ತರುತ್ತವೆ. ಈ ರೀತಿಯಾಗಿ ದೀಪಾವಳಿ ವಿಶೇಷಾಂಕದಲ್ಲಿ ಇತ್ತೀಚಿನ ಸಣ್ಣಕತೆಗಳು ಸಾಹಿತ್ಯದಲ್ಲಿ ಹೊಸ ಬದಲಾವಣೆಯನ್ನು ತರುತ್ತಿವೆ.

ಅಧ್ಯಾಯ –೪

ದೀಪಾವಳಿ ವಿಶೇಷಾಂಕದ ಸಣ್ಣ ಕತೆಗಳು

ಭಾಗ–೧

ಪರಿಚಯ

ಪ್ರಜಾವಾಣಿ ಪತ್ರಿಕೆಯು ಪ್ರತೀವರ್ಷ ದೀಪಾವಳಿ ವಿಶೇಷಾಂಕವನ್ನು ಹೊರತರುತ್ತಿದೆ. ಈ ವಾರ್ಷಿಕ ಸಂಚಿಕೆಯು ಬಹುಮಾನಿತ ಸಣ್ಣಕತೆಗಳು, ಬಹುಮಾನಿತ ಕವನಗಳನ್ನಲ್ಲದೆ ಅನೇಕ ಲೇಖನಗಳನ್ನು ಆಯ್ದ ಬರಹಗಳನ್ನು ಚಟುಕು ಹನಿಗವನಗಳನ್ನು ಹಾಗೂ ಜಾಹೀರಾತುಗಳನ್ನು ತನ್ನ ಸಂಚಿಕೆಯಲ್ಲಿ ಪ್ರಕಟಿಸುತ್ತಿದೆ. ಈ ಸಂಚಿಕೆಯನ್ನು ಮುದ್ರಿಸುವುದಕ್ಕಿಂತ ಮುಂಚೆ ಜಾಹೀರಾತುಗಳ ಮೂಲಕ ಬರಹಗಾರದಿಂದ ಕತೆಗಳಿಗಾಗಿ ಆಹ್ವಾನ ಕೋರಲಾಗುತ್ತದೆ. ಸ್ಪರ್ಧೆಗಾಗಿ ಬಂದಂತಹ ಸಣ್ಣಕತೆಗಳನ್ನು ಪ್ರಾರಂಭದಲ್ಲಿ ಸಂಪಾದಕ ಮಂಡಳಿ ಪರಿಲಶೀಲಿಸಿ ಕೆಲವು ಆಯ್ದ ಕತೆಗಳನ್ನು ತಾವು ನೇಮಕಮಾಡಿ ಕೊಂಡಿರುವ ವಿಮರ್ಶಕರ ಕೈಗೆ ನೀಡುತ್ತದೆ. ವಿಮರ್ಶಕರಾಗಿ ಆಯ್ಕೆಗೊಂಡ ವಿದ್ವಾಂಸರು ಪ್ರತಿಯೊಂದು ಕತೆಯನ್ನು ಸಮಕಾಲೀನ ಸನ್ನಿವೇಶಕ್ಕೆ ಸಮಕಾಲೀನ ವಸ್ತುವಿಗೆ ಹೋಲಿಸಿ ನಂತರ ಆ ಕತೆಗಳಲ್ಲಿರುವ ಭಾಷೆ, ಪ್ರಾದೇಶಿಕತೆ, ರಚನೆಯ ವಿಧಾನ, ಅಭಿವ್ಯಕ್ತಿಯ ಕ್ರಮ ಇವುಗಳನ್ನು ಸರಿಯಾಗಿ ಪರಿಶೀಲಿಸಿ ಉತ್ತಮ ಕತೆಗಳನ್ನು ಅಯ್ಕೆ ಮಾಡುತ್ತಾರೆ. ಉದಾಹರಣೆಗೆ ೧೯೭೭ರ ತೀರ್ಪುಗಾರರಾದ ಟಿ.ಜಿ. ರಾಘವ ಮತ್ತು ಚಿ. ಶ್ರೀನಿವಾಸರಾಜು ಇವರು ವರ್ಷದ ಬಹುಮಾನಿತ ಕತೆಗಳ ಬಗ್ಗೆ ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕನ್ನಡದಲ್ಲಿ ಸಣ್ಣಕಥೆ ಸಮೃದ್ಧವಾಗಿ ಬೆಳೆದ ಸಾಹಿತ್ಯ ಪ್ರಕಾರ. ಬಹುಪಾಲು ಹೊಸ ಅಲೆಯ ಕಥೆಗಾರರು ಸಮಾಜದ ಶೋಷಿತ ವರ್ಗಗಳಿಂದ ಬಂದವರು ಅವಮಾನ, ದಮನ, ಶೋಷಣೆ, ಅವನತಿಗಳಂಥ ಅನುಭವ ದ್ರವ್ಯದಲ್ಲಿ ಸೃಜನಶೀಲ ಅಭಿವ್ಯಕ್ತಿಯನ್ನು ಕಂಡುಕೊಂಡವರು. ಈ ವರ್ಷದ 'ಪ್ರಜಾವಾಣಿ' ಕಥಾ ಸ್ಪರ್ಧೆಯಲ್ಲಿಯೂ ಹೊಸಕಥೆಗಾರರು ನಮ್ಮ ನಡುವಿನ ಸಾಂಸ್ಕೃತಿಕ ಸಂದರ್ಭದ ಅನೇಕ ಮುಖಗಳನ್ನು ತೆರೆದು ತೋರಿಸಿದ್ದಾರೆ. ಈ ಕಥೆಗಳನ್ನು ಓದುವಾಗ ಕಥೆಗಾರರು ಧ್ವನಿಸುವ ಹುಡುಕಾಡುವ, ಕ್ರಿಯೆಯ ಒಡನಾಟ ನಮಗೆ ಸಂತೋಷವನ್ನುಂಟು ಮಾಡುತ್ತದೆ. ಆದರೆ ಕಥಾ ಸಾಹಿತ್ಯದಲ್ಲಿ ಸುದೀರ್ಘ ಪರಂಪರೆಯುಳ್ಳ ಮಹಿಳೆಯರು, ಈ ಸ್ಪರ್ಧೆಯಲ್ಲಿ ಸತ್ವಯುತ ಕಥೆಗಳನ್ನು ನೀಡುವಲ್ಲಿ ಏಕೆ ವಿಫಲರಾಗಿದ್ದಾರೆ ಎಂಬುದು ಅಚ್ಚರಿಯ ಅಂಶ.

ಕತೆಗಳಲ್ಲಿ ಗಮನಸೆಳೆದ ಮೊದಲ ಅಂಶವೆಂದರೆ ನಮ್ಮ ಕತೆಗಾರರಲ್ಲಿ ಕಂಡು ಬರುವ ವಸ್ತು, ವೈವಿಧ್ಯ ಮತ್ತು ಪ್ರಗತಿಶೀಲ ಆಶಯ, ಜೊತೆಗೆ ಭಾಷೆಯನ್ನು ಎಚ್ಚರದಿಂದ ಬಳಸಿಕೊಳ್ಳುವ ವಿಧಾನ, ಬಹುಪಾಲು ಕಥೆಗಳಲ್ಲಿ ಕತೆಯನ್ನು ಮುಕ್ತಾಯಗೊಳಿಸುವಲ್ಲಿ ಕಂಡು ಬಂದಿರುವ ಆತುರ ಹಾಗೂ ಗೊಂದಲ ಎದ್ದು ಕಾಣುತ್ತವೆ. ಕೆಲವು ಕಥೆಗಳು ಹೇಳಿಕೆಗಳಿಗೆ ಶರಣಾದರೆ ಮತ್ತೆ ಕೆಲವು ವ್ಯಾಖ್ಯಾನದ ಭಾರದಿಂದ ಕುಸಿದಿವೆ. ಈ ಕತೆಗಳು ಈ ಗೋಜಲುಗಳಿಂದ ಸಂಕೀರ್ಣತೆಯನ್ನು ಧ್ವನಿಶಕ್ತಿಯನ್ನು ಕಳೆದುಕೊಂಡಿರುವುದು ಕಟುಸತ್ಯ.

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ನಮ್ಮ ಗಮನವನ್ನು ವಿಶೇಷವಾಗಿ ಸೆಳೆದ ಕಥೆಗಳು ಐದಾರು ಮಾತ್ರ ಇವುಗಳಲ್ಲಿ 'ಉಡಿಯಲ್ಲಿಯ ಉರಿ' ಹದವರಿತ ಕಥೆ. ಕಥೆಯ ಕುದಿತಕ್ಕೆ ತಕ್ಕಂತೆ ಔಚಿತ್ಯಪೂರ್ವವಾಗಿ ಬಳಕೆಯಾಗಿದೆ. ಭಾವಾತಿರೇಕದ ಅಬ್ಬರಕ್ಕೆ ಬಲಿಯಾಗದ ಸಂಯಮ ಕರಾಳ ಬದುಕಿನ ತಾಯಿ ಮಕ್ಕಳ ಸಂಬಂಧಗಳನ್ನು ಸೂಕ್ಷ್ಮವಾಗಿ ಬಿಡಿಸುವ ಕಲೆಗಾರಿಕೆ ಚನ್ನಾಗಿ ಮೂಡಿಬಂದಿವೆ. ಮಗಳು ಮನೆ ಬಿಡುವಾಗ ಅವ್ವನಿಗೆ ಕಾಣದಂತೆ ಭಾವಚಿತ್ರವೊಂದನ್ನು ಕುಬುಸದೊಳಗೆ ಇಟ್ಟುಕೊಳ್ಳುವ ಪ್ರಸಂಗ ಗಮನಾರ್ಹವಾಗಿದೆ.

'ಕಾಳ ಬೆಳುದಿಂಗಳ ಸಿರಿ' ಮಹಾತ್ವಾಕಾಂಕ್ಷೆಯಿಂದ ಮೂಡಿ ಬಂದಿರುವ ಕತೆ ಸಾಹೇಬ ಗೌಡನ ಮಗ ವಿರುಪಾಕ್ಷಗೌಡನ ಖೂನಿಯಿಂದ ಕಥೆ ಹರಡಿಕೊಳ್ಳುತ್ತಾ ಮಾನವೀಯ ಸಂಬಂಧಗಳನ್ನು ಪ್ರಶ್ನಿಸುತ್ತದೆ. ಆದರೆ ಗೌಡನ ಸೌಸೆ ತವರಿಗೆ ಹೊರಟುನಿಂತ ಪ್ರಸಂಗದಲ್ಲಿ ಬಸ್ಲಿಂಗಪ್ಪನ ಮಾತು ಸಂಕೀರ್ಣತೆಯನ್ನು ಕಳೆದುಕೊಳ್ಳುತ್ತದೆ. ಕತೆಯ ಕೇಂದ್ರಬಿಂದು ಬದಲಾಗುತ್ತಾ ಹೋಗುವುದರಿಂದ ಕಡೆಯ ಕಾವ್ಯಾತ್ಮಕ ಶೀರ್ಷಿಕೆಗೂ ಕಥೆಯ ಆಶಯಕ್ಕೂ ಕಷ್ಟಪಟ್ಟು ಸಂಬಂಧವನ್ನು ಹುಡುಕಾಡುವಂತೆ ಮಾಡುತ್ತದೆ.

ಈ ರೀತಿಯಾಗಿ ಕಥೆಗಾರರು ಪ್ರತಿಯೊಂದು ಕತೆಯನ್ನೂ ಪೂರ್ಣವಾಗಿ ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.

ಇದರಿಂದ ಕನ್ನಡ ಓದುಗರಿಗೆ ಸತ್ವಯುತವಾದ ಕತೆಗಳ ಸ್ವರೂಪ, ಪ್ರಸ್ತುತ ಕಥೆಗಳು ಆಯ್ಕೆ ಮಾಡಿಕೊಂಡ ವಸ್ತು ಹೀಗೆ ಕನ್ನಡ ಸಾಹಿತ್ಯದಲ್ಲಾಗುತ್ತಿರುವ ಹೊಸ ರಚನಾ ವಿಧಾನವನ್ನು ಮನವರಿಕೆ ಮಾಡಿಕಕೊಡುತ್ತದೆ.

ಉದ್ದೇಶ :

ಪ್ರಾರಂಭದಲ್ಲಿ ಪ್ರಜಾವಾಣಿ ಪತ್ರಿಕೆಯು ದೀಪಾವಳಿ ಬಹುಮಾನಿತ ಕಥೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸುತ್ತಿತ್ತು. ಇತ್ತೀಚಿನ ಮೂವತ್ತು ಮೂವತ್ತೈದು ದಶಕದಿಂದೀಚೆಗೆ ದೀಪಾವಳಿ ವಿಶೇಷಾಂಕ ಎನ್ನುವ ಪ್ರತ್ಯೇಕ ಸಂಚಿಕೆಯೊಂದನ್ನು ಹೊರತರುತ್ತಿದೆ. ಪ್ರಜಾವಾಣಿ ಪತ್ರಿಕೆಯು ಕಥೆಗಳನ್ನು ಆಹ್ವಾನಿಸಿ ಉತ್ತಮ ಮೂರು ಕಥೆಗಳಿಗೆ ಬಹುಮಾನ ನೀಡುವುದರಿಂದ ಬರಹಗಾರರು ಸ್ಪರ್ಧಾಮನೋಭಾವದ ದೃಷ್ಟಿಯಿಂದ ಉತ್ತಮ ಕಥೆಗಳನ್ನು ರಚಿಸಲು ಸಾಧ್ಯವಾಗುತ್ತದೆ. ಇದರಿಂದ ಕಥೆಗಳು ತಮ್ಮ ಗಟ್ಟಿತನವನ್ನು ಕಾಯ್ದುಕೊಳ್ಳುತ್ತವೆ.

ವಿದ್ಯಾರ್ಥಿಗಳು ಬರೆಯುವ ಕಥೆಗೂ ಪ್ರತ್ಯೇಕ ಬಹುಮಾನವಿರುವುದರಿಂದ ಯುವ ಬರಹಗಾರರನ್ನು ಪ್ರೋತ್ಸಾಹಿಸುವ ಮತ್ತು ಅವರಲ್ಲಿರುವ ಪ್ರತಿಭಾಸಾಮರ್ಥ್ಯವನ್ನು ಹೊರಗೆಳೆಯುವ ಕೆಲಸವನ್ನು ಮಾಡಿದಂತಾಗುತ್ತದೆ. ದೀಪಾವಳಿ ಸಂಚಿಕೆಗಳಲ್ಲಿನ ಕಥೆಗಳನ್ನು ಓದಿದ ಬರಹಗಾರರು ಮುಂದಿನ ಸಂಚಿಕೆಗಳಿಗೆ ಹೊಸ ಹೊಸ ವಸ್ತುವನ್ನು, ಪ್ರಸ್ತುತ ಪ್ರಸಂಗಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಆಲೋಚನಾ ಮತ್ತು ಬರವಣಿಗೆಯ ವಿಧಾನವನ್ನು ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಿ ಕೊಳ್ಳಲು ನೆರವಾಗುತ್ತದೆ. ಪ್ರಜಾವಾಣಿ ದಿನಪತ್ರಿಕೆಯ ಈ ಸಾಧನೆ ಕನ್ನಡ ನಾಡು ನುಡಿಯ ಬೆಳವಣಿಗೆಗೆ ಸಂಬಂಧಿಸಿದಂತೆ ಉತ್ತಮ ಆಲೋಚನಾಕ್ರಮ ಎಂದರೆ ತಪಾಗಲಾರದು. ೧೯೯೫-೨೦೦೮ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಗೊಳ್ಳುವ ಎಲ್ಲಾ ಕತೆಗಳೂ ಉತ್ತಮವಾದವು ಅಥವಾ ಬಹುಮಾನಕ್ಕೆ ಯೋಗ್ಯವಾದವೆಂದು ನಾವು ಪರಿಗಣಿಸುವುದು ತಪ್ಪಾಗುತ್ತದೆ. ಏಕೆಂದರೆ ಎಷ್ಟೋ ಕಥೆಗಳು ಕವಿಗಳ ಹೆಸರುಗಳನ್ನು ಆದರಿಸಿ ಆಯ್ಕೆಯಾಗಿರಬಹುದು. ಆಯ್ಕೆದಾರರ ಆಲೋಚನೆಗೆ ಸರಿಯಾಗಿ ನಿಲುಕದೆ ಉತ್ತಮಕತೆಗಳು ಗೌಣವಾಗಿ ಬೇರೆ ಕತೆಗಳು ಬಹುಮಾನವನ್ನು ಪಡೆದುಕೊಂಡಿರಬಹುದು. ಏಕೆಂದರೆ ಕೆಲವು ಕಥೆಗಳು ಉತ್ತಮ ರಚನಾವಿಧಾನವಿರದಿದ್ದರೂ ಬಹುಮಾನಕ್ಕೆ ಆಯ್ಕೆಯಾಗಿರುವುದನ್ನು ನಾವು ದೀಪಾವಳಿ ವಿಶೇಷಾಂಕಗಳ ಸಂಚಿಕೆಗಳಲ್ಲಿ ಗಮನಿಸಬಹುದು. ಈ ವಿಷಯಗಳು ಮುಂದೆ ಚರ್ಚಿಸಲಾಗಿದೆ. ಇದಕ್ಕೆ ರಾಜಕೀಯ, ವ್ಯಕ್ತಿನಿಷ್ಠ ಮತ್ತು ಸಮಾನ ಆಲೋಚನೆಗಳು ಕಾರಣವಾಗಿರಬಹುದು.

ಪ್ರಜಾವಾಣಿ ಪತ್ರಿಕೆಯು ದೀಪಾವಳಿ ವಿಶೇಷಾಂಕದಲ್ಲಿ ಬಹುಮಾನಿತ ಕತೆಗಳನ್ನು ಪ್ರಕಟಿಸುತ್ತಿರುವುದು ಸಾಹಿತ್ಯಾಸಕ್ತರು ಹಾಗು ಬರಹಗಾರರಿಗೆ ಸ್ಪೂರ್ತಿಯನ್ನು ನೀಡಿ ಅವರ ಆಸಕ್ತಿಯನ್ನು ಇಮ್ಮಡಿಗೊಳಿಸುವ ಕಾರ್ಯವಾಗಿದೆ. ಇದೇ ರೀತಿಯಾಗಿ ಮುಂದೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತನ್ನ ಆಸಕ್ತಿಯನ್ನು ತೋರಿಸಿ ಸಾಹಿತ್ಯದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ನೆರವಾದರೆ ಸಾಹಿತ್ಯ ತನ್ನದೇ ಆದ ಹೊಸ ದಿಕ್ಕಿನಡೆಗೆ ತಿರುಗಲು ಸಾಧ್ಯವಾಗುತ್ತದೆ.

ವೈವಿಧ್ಯತೆ :

೧೯೯೫-೨೦೦೮ರ ಅವಧಿಯಲ್ಲಿ ಕಂಡುಬರುವ ಬಹುಮಾನಿತ ಸಣ್ಣಕಥೆಗಳಲ್ಲಿ ಒಂದೊಂದು ಕಥೆಯೂ ಸಹ ತನ್ನದೇ ಅದಂತಹ ನೆಲೆಗಟ್ಟುಗಳನ್ನು, ವಸ್ತು ವೈಚಿತ್ರ್ಯಗಳನ್ನು ತನ್ನ ಚೌಕಟ್ಟಿಗೊಳಪಟ್ಟಂತೆ ಸೃಜಿಸುತ್ತದೆ. ಹಾಗೆಯೇ ಈ ಕಥೆಗಳನ್ನು ಜಾತಿ, ಧರ್ಮ, ಸ್ತ್ರೀಸಂವೇದನೆ, ಹೋರಾಟ, ಶೋಷಣೆ, ರಾಜಕೀಯ ಹಿನ್ನಲೆ ಹೀಗೆ ಹಲವಾರು ನೆಲೆಗಟ್ಟುಗಳನ್ನಿಟ್ಟುಕೊಂಡು ಚಿಂತಿಸಬಹುದಾಗಿದೆ.

ನಾನು ಈ ಸಂಶೋಧನಾ ಪ್ರಬಂಧಕ್ಕೆ ಆಯ್ದುಕೊಂಡಿರುವ ಕಥೆಗಳು ಈ ಕೆಳಕಂಡಂತಿವೆ.

೧. 'ಬೀಜದೇವತೆ' – ಜಿ.ವಿ. ಆನಂದಮೂರ್ತಿ (೨೦೦೨)

೨. 'ಕಡಿತನಕ ಕಾಯೋ ಅಭಿಮಾನ' – ಡಾ.ವಿನಯಾ (೨೦೦೫)

೩. 'ಒಂದು ಖಾಸಗಿ ಪತ್ರ' – ಡಾ. ವಿನಯಾ (೨೦೦೪)

೪. 'ಈ ಕಥೆಗಳ ಸಹವಾಸವೇ ಸಾಕು' – ಅಲಕತೀರ್ಥಹಳ್ಳೀ (೨೦೦೪)

೫. 'ಕಾಡಬೆಳದಿಂಗಳ ಸಿರಿ'– ರಾಜಶೇಖರ ಹತಗುಂದಿ (೧೯೯೭)

೬. 'ಬಾರಯ್ಯ ಬೆಳದಿಂಗಳೆ' – ಶರ್ಜಾಶಂಕರ್ ಹರಳಿಮಠ (೨೦೦೫)

೭. 'ಹಸಿರು ಗಾಜಿನ ಬಳೆ' – ಮಂಜುನಾಥಗೀತಾ (೨೦೦೫)

೮. 'ಒಳಗಲ ಜೋತಿಯು' – ಮಂಜುನಾಥಗೀತಾ (೨೦೦೩)

೯. ' ನಗೆ ನಮ್ಮ ಕುಲದೇವರು' – ಮಂಜುನಾಥಗೀತಾ (೨೦೦೧)

೧೦. 'ಕಮಲಮ್ಮ ಕೊಲೆ ಧರ್ಮ ಮತ್ತು ಅಧಿಕಾರ' – ಶಿವಲಿಂಗು ಬೆಳಗಾರ (೧೯೯೫)

೧೧. 'ದಿಂಡಿ' –ಕೆ,ಎಸ್, ಬಾಯಿರಿ (೨೦೦೬)

೧೨. 'ಹಾವು ಮುತ್ತಿನ ಹುಡುಕಾಟ' –ಡಿ, ಸಂಧ್ಯಾ ಹೊನೆಗುಂಟಿಕರ್ (೨೦೦೬)

೧೩. 'ಪಾಲು'– ವೀರೇಶ್ ಸೌದ್ರಿ ಹೊಕ್ರಾಣಿ (೨೦೦೮)

೧೪. 'ಡವ್ ಕೋಟೆ' –ನಾಗಮಂಗಲ ಕೃಷ್ಣಮೂರ್ತಿ (೨೦೦೮)

೧೫. 'ವೃತ್ತದೊಳಗೊಂಧು ವೃತ್ತ' – ಮೋಹನ್ ಹಬ್ಬು (೨೦೦೭)

೧೬. 'ಜೀ ಮಾತಾ ವಾಹನ' – ಗಂಗಾಧರ್ ಬೀಚನಹಳ್ಳಿ (೨೦೦೨)

೧೭. 'ಮುಗಿಲೊಡಲ ಮಿಂಚು' – ಬಿ.ಆರ್. ವೆಂಕಣ್ಣ (೧೯೯೬)

೧೮. 'ಉರುಳಿದ ವೃಕ್ಷ' – ಸಂದೀಪ ನಾಯಕ (೨೦೦೩)

೧೯. 'ಎಲ್ಲೋ ಹುಟ್ಟಿ ಎಲ್ಲೋ ಬೆಳೆದು' – ಬಿ.ಎಂ. ಗಿರಿರಾಜ್ (೨೦೦೩)

೨೦. 'ಸುಡುಗಾಡು ಸಿದ್ದ' – ಬಿ.ಎಲ್. ವೇಣು (೨೦೦೦)

ಕಥೆಗಳು ಮತ್ತು ಕಥೆಗಾರರ ಪರಿಚಯ

ಈ ಭಾಗದಲ್ಲಿ ಕಥೆಗಳನ್ನು ಮತ್ತು ಕಥೆಗಾರರ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಇಲ್ಲಿ ಆಯ್ದುಕೊಂಡಿರುವ ಕಥೆಗಳು ಯಾವ ಸ್ವರೂಪದವು ಮತ್ತು ಅವು ಮೇಲ್ನೋಟಕ್ಕೆ ಏನನ್ನು ತಿಳಿಸುತ್ತವೆ ಎಂಬದನ್ನು ವಿವರಿಸಲಾಗಿದೆ.

❖ **ಜಿ. ವಿ. ಆನಂದಮೂರ್ತಿ :– 'ಬೀಜ ದೇವತೆ'**

ಡಾ. ಜಿ.ವಿ.ಆನಂದಮೂರ್ತಿಯವರು ತುಮಕೂರು ಜಿಲ್ಲೆಯ ತಿಗಳರ ಗೊಲ್ಲಹಟ್ಟಿ –ಯವರು, ಕನ್ನಡ ಸ್ನಾತಕೋತ್ತರ ಪದವೀಧರರು, ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದುಕೊಂಡಿದ್ದಾರೆ. ತುಮಕೂರಿನ ಎಲ್ಲಾ ಬಗೆಯ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಕ್ರಿಯಾಶೀಲರಾಗಿ ಬೆಳೆದು ಬಂದವರು. ಡಾ. ಜಿ.ವಿ. ಆನಂದಮೂರ್ತಿಯವರು ಪ್ರಸ್ತುತ ತುಮಕೂರಿನ ಎಂಪ್ರೆಸ್ ಬಾಲಕಿಯರ ಪದವಿಪೂರ್ವಕಾಲೇಜಿನಲ್ಲಿ ಹಿರಿಯ ಕನ್ನಡ ಅಧ್ಯಾಪಕರಾಗಿದ್ದಾರೆ. ಇವರು ರೂಪಾಂತರಿಸಿದ ದೇವನೂರ ಮಹಾದೇವರ 'ದ್ಯಾವನೂರು', 'ದೇವರುಗಳ ರಾಜ್ಯದಲ್ಲಿ' ಮತ್ತು ಕರ್ನಾಟಕ ಇತಿಹಾಸ ಮತ್ತು ಸಾಹಿತ್ಯಕ ಪರಂಪರೆಯನ್ನು ಕುರಿತಾದ 'ಸಂಪದ' ರಂಗರೂಪವನ್ನು ರಂಗಭೂಮಿಯ ಖ್ಯಾತ ರಂಗನಿರ್ದೇಶಕರುಗಳು ಪ್ರಯೋಗಿಸಿದ್ದಾರೆ. ಇವರ ಪ್ರಕಟಿತ ಕೃತಿಗಳು ಇಂತಿವೆ.

ಸಂಪಾದಿತ ಕೃತಿಗಳು : ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಮೂರು ದಲಿತ ಕಮ್ಮಟಗಳು, ಮಹಾಯಾನ (ವಿ.ಚಿ.ಯವರ ಆಯ್ದ ಕವಿತೆಗಳು), ಮಡುಗಟ್ಟಿ ಅಕ್ಕರೆ, ಜೀವನದಿ.

ಪ್ರಕಟಿತಕೃತಿಗಳು : 'ಬುದ್ಧತೋರಿದ ದಾರಿ', 'ತತ್ತ್ವಪದಕಾರರು', 'ಕಲಾವಿದರ ಒಡನಾಟ', 'ನೀರಗಂಧ' (ಕವನ ಸಂಕಲನ).

ಸಂಪಾದಿತ ಜಾನಪದ ,ಕೃತಿಗಳು : ಗಂಧರ್ವಲೋಕದ ಗೆಣಿಕಾರರು, ಕರಾವಳಿಯಕ್ಷಗಾನ, ಜನಪದದ ತುಂಬುಹೊಳೆ, ಹಲವು ತೋಟದ ಹೂಗಳೂ, ಸಾಲುಸಂಪಿಕೆ ನೆರಳು, ಗರಿ ಕೆದರಿದ ನವಿಲು.

ಇವರು ೧೯೯೮–೨೦೦೧ರ ಅವಧಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಡಾ. ಜಿ.ವಿ.

ಅನಂದಮೂರ್ತಿಯವರಿಗೆ ೨೦೦೨ರಲ್ಲಿ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಕಥಾಸ್ಪರ್ಧೆಯಲ್ಲಿ 'ಬೀಜದೇವತೆ' ಎನ್ನುವ ಕಥೆಗೆ ದ್ವಿತೀಯ ಬಹುಮಾನ ದೊರೆತಿದೆ.

ಇವರ 'ಬೀಜದೇವತೆ' ಕಥೆಯಲ್ಲಿ ಪುಟ್ಟೀರಮ್ಮ ತನ್ನ ಗ್ರಾಮಕ್ಕೆ ಹಿರಿಯವಳಾಗಿದ್ದು, ಅನುಭವಸ್ಥೆಯಾಗಿರುತ್ತಾಳೆ. ಆಕೆ ತನ್ನ ಗ್ರಾಮದ ಪ್ರತಿಯೊಂದು ವಿಷಯವನ್ನು ಅರಿತವಳಾಗಿರುತ್ತಾಳೆ. ಅದೇ ರೀತಿ ತನ್ನ ಹಿರಿಯ ತಲೆಮಾರಿನಿಂದ ಬಂದಂತಹ ಕೃಷಿ ಬೀಜಗಳನ್ನು ಶೇಖರಿಸಿ ಬಿತ್ತನೆ ಸಮಯದಲ್ಲಿ ಊರಿನ ಜನರಿಗೆಲ್ಲಾ ಹಂಚುತ್ತಿರುತ್ತಾಳೆ. ಅಂದರೆ ಒಂದು ಹೆಣ್ಣು ಒಂದು ಸಂಸಾರದಲ್ಲಿ ಗಂಡ ಮತ್ತು ಮಕ್ಕಳನ್ನು ಸಾಕುತ್ತಾ ತನ್ನ ಕುಟುಂಬವನ್ನು ಹೇಗೆ ಸಾಕಿಸಲಹುತ್ತಾಳೋ ಅದೇ ರೀತಿ ಪುಟ್ಟೀರಮ್ಮ ಆ ಊರಿಗೆ ತಾಯಿಯ ಸ್ಥಾನದಲ್ಲಿ ನಿಂತವಳಾಗಿರುತ್ತಾಳೆ. ತಾನು ಶೇಖರಿಸಿಟ್ಟಿರುವ ಬೀಜಗಳು ಎಂದೆಂದಿಗೂ ಅವು ತಮ್ಮ ಸತ್ವವನ್ನು ಕಳೆದುಕೊಳ್ಳುವುದಿಲ್ಲ ಎಂಬುದು ಆಕೆಯ ಗಾಢವಾದ ನಂಬಿಕೆಯಾಗಿರುತ್ತದೆ. ತನ್ನ ನಂಬಿಕೆ ಎಂದೆಂದಿಗೂ ಹುಸಿಯಾಗುವುದಿಲ್ಲ ಎಂಬುದು ಅವಳ ಮಾತು ಏಕೆಂದರೆ ಗ್ರಾಮೀಣ ಸೊಗಡು ಎಂದೆಂದಿಗೂ ಶಾಶ್ವತವಾದದ್ದು ಅದು ಪೊಳ್ಳು ಸಂಸ್ಕೃತಿಯಲ್ಲಿ ಎಂದು ಈ ಕತೆ ಸಾರಿ ಹೇಳುತ್ತದೆ.

ಆಧುನಿಕ ಕೃಷಿ ಪದ್ಧತಿಯಲ್ಲಿ ರಾಸಾಯನಿಕ ಮಿಶ್ರಣ ಮಾಡಿದ ಹಾಗೂ ಕಸಿ ಮಾಡಿ ತಯಾರಿಸಿದ ಬೀಜಗಳಲ್ಲಿ ಸತ್ವಗಳಿಲ್ಲದೆ ಅವು ಭೂಮಿಯಲ್ಲಿ ಸರಿಯಾಗಿ ಹುಟ್ಟುತ್ತಿರಲಿಲ್ಲ. ಪುಟ್ಟೀರಮ್ಮ ತಾನು ಯಾವುದೇ ವೈಜ್ಞಾನಿಕ ತಂತ್ರ ಬಳಸದೆ ಶೇಖರಿಸಿಟ್ಟಿರುತ್ತಿದ್ದ ಬೀಜಗಳು ಕೃಷಿ ಸಂತಾನವನ್ನು ಪರಂಪರೆಯಿಂದ ಪರಂಪರೆಗೆ ತಮ್ಮ ಸತ್ವವನ್ನು ಕೊಂಡೊಯ್ಯುತ್ತಿದ್ದವು.

ಪುಟ್ಟೀರಮ್ಮನ ಗ್ರಾಮದಲ್ಲಿ ಮಳೆಗಾಲ ಆರಂಭವಾಗಿ, ಉತ್ತು ಬಿತ್ತುವ ಕಾಲ ಬಂತೆಂದರೆ ಎಲ್ಲರೂ ಸಹ ಪುಟ್ಟೀರಮ್ಮನ ಮನೆಯ ಮುಂದೆ ಬಂದು ಮೆಣಸು, ಬದನೆ ಹುಚ್ಚೆಳ್ಳು ತಮಟೆ ಮುಂತಾದ ಬೀಜಗಳನ್ನು ಕೇಳಲು ಬರುತ್ತಿದ್ದರು. ಹೀಗೆ ಬಂದವರನ್ನು ಪುಟ್ಟೀರಮ್ಮ ಎಂದೆಂದಿಗೂ ಬರಿಗೈಯಲ್ಲಿ ಕಳುಹಿಸಿದವಳಲ್ಲ. ಇದರಿಂದ ಒಂದು ಸಂತತಿಯ ಪೋಷಣೆ ಮತ್ತು ರಕ್ಷಣೆಗೆ ಸ್ತ್ರೀಯೊಾವ ರೀತಿಯಾಗಿ ತನ್ನ ಔದಾರ್ಯತೆಯನ್ನು ಪ್ರದರ್ಶಿಸುತ್ತಾಳೆ ಎಂಬುದು ಈ ಕತೆಯಲ್ಲಿ ಸವಿಸ್ತಾರವಾಗಿ ಚಿತ್ರಣಗೊಂಡಿದೆ. ಆಧುನಿಕ ಕೃಷಿ ಮತ್ತು ಜನಪದ ಕೃಷಿಗಿರುವ ವ್ಯತ್ಯಾಸವನ್ನು ಜನಪದ ಕೃಷಿಯ ಸತ್ವವನ್ನು ಈ ಕತೆ ತನ್ನಲ್ಲಿ ಅಡಗಿಸಿ ಕೊಂಡಿರುವುದನ್ನು ಕಾಣಬಹುದು. ಈ ಕತೆಯಲ್ಲಿ ಇಂದಿನ ಮನುಷ್ಯ ಸೋಮಾರಿಯಾಗಿ

ಹಲವು ದುಶ್ಚಟಗಳಲ್ಲಿ ತೊಡಗಿ ತನ್ನ ಬದುಕನ್ನು ಹಾಳುಮಾಡಿಕೊಳ್ಳುವ ಸನ್ನಿವೇಶವನ್ನು, ಮಾನವ ಸಂತತಿಯ ದುರಂತ ಜೀವನವನ್ನು ಚಿತ್ರಿಸುತ್ತದೆ.

❖ **ಡಾ. ವಿನಯಾ :–** 'ಕಡಿತನಕ ಕಾಯೋ ಅಭಿಮಾನ'

ಡಾ. ವಿನಯಾರವರು ೧೯೬೦ರಲ್ಲಿ ಉತ್ತರ ಕನ್ನಡ ಜಿಲ್ಲೆಯ ನಾಡು ಮಕ್ಕೇರಿಯಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಎಂ.ಎ. ಎಂ.ಫಿಲ್ ಮತ್ತು ಪಿ.ಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಪ್ರಸ್ತುತ ಇವರು ಧಾರವಾಡ ಜಿಲ್ಲೆಯ ಅಳ್ನಾವರದ ಸರಕಾರಿ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು :–ಸಂಗಾತಿ, ಪೃಥ್ವಿ ಮತ್ತು ನಬಾ, ಬಾಯಾರಿಕೆ ಮತ್ತು ನೂರು ಗೋರಿಯ ದ್ವೀಪ

ಪ್ರಶಸ್ತಿ ಮತ್ತು ಬಹುಮಾನಗಳು :– ಪು.ತಿ.ನ. ಕಾವ್ಯ ಪ್ರಶಸ್ತಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡಮಿ ಪುಸ್ತಕ ಬಹುಮಾನ ಇವರಿಗೆ ದೊರೆತಿವೆ.

'ಕಡಿತನಕ ಕಾಯೋ ಅಭಿಮಾನ' ಈ ಕತೆಯು ನಾಲ್ಕು ತಲೆಮಾರುಗಳನ್ನು ಕಟ್ಟಿಕೊಡುತ್ತದೆ. ಗಂಗಕ್ಕ ಎಂಬ ಮಹಿಳೆ ಗಂಡನ ಮನೆ ಸೇರಿದ ಮೇಲೆ ಗಂಡನ ಪುಂಡಾಟವನ್ನು ಸಹಿಸಿಕೊಂಡು ಆತನಿಂದ ನೆರವನ್ನಾಚದೆ ತನ್ನ ಅತ್ತೆ ಮಾವಂದಿರನ್ನು ಸಾಕಿ ಸಲಹುತ್ತಾಳೆ. ಕೊನೆಗೆ ಗಂಗಕ್ಕನ ಗಂಡ ತಾನು ಸಾಯುವ ಹಂತದಲ್ಲಿ ತನ್ನ ಹೆಂಡತಿಯು ಒಳ್ಳೆಯತನಕ್ಕೆ ಮರುಳಾಗಿ ತನ್ನ ದುಶ್ಚಟಗಳನ್ನು ತೊರೆದು ತನ್ನ ದುರ್ನಡತೆಗಾಗಿ ವ್ಯತೆ ಪಡುತ್ತಾನೆ. ತನಗಿದ್ದ ಒಬ್ಬಳೇ ಮಗಳು ಕರಿಯಮ್ಮಳನ್ನು ಕೂಲಿ ನಾಲಿ ಮಾಡಿ ಬಿ.ಎಸ್.ಸಿ. ಓದಿಸುತ್ತಾಳೆ. ಇಂಜಿನಿಯರ್ ಗೆ ಕೊಟ್ಟು ಮದುವೆಯನ್ನೂ ಮಾಡುತ್ತಾಳೆ. ಆದರೆ ಗಂಗಕ್ಕನ ಅಳಿಯ ಕರಿಯಮ್ಮಳಿಗೆ ಮಾನಸಿಕ ಹಿಂಸೆಯನ್ನು ಕೊಡುತ್ತಿರುತ್ತಾನೆ. ಗಂಗಕ್ಕನ ಅಳಿಯ ಒದಿವಿದ್ಯಾವಂತನಾಗಿ ಒಳ್ಳೆಯ ಹುದ್ದೆಯಲ್ಲಿದ್ದರೂ ಆತನ ಶೋಷಣಾ ಮನೋಭಾವ, ಕೆಟ್ಟ ಆಲೋಚನೆ –ಗಳಿಂದ ತನ್ನ ಹೆಂಡತಿಯಾದ ಕರಿಯಮ್ಮಳಿಂದ ತನ್ನ ಮಗನನ್ನು ದೂರ ಮಾಡುತ್ತಾನೆ. ಮಗನನ್ನು ದೂರದ ಊರಿನಲ್ಲಿರಿಸಿ ಒದಿಸುತ್ತಾನೆ. ಇದರಿಂದ ಬೇಸತ್ತ ಕರಿಯಮ್ಮ ಮಾನಿಸಿಕ ನೆಮ್ಮದಿಗಾಗಿ ಚಿಕ್ಕಮಕ್ಕಳಿಗೆ ಪಾಠ ಮಾಡಲು ತೊಡಗುತ್ತಾಳೆ. ಆದರೆ ಗಂಡ ಕರಿಯಮ್ಮ ಚಿಕ್ಕ ಮಕ್ಕಳಿಗೆ ಪಾಠ ಮಾಡುವುದನ್ನೂ ಕೆಡಿಸುತ್ತಾನೆ. ಇದರಿಂದ ಬೇಸತ್ತು ಕರಿಯಮ್ಮ ನೋವಿನ ಆಳದಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಮಗಳ ಸಾವು ಗಂಗಕ್ಕನಿಗೆ ಬಹಳ ನೋವನ್ನುಂಟು ಮಾಡುತ್ತದೆ. ತಾನು ಕೂಲಿ ನಾಲಿ ಮಾಡಿ ಕಷ್ಟಪಟ್ಟು ಸಾಕಿದ ಮಗಳ ಸ್ಥಿತಿ ದುರಂತವಾಯಿತಲ್ಲ ಎಂದು ಮರುಗುತ್ತಾಳೆ. ಕೊನೆಗೆ ಮೊಮ್ಮಗ ಮಾತ್ರ ಉಳಿದುಕೊಳ್ಳುತ್ತಾನೆ. ಹೀಗೆ ನಾಲ್ಕು ತಲೆಮಾರು ಕಂಡು ಪ್ರತಿತಲೆ ಮಾರಿನಲ್ಲೂ ಒಂದೊಂದು ರೀತಿಯ ನೋವಿನಿಂದ ಗಂಗಕ್ಕ ನರಳುತ್ತಾಳೆ. ಈ ಕತೆಯಲ್ಲಿ ಪ್ರತಿಯೊಂದು ಹಂತದಲ್ಲಿ ಬಹಳಷ್ಟು ನೋವನ್ನುಂಡು ಜೀವನವನ್ನು ಗಂಗಕ್ಕ ಸುಗಮವಾಗಿಸಿಕೊಳ್ಳಲು ಮುಂದಾಗುತ್ತಿರುತ್ತಾ -ಳೆ. ಆದರೆ ಪುರುಷ ಸಮಾಜದಲ್ಲಿ ಆಕೆ ಮಾಡುವ ಪ್ರಯತ್ನಗಳೆಲ್ಲವೂ ವಿಫಲ ವಾಗುವುದನ್ನು ನಾವು ಈ ಕತೆಯಲ್ಲಿ ಕಾಣಬಹುದು.

೨೦೦೫ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಮೊದಲನೆ ಬಹುಮಾನ -ವನ್ನು ಈ ಕಥೆ ಪಡೆದುಕೊಂಡಿದೆ.

೨. ಡಾ. ವಿನಯಾ:- 'ಒಂದು ಖಾಸಗಿ ಪತ್ರ'.

ಈ ಕತೆಯಲ್ಲಿ ನಿರೂಪಕಿಯು ತಾನು ಮೊಟ್ಟ ಮೊದಲನೆಯ ಬಾರಿಗೆ ಪ್ರೀತಿಸಿದಂತಹ ಹಾಗೂ ಮನಸ್ಸಿನ ತುಂಬಾ ತುಂಬಿಕೊಂಡಂತಹ ಮಹೇಶ ಎಂಬ ವ್ಯಕ್ತಿಗೆ ಹಲವು ವರ್ಷಗಳ ಮೇಲೆ ಪತ್ರವೊಂದನ್ನು ಬರೆಯುತ್ತಾಳೆ. ಈಕೆ ಬರೆಯುವ ಪತ್ರದಲ್ಲಿ ತನ್ನ ಹಿಂದಿನ ನೆನಪುಗಳನ್ನು ತನ್ನ ತಂದೆಯ ಮನೆಯಲ್ಲಿ ತಾನು ಬಾಳಿ ಬದುಕಿದ ಸಂಗತಿಗಳನ್ನು ಪತ್ರದಲ್ಲಿ ಹಂಚಿಕೊಳ್ಳುತ್ತಾಳೆ. ತನ್ನ ಬಾಲ್ಯದ ಪ್ರಿಯಕರ ಮಹೇಶನನ್ನು ಒಮ್ಮೆಯೂ ಮಾತನಾಡಿಸದೇ ಮನಸ್ಸಿನೊಳಗೆ ಆತನ ರೂಪಕ್ಕೆ ಪ್ರೀತಿಯ ಧಾರೆಯನ್ನೆರೆದು ಪ್ರೀತಿಸುತ್ತಿದೆ ಎಂದು ತನ್ನ ಪತ್ರದಲ್ಲಿ ವಿವರಿಸುತ್ತಾಳೆ. ಇಬ್ಬರೂ ಒಂದು ದಿನವೂ ಮಾತನಾಡದಿದ್ದರೂ ಇಬ್ಬರಲ್ಲೂ ಇದ್ದಂತಹ ಪ್ರೀತಿ ಎಷ್ಟು ಪವಿತ್ರವಾದದೆಂದು ಲೆಕ್ಕಹಾಕುತ್ತಾಳೆ. ನನ್ನ ಮಗಳು ಹಾಗೂ ನಿನ್ನ ಮಗಳು ಈಗ ಒಟ್ಟಿಗೆ ಕಾಲೇಜಿಗೆ ಹೋಗುವ ಮಟ್ಟಕ್ಕೆ ಬೆಳೆದಿದ್ದರೂ ನಾನು ನಿನ್ನ ಮೇಲಿಟ್ಟಿರುವ ಪ್ರೀತಿ ಮಾಸದೆ ಹಾಗೆಯೆ ಉಳಿದಿರುವುದಕ್ಕೆ ಆಶ್ಚರ್ಯಪಡುತ್ತಾಳೆ. ಮಹೇಶನನ್ನು ಮದುವೆಯಾಗಬೇಕೆಂದಿದ್ದರೂ ವಿಧಿಯ ಲೀಲೆಯ ಮುಂದೆ ಏನೂ ಮಾಡಲಾಗದೆ ಆತನ ನೆನಪನ್ನು ಮಾತ್ರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಸಿಕೊಂಡಿದ್ದೇನೆ ಎಂದು ತನ್ನ ಪತ್ರದಲ್ಲಿ ತಿಳಿಸುತ್ತಾಳೆ.

ಈ ಕತೆಯಲ್ಲಿ ಮಹಿಳೆಯರು ತಾವು ಪ್ರೀತಿಸಿದಂತಹ ವ್ಯಕ್ತಿಗಳನ್ನು ಪಡೆಯಲಾರದೆ ಈ ಸಮಾಜಕ್ಕೆ ಹೆದರಿ ಯಾವರೀತಿಯಾಗಿ ವ್ಯತೆ ಪಡುತ್ತಾರೆ. ಎಂಬ ಸಂಗತಿ

ಈ ಕತೆಯಲ್ಲಿ ಚಿತ್ರಿತವಾಗಿದೆ. ಹಿಂದಿನ ನೆನಪುಗಳು ಪ್ರತಿಯೊಬ್ಬರಿಗೂ ಹೇಗೆ ಮುದ ನೀಡುತ್ತವೆ. ಎಂಬುದನ್ನು ಈ ಕತೆಯ ಮೂಲಕ ತಿಳಿಯಬಹುದು. ಈ ಕಥೆಗೆ ದೀಪಾವಳಿ ವಿಶೇಷಾಂಕ ೨೦೦೮ರಲ್ಲಿ ದ್ವಿತೀಯ ಬಹುಮಾನ ದೊರೆತಿದೆ.

❖ **ಅಲಕ ತೀರ್ಥಹಳ್ಳಿ :– 'ಈ ಕತೆಗಳ ಸಹವಾಸವೇ ಸಾಕು'**

ಅಲಕತೀರ್ಥಹಳ್ಳಿಯವರು ಜುಲೈ– ೧೩–೧೯೫೬ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ಹಾಗೂ ತಾಳಗುಪ್ಪಗಳ ನಡುವಿನ ಪುಟ್ಟಹಳ್ಳಿಯಾದ 'ಹೂಗೊಸಿಲು' ಎಂಬ ಗ್ರಾಮದಲ್ಲಿ ಜನಿಸಿದರು. ಪ್ರಸ್ತುತ ಇವರು ತುಂಗಾ ಮಹಾವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದಾರೆ.

ದಿನಪತ್ರಿಕೆಗಳಲ್ಲಿ ಇವರ ನಾಟಕ, ಕತೆ, ಕವನ, ಹನಿಗವನಗಳು ಪ್ರಕಟವಾಗಿವೆ. ಇವರ ಕಥೆಗಳು ಹಲುವ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದುಕೊಂಡಿವೆ. ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲೂ ಇವರ ಕಥೆಗಳು ಬಹುಮಾನ ಪಡೆದುಕೊಂಡಿವೆ. ಇವರು ಇತ್ತೀಚಿಕೆ ಪ್ರಕಟಿಸಿದ ಪ್ರಸಿದ್ದ ಕತಾಸಂಕಲನ ' ಈ ಕತೆಗಳ ಸಹವಾಸವೇ ಸಾಕು' ಈ ಕತಾ ಸಂಕಲನದಲ್ಲಿ ಇವರ 'ನಿನ್ನೆ ನಿನ್ನೆಗೆ' ಕಥೆಯು ತೀರ್ಪುಗಾರರ ಮೆಚ್ಚುಗೆಯನ್ನು ಪಡೆದುಕೊಂಡಿದೆ.

'ಈ ಕತೆಗಳ ಸಹವಾಸವೇ ಸಾಕು' ಈ ಕತೆಯಲ್ಲಿ ಮಹಿಳೆಯರ ಮಾನಸಿಕ ತುಮುಲಗಳನ್ನು ಲೇಖಕರು ಸ್ವಾರಸ್ಯವಾಗಿ ಬಿಚ್ಚಿಡುತ್ತಾರೆ. ಶಾರದತ್ತೆ ಕಥೆ ಹೇಳುವುದರಲ್ಲಿ ಪರಿಣಿತಳಾಗಿದ್ದು ಜೀವನದಲ್ಲಿ ತನ್ನ ಅನುಭವಕ್ಕೆ ಬಂದಂತಹ ಎಲ್ಲಾ ಪ್ರಸಂಗಗಳನ್ನು ಆಕೆ ಕತೆಯ ಮೂಲಕ ಅಭಿವ್ಯಕ್ತಪಡಿಸುತ್ತಾಳೆ. ಶಾರದತ್ತೆಯು ತನ್ನ ಜೀವನದಲ್ಲಿ ತನ್ನ ಅನುಭವಕ್ಕೆ ಬಂದಂತಹ ಪ್ರಸಂಗಗಳನ್ನು ಕತೆಗಳ ರೂಪದಲ್ಲಿ ಕತಾನಾಯಕಿಗೆ ಹೇಳುತ್ತಿರುತ್ತಾಳೆ. ಒಮ್ಮೆ ಕತಾನಾಯಕಿಗೆ ಹೆಸರಿಡುವ ಪ್ರಸಂಗದಲ್ಲಾದ ಒಂದು ಸನ್ನಿವೇಶವನ್ನು ಹಿಂದೆ ಅರ್ಧಕ್ಕೆ ನಿಲ್ಲಿಸಿದ್ದ ಶಾರದತ್ತೆ ಒಮ್ಮೆ ಕತಾನಾಯಕಿ ಸಿಕ್ಕಾಗ ಆ ಕತೆಯನ್ನು ಮುಂದುವರೆಸುತ್ತಾಳೆ. ಈ ಕಥೆಯಲ್ಲಿ ಮಹಿಳೆ ಮಹಿಳೆಯನ್ನೇ ಹೇಗೆ ದ್ವೇಶಿಸುತ್ತಾಳೆ. ಹಾಗು ಸ್ತ್ರೀಯ ಒಳ್ಳೆಯ ಗುಣಗಳು ಹೇಗೆ ಸಮಯ ಸಂದರ್ಭದ ಮಿತಿಗೆ ಸಿಲುಕಿ ರೌದ್ರಾವತಾರ ತಾಳುತ್ತವೆ. ಎಂಬ ಸೂಕ್ಷ್ಮ ಅಂಶಗಳು ಈ ಕತೆಯಲ್ಲಿ ಚಿತ್ರಿತಗೊಂಡಿವೆ.

'ಅಕ್ಷತಾಕುಮಾರಿ' ಎಂಬ ಹೆಸರನ್ನು ಕತಾನಾಯಕಿಯ ಹಿರಿಯ ಅತ್ತೆ ಅಂದರೆ ಶಾರದತ್ತೆಯ ಅಕ್ಕ ಉಚ್ಚರಿಸುತ್ತಾಳೆ. ಶಾರದತ್ತೆ ಮತ್ತು ಕತಾನಾಯಕಿಯ ತಾಯಿಯ ನಡುವೆ ನಡೆಯು ವಾಗ್ವಾದ, ಹಿರಣ್ಣಯ್ಯ ಮಾವ ಪ್ರತಿಕ್ರಿಯಿಸುವ ರೀತಿ ಹಾಗೂ ಅಕ್ಷತಾಕುಮಾರಿ

ಯಾರೆಂಬ ಮರ್ಮ ಓದುಗರ ಕುತೂಹಲವನ್ನು ಹಿಮ್ಮಡಿಗೊಳಿಸುತ್ತದೆ. 'ಅಕ್ಷತಾಕುಮಾರಿ' ಎಂಬ ಹೆಸರು ಯಾರದು? ಕತಾ ನಾಯಕಿಯ ತಾಯಿ ಆ ಹೆಸರನ್ನು ವಿರೋಧಿಸಲು ಕಾರಣವೇನು? ಎಂಬ ಸಂಗತಿ ಈ ಕತೆಯಲ್ಲಿ ಗೌಪ್ಯವಾಗಿ ಉಳಿದಿದೆ.

ಈ ಕತೆಯಲ್ಲಿ ಸ್ತ್ರೀಯ ಮಾನಸಿಕ ತೊಳಲಾಟ ಮತ್ತು ಸ್ತ್ರೀ ಮತ್ತು ಸ್ತ್ರೀನಡುವಿನ ಆಂತರಿಕ ಭಿನ್ನಾಭಿಪ್ರಾಯವನ್ನು ಈ ಕತೆ ತನ್ನೊಳಗೆ ಬಂದಿಸಿಕೊಂಡಿರುವುದನ್ನು ಕಾಣಬಹುದು. ೨೦೦೮ರ ದೀಪಾವಳಿ ವಿಶೇಷಾಂಕದಲ್ಲಿ ಈ ಕಥೆಗೆ ಪ್ರಥಮ ಬಹುಮಾನ ದೊರೆತಿದೆ.

❖ **ರಾಜಶೇಖರ ಹತಗುಂದಿ :– 'ಕಾಡಬೆಳದಿಂಗಳ ಸಿರಿ'**

ರಾಜಶೇಖರ ಹತಗುಂದಿಯವರು ೧೯೬೭ರಲ್ಲಿ ಗುಲ್ಬರ್ಗಾ ಜಿಲ್ಲೆಯ 'ಹತಗುಂದಿ' ಗ್ರಾಮದಲ್ಲಿ ಜನಿಸಿದರು. ಪ್ರಸ್ತುತ ಇವರು ಗುಲ್ಬರ್ಗಾದಲ್ಲಿ ಡ್ರಾಫ್ಟ್‌ಮನ್ ಆಗಿ ಕೆಲಸ ಮಾಡುತ್ತಿದ್ದಾರೆ.

ರಾಜಶೇಖರ್ ಹತಗುಂದಿಯವರ ಕಥೆಗಳು ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಕಥಾ ಸ್ಪರ್ಧೆಯಲ್ಲಿ ಬಹುಮಾನವನ್ನು ಪಡೆದುಕೊಂಡಿವೆ.

'ಕಾಡ ಬೆಳದಿಂಗಳ ಸಿರಿ' ಕತೆಯಲ್ಲಿ ರಾಜಕಾರಣಿಯಾದ ಸಾಹೇಬ ಗೌಡನು ತನ್ನ ಮಗ ವಿರುಪಾಕ್ಷನ ಕೊಲೆಯಿಂದ ಬಹಳ ನೋವನ್ನು ಅನುಭವಿಸುತ್ತಿರುತ್ತಾನೆ. ವಿರುಪಾಕ್ಷ ತನ್ನ ತಂದೆ ರಾಜಕಾರಣಿ ಎಂದು ಕೊಂಡು ತಾನು ಏನು ಮಾಡಿದರೂ ಸರಿಯಾಗಿರುತ್ತದೆ, ಎಂಬ ದರ್ಪದಿಂದ ಮರೆಪ್ಪನ ಮಗಳನ್ನು ಕೆಡಿಸುತ್ತಾನೆ. ಮರೆಪ್ಪ ಬಡವನಾಗಿದ್ದು ಅಸಹಾಯಕನಾಗಿ ಪ್ರತಿಬಟಿಸದೆ ಸುಮ್ಮನಾಗುತ್ತಾನೆ. ಹೀಗೆ ವಿರುಪಾಕ್ಷ ಅಹಂಕಾರ ಮತ್ತು ದರ್ಪದಿಂದ ಅನೇಕ ದುಷ್ಕೃತ್ಯಗಳನ್ನು ಮಾಡುತ್ತಿರುತ್ತಾನೆ. ಸಾಹೇಬಗೌಡ ಎಷ್ಟೇ ಬುದ್ದಿ ಹೇಳಿದರೂ ಕೇಳದೆ ತನ್ನ ಮನಸಿಚ್ಚಿಸಿದಂತೆ ನಡೆಯುತ್ತಾನೆ. ಇದರಿಂದ ಬೇಸತ್ತ ತಂದೆ ಆತನಿಗೆ ಮದುವೆಯನ್ನು ಮಾಡುತ್ತಾನೆ. ವಿರುಪಾಕ್ಷನ ಜೊತೆ ಬಾಳುವೆ ಮಾಡಲಾಗದೆ ಆತನ ಹೆಂಡತಿ ದೂರವಾಗುತ್ತಾಳೆ.

ವಿರುಪಾಕ್ಷ ತನ್ನ ಕೆಟ್ಟ ಕ್ರೌರ್ಯವನ್ನು ಬಿಡದೆ ಅದನ್ನೇ ಮುಂದುವರೆಸಿದಾಗ ಆತನ ಕ್ರೌರ್ಯಕ್ಕೆ ಬಲಿಯಾದವರ್ಯಾರೋ ಆತನನ್ನು ಕೊಲೆ ಮಾಡುತ್ತಾರೆ. ಈ ಕೊಲೆಯಿಂದ ಬೇಸತ್ತ ಸಾಹೇಬಗೌಡ ತನ್ನ ಸ್ನೇಹಿತರೊಡಗೂಡಿ ಕೊಲೆಗಾರ ಯಾರು? ಎಂದು ಹುಡುಕಲು

ಪ್ರಯತ್ನಿಸುತ್ತಾನೆ. ಈ ರೀತಿ ಕೊಲೆಗಡುಕರು ಸಿಗದೆ ಪುತ್ರವೇಧನೆಯಿಂದ ಬಳಲುವಂತಹ ಸ್ಥಿತಿ ಈ ಕತೆಯಲ್ಲಿ ಬಿಂಬಿತವಾಗಿದೆ.

ಈ ಕಥೆಯು ಸಾಹೇಬಗೌಡ ಆತನ ಸ್ನೇಹಿತರು, ಹಾಗೂ ಆತನ ಮಗನ ಬಗ್ಗೆ ವಿವರಿಸುತ್ತಾ ದೃಷ್ಟ ರಾಜಕೀಯದ ಮತ್ತೊಂದು ಮುಖವನ್ನು ತೋರುತ್ತದೆ. ಈ ಕತೆಯಲ್ಲಿ ಸರಿಯಾದ ನಿರೂಪಣಾ ವಿಧಾನವಿಲ್ಲ ಹಾಗೂ ಆಯ್ದುಕೊಂಡಿರುವ ವಸ್ತುವು ಓದುಗರಲ್ಲಿ ರೋಚಕತೆಯನ್ನು ಉಂಡು ಮಾಡುವುದಿಲ್ಲ. ಈ ರೀತಿಲೋಪಗಳನ್ನು ಹೊಂದಿದ್ದರೂ ಈ ಕತೆ ಬಹುಮಾನಕ್ಕೆ ಆಯ್ಕೆಯಾಗಿರುವುದು. ಸೋಜಿಗ. ೧೯೯೭ರ ದೀಪಾವಳಿ ವಿಶೇಷಾಂಕದಲ್ಲಿ ಈ ಕಥೆಗೆ ಎರಡನೇ ಬಹುಮಾನ ದೊರೆತಿದೆ.

❖ **ಶರ್ಜಾಶಂಕರ್ ಹರಳಿಮಠ :– 'ಬಾರಯ್ಯ ಬೆಳದಿಂಗಳೇ'**

ಶರ್ಜಾಶಂಕರ್ ಹರಳಿಮಠರವರು ಮೂಲತಃ ತೀರ್ಥಹಳ್ಳಿಯವರು, ಪ್ರಸ್ತುತ ಶಿವಮೊಗ್ಗದಲ್ಲಿ ವಾಸವಾಗಿದ್ದಾರೆ. ಪ್ರಸ್ತುತ ಇವರು ಸಂಸ್ಕೃತಿ ಎಂಬ ದೇಸಿ ಅಂಗಡಿಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಪ್ರಕಟಿತ ಕೃತಿಗಳು

ಅಂಕಣ ಎನ್ನುವ ಸಂಕಲನ, ಬೆಚ್ಚಿಬೀಳಿಸಿದ ಬೆಂಗಳೂರು (ಅಂಕಣ ಬರಹ) ಇವರ ಕತೆಗಳು ಪ್ರಜಾವಾಣಿ ದೀಪಾವಳಿ ಕತಾ ಸ್ಪರ್ಧೆ ಸೇರಿದಂತೆ ಬೇರೆ ಬೇರೆ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸಿವೆ. ಇವರು ಬರೆದ 'ಕುವೆಂಪು ಸಿಗದ ಕಥೆ' ತೀರ್ಪುಗಾರರ ಮೆಚ್ಚುಗೆ ಪಡೆದಿದೆ.

'ಬಾರಯ್ಯ ಬೆಳದಿಂಗಳೇ' ಕಥೆಯಲ್ಲಿ ಪ್ರೀತಿಸಿ ಅಂತರ್ ಜಾತಿ ವಿವಾಹವಾದ ದಂಪತಿಗಳ ಜೀವನ ಚಿತ್ರಣವಿದೆ. ಈ ದಂಪತಿಗಳು ಪಟ್ಟಣದಲ್ಲಿ ವಾಸವಾಗಿರುತ್ತಾರೆ. ಒಂದು ರಾತ್ರಿ ಈ ದಂಪತಿಗಳಿಬ್ಬರು ಬೆಳದಿಂಗಳ ಹೊಂಬೆಳಕಿನಲ್ಲಿ ಮಲಗಿದ್ದಾಗ ತಮ್ಮ ಹಿಂದಿನ ಬಾಲ್ಯ ಜೀವನವನ್ನು ಮೆಲುಕುಹಾಕುತ್ತಿರುತ್ತಾರೆ. ಈ ಕಥೆಯ ನಾಯಕ ಮೋಹನ ಬಡ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ತಾನು ತನ್ನ ಮನೆಯವರು ಪಟ್ಟಂತಹ ಕಷ್ಟವನ್ನು ಒಂದೊಂದಾಗಿ ನೆನಪು ಮಾಡಿಕೊಳ್ಳುತ್ತಾನೆ. ತಾನು ಶಾಲೆಗೆ ಹೋಗುವಾಗ ನಿರಗಂಟಿ ಕೆಲಸವನ್ನು ಮಾಡುತ್ತಿದದ್ದು, ತನ್ನ ತಂದೆ ಗೌಡರ ತೋಟದಲ್ಲಿ ಅಡಿಕೆ ಮರ ಹತ್ತಿ ಕಾಯಿ ಕೀಳುತ್ತಿದ್ದ ದೃಶ್ಯ, ತನ್ನ ಪೂರ್ವಜರ ಜಮೀನನ್ನು ಗೌಡ ಮೋಸಮಾಡಿ ಕಸಿದು ಕೊಂಡಂತಹ ವಿಷಯಗಳನ್ನು ತನ್ನ ಹೆಂಡತಿಗೆ ಹೇಳುತ್ತಾನೆ. ಮೋಹನನ ಹೆಂಡತಿ ಗಂಗೆಯು ಹೊಲೆಯರ

ಹುಡುಗಿಯಾದರೂ ಮೋಹನನ ಮನೆಯವರೊಂದಿಗೆ ಆಕೆಯ ಕುಟುಂಬ ಹೊಂದಿದ್ದ ಒಡನಾಟವನ್ನು ನೆನೆಯುತ್ತಾಳೆ. ಕಾಲೇಜಿನಲ್ಲಿ ಇಬ್ಬರೂ ಪ್ರೀತಿ ಮಾಡುತ್ತಿದ್ದಾಗ ಸಂಭವಿಸಿದ ಅನೇಕ ರಸಮಯ ಗಳಿಗೆಗಳನ್ನು ಇಬ್ಬರೂ ನೆನೆಯುತ್ತಾ ಬೆಳದಿಂಗಳ ರಸದೂಟವನ್ನು ಸವಿಯುತ್ತಾರೆ. ಮೋಹನನಿಗೆ ತನ್ನ ತಂದೆ ಸತ್ತಾಗ ಊರಿನಿಂದ ಒಂದು ಪತ್ರ ಬರುತ್ತದೆ. ಪತ್ರವನ್ನು ನೋಡಿ ಊರಿಗೆ ಹೋದಾಗ ಊರಿನ ಜನ ಆತನನ್ನು ನೀನು ಹೊಲೆಯರ ಹುಡುಗಿಯನ್ನು ಮದುವೆಯೊದದಕ್ಕೆ ನಿನ್ನ ತಂದೆ ಸತ್ತರು ಎಂದು ಹೀಯಾಳಿಸುತ್ತಾರೆ. ಆದರೆ ತನ್ನ ತಂದೆ ರೂಢಿಸಿಕೊಂಡಿದ್ದ ಜಾತ್ಯಾತೀತ ಮನೋಭಾವವನ್ನು ಅರಿತು ಸುಮ್ಮನಾಗುತ್ತಾನೆ.

ಈ ಕತೆ ಒಂದು ಸಾಮಾನ್ಯ ಕುಟುಂಬದ ಜೀವನ ವಿಧಾನವನ್ನು ಸ್ವಾರಸ್ಯವಾಗಿ ವಿವರಿಸಿದೆ. ಶತಶತಮಾನಗಳಿಂದಲೂ ಅಧಿಕಾರ ಮತ್ತು ದರ್ಪದಿಂದ ಮೆರೆಯುತ್ತಿದ್ದ ಜಾತಿಮೇಲು ಇಂದು ತನ್ನ ದರ್ಪ, ಅಧಿಕಾರವು ಅಳಿವಿನ ಅಂಚಿಗೆ ತಲುಪುವುದನ್ನು ನಾವು ಈ ಕತೆಯಲ್ಲಿ ಕಾಣಬಹುದು. ಈ ಕತೆಯಲ್ಲಿ ನಿರೂಪಣೆ ಓದುಗರಿನಿಗೆ ಸುಲಭವಾಗಿ ಗ್ರಹಣವಾಗುವಂತಹ ರೀತಿಯಲ್ಲಿ ಚಿತ್ರಣಗೊಂಡಿದೆ.

೨೦೦೫ರ ದೀಪಾವಳಿ ವಿಶೇಷಾಂಕದಲ್ಲಿ ಈ ಕಥೆಗೆ ತೃತೀಯ ಬಹುಮಾನ ದೊರೆತಿದೆ.

❖ **ಮಂಜುನಾಥ್ ಗೀತಾ:– 'ಹಸಿರು ಗಾಜಿನ ಬಳೆ'**

'ಹಸಿರುಗಾಜಿನ ಬಳೆ' ಕಥೆಯಲ್ಲಿ ಮಹಿಳೆಯ ಅಸಹಾಯಕಸ್ಥಿತಿಯನ್ನು ನಿರೂಪಕರು ಬಹಳ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಗಂಡನನ್ನು ಕಳೆದುಕೊಂಡು, ಇಬ್ಬರು ಹೆಣ್ಣು ಮಕ್ಕಳೊಂದಿಗೆ ಅಲೆಮಾರಿಯಾದ ಹೆಂಗಸು ಸಮಾಜದಿಂದ ಹೇಗೆ ಅಸಹಾಯಕತೆಗೆ ಒಳಗಾಗುತ್ತಾಳೆ. ಎಂಬ ಅಂಶ ಅಡಕಗೊಂಡಿದೆ. ಆಕೆ ಮುಟ್ಟಾದ ಪ್ರಸಂಗದಲ್ಲಿ ಕೆರೆಗೆ ಮೀಯಲು ಹೋಗುತ್ತಾಳೆ, ಆ ಕೆರೆ ನೀರು ದೇವಸ್ಥಾನದ ಮಡಿನೀರು ಇದರಲ್ಲಿ ಮೀಯಬಾರದು ಎಂದು ಆ ಊರಿನ ಮಹಿಳೆಯರು ಆಕೆಯನ್ನು ಹೀಯಾಳಿಸುತ್ತಾರೆ. ಈ ರೀತಿ ಸಮಾಜದಿಂದ ಬಹಿಷ್ಕರಿಸಲ್ಪಟ್ಟ ಸ್ತ್ರೀಯನ್ನು ನಿಲ್ಲಲೂ, ಕೂರಲು, ಬಾಳಲೂ ಬಿಡದೆ ಆಕೆಯನ್ನು ಅಂತರ್ ಪಿಶಾಚಿಯಂತೆ ಅಲೆಯುವಂತೆ ಮಾಡುತ್ತದೆ.

ನಿರೂಪಕರು ಹೇಳುವಂತೆ 'ಹಿಂಸೆಗೊಳಗಾದ ಹೆಣ್ಣಿಗೆ ತಳ್ಳಲು ಕೈಯಿಲ್ಲ ಒದೆಯಲು ಕಾಲಿಲ್ಲದ' ಪರಿಸ್ಥಿತಿ ನೆಲೆಗೊಂಡಿದೆ ಎಂದು ತಮ್ಮ ಕಥೆಯಲ್ಲಿ ಹೇಳುತ್ತಾರೆ. ಈ ಮಾತು ಅರ್ಥಗರ್ಭಿತವಾಗಿದ್ದು, ಸ್ತ್ರೀಗೆ ಒದಗಿರುವ ಸಂಪೂರ್ಣ ಶೋಷಣೆಯನ್ನು ಬಿಂಬಿಸುತ್ತದೆ. ಈ ಕತೆಯಲ್ಲಿ ಕಂಡು ಬರುವ ಮಹಿಳೆ ತನ್ನ ಜೀವನ ಸಾಗಿಸಲು ವೇಶ್ಯಾವಾಟಿಕೆಯನ್ನು ಆರಂಭಿಸುತ್ತಾಳೆ. ಇದರಿಂದ ಊರಿನ ಪ್ರತಿಯೊಬ್ಬರ ಬಾಯಲ್ಲೂ ಆಕೆ ಅಶ್ಲೀಲವಾಗಿ ಸೇರಿ

ಹೋಗುತ್ತಾಳೆ. ಮಹಿಳೆ ಇಂತಹ ಕೆಟ್ಟ ಪ್ರವೃತ್ತಿ ಗಿಳಿಯಲು ಆಕೆಗೆ ಸಮಾಜ ಸರಿಯಾದ ನೆಲೆಯನ್ನೊದಗಿಸದಿರುವುದು ಬಹುಮುಖ್ಯ ಕಾರಣ. ಪುರುಷ ಸಮಾಜದಿಂದ ಬಹಿಷ್ಕರಿಸಲ್ಪಟ್ಟರೂ ಆತ ಮುಂದೊಂದು ದಿನ ತನ್ನ ಒಳ್ಳೆಯತನದಿಂದ ಗೌರವ ಘನತೆಯನ್ನು ಸಂಪಾದಿಸಬಹುದು. ಆದರೆ ಸ್ತ್ರೀ ಒಮ್ಮೆ ಸಮಾಜದಿಂದ ಹೊರದೂಡಲ್ ಪಟ್ಟರೆ ಎಂದೆಂದಿಗೂ ಆಕೆ ಗೌರವವನ್ನು ಸಂಪಾದಿಸಲಾರಳು. ಹೀಗೆ ಈ ಕತೆಯಲ್ಲಿ ಸ್ತ್ರೀಯು ಎಷ್ಟೇ ನೋವನ್ನುಂಟರು, ಎಷ್ಟೇ ಹಿಂಸೆಗೊಳಗಾದರೂ ಪ್ರತಿಭಟಿಸಲಾರದೆ ತನ್ನ ಅಸಹಾಯಕತೆಯನ್ನು ಪ್ರದರ್ಶಿಸುತ್ತಾಳೆ.

ಕೊನೆಯಲ್ಲಿ ನಿರೂಪಕ ಹೇಳುವಂತೆ ಪುರುಷ 'ನೂರೊಂದು ಹಸಿರುಗಾಜಿನ ಬಳೆಗಳ ಚೂರನ್ನು ಬಳುಸುತ್ತದೆ'. ಈ ಮಾತಿನಲ್ಲಿ ಪುರುಷ ಸ್ತ್ರೀಯನ್ನು ತನ್ನ ಆಟದ ಗೊಂಬೆಯಾಗಿ ಬಳಸುತ್ತಾನೆ ಎಂಬ ಅಂಶ ಅಡಗಿರುವುದನ್ನು ಕಾಣಬಹುದು. 'ಸ್ತ್ರೀಧರೆಗೆ ದೊಡ್ಡವರ ಮುಂದೆ–ಅವ್ವ, ಮಗಳು, ಅಕ್ಕ, ತಂಗಿಯಾಗಿಯೇ ಉಳಿಯಲಾರಳು' ಎಂಬ ಮಾತು ಓದುಗರ ಆಲೋಚನೆಯನ್ನು ಹಲವು ದಿಕ್ಕುಗಳಿಗೆ ಹರಿಸುತ್ತದೆ. ಈ ಕಥೆಗೆ ೨೦೦೫ರ ದೀಪಾವಳಿ ವಿಶೇಷಾಂಕದಲ್ಲಿ ಮೂರನೇ ಬಹುಮಾನ ದೊರೆತಿದೆ.

❖ ಮಂಜುನಾಥ್ ಗೀತಾ : –'ಒಳಗಲ ಜೋತಿಯು'

ಈ ಕಥೆಯಲ್ಲಿ ಭೂ ಒಡೆಯನ ಕೈಕೆಳಗೆ ಕೆಲಸ ಮಾಡುವಂತಹ ಕುಟುಂಬದ ಹೀನಾಯ ಸ್ಥಿತಿಯನ್ನು ಚಿತ್ರಿಸಲಾಗಿದೆ. ಈ ಕುಟುಂಬ ಪರಿಸ್ಥಿತಿಯ ಕೈಗೊಂಬೆಯಾಗಿ ಹಾಗೂ ಭೂಒಡೆಯನ ಕಾಮುಕತೆಗೆ ಸಿಲುಕಿ ನರಳುತ್ತದೆ. ಜವರಿಯ ಪರಿಸ್ಥಿತಿಯನ್ನು ನೋಡಿಯೂ ಆಕೆಯ ಗಂಡ ಸಿಡಿಯ ಅಸಹಾಯಕನಾಗುತ್ತಾನೆ. ಹೀಗೆ ತನ್ನ ಹೆಂಡತಿ ಜವರಿ, ಮಗಳು ಮಿಣುಕಿಯ ಸ್ಥಿತಿಯನ್ನು ಕಂಡು ಅಸಹಾಯಕನಾದ ಸಿಡಿಯ ತನ್ನ ಒಡೆಯನ ಮನೆಯ ಕೆಲಸವನ್ನು ತೊರೆದು ಸಾರಾಯಿ ಮಾಡುವುದಕ್ಕೆ ಮುಂದಾಗುತ್ತಾನೆ. ಸಿಡಿಯನ ಮಗ ತನ್ನ ಕುಟುಂಬದವರಿಗಾದ ಅನ್ಯಾಯವನ್ನು ಸಹಿಸದೆ ಒಡೆಯನ ಮಗಳನ್ನು ಪ್ರೇಮಿಸಿ ಮದುವೆಯಾಗುತ್ತಾನೆ. ಈ ರೀತಿ ನಿರೂಪಕ ಈ ಕತೆಯಲ್ಲಿ ಉತ್ತಮ ತಂತ್ರ ಮತ್ತು ವಿನ್ಯಾಸವನ್ನು ಬಳಸಿ ಸ್ವಾರಸ್ಯವಾಗಿ ಚಿತ್ರಿಕರಿಸಿದ್ದಾನೆ.

ಭೂಮಿ ಇಲ್ಲದೆ ಕೂಲಯನ್ನೇ ತನ್ನ ದುಡಿಮೆಯ ಮಾರ್ಗವನ್ನಾಗಿ ಮಾಡಿಕೊಂಡ ಸಿಡಯ ತನ್ನ ಕುಟುಂಬದೊಂದಿಗೆ ದ್ಯಾವಪ್ಪನ ತೋಟದಲ್ಲಿ ಒಂದು ಸೇರಿ ಕೊಳ್ಳುತ್ತಾನೆ. ಭೂಒಡೆಯ ದ್ಯಾವಪ್ಪ ಜವರಿಯನ್ನು ತನ್ನ ಕಾಮುಕತೆಗೆ ದಾಸಿಯನ್ನಾಗಿ ಮಾಡಿಕೊಳ್ಳುತ್ತಾನೆ. ಇದನ್ನೆಲ್ಲಾ ನೋಡಿಕೊಂಡು ಸಿರಿಯು ತನ್ನ ಅಸಹಾಯಕತೆಯನ್ನು ಪ್ರದರ್ಶಿಸುತ್ತಾನೆ.

ದ್ಯಾವಪ್ಪನ ಮಗನೂ ಸಹ ತಂದೆಯಂತೆ ಸಿಡಿಯನ ಮಗಳು ಮಿಣುಕಿಯನ್ನು ತನ್ನ ಕೆಟ್ಟಚಟಕ್ಕೆ ಬಳಸಿಕೊಳ್ಳುತ್ತಾನೆ. ಈ ಪ್ರಸಂಗಗಳಿಂದ ಬೇಸತ್ತ ಸಿಡಿಯ ದ್ಯಾವಪ್ಪನ ಜಮೀನನ್ನು ತೊರೆದು ತೆಂಗಿನ ಮರದಲ್ಲಿ ಸಾರಾಯಿ ಇಳಿಸುವ ಕೆಲಸವನ್ನು ಮಾಡುತ್ತಿರುತ್ತಾನೆ. ಇದರಿಂದ ದ್ಯಾವಪ್ಪನ ತೋಟದಲ್ಲಿ ನಿಷ್ಠಾವಂತ ಕೆಲಸಗಾರರು ಇಲ್ಲದಂತಾಗಿ ಆತನ ತೋಟಬರಡಾಗುತ್ತದೆ. ದ್ಯಾವಪ್ಪ ಸಿಡಿಯನನ್ನು ಎಷ್ಟು ಬೇಡಿದರೂ ಆತ ಮತ್ತ ಆತನ ತೋಟಕ್ಕೆ ಬರಲು ಒಪ್ಪುವುದಿಲ್ಲ. ಸಿಡಿಯನ ದುಡಿಮೆ ಕಡಿಮೆ ಇದ್ದರೂ ಆತ ತನಗೆ ಓಂದೆ ಆದಂತಹ ನೋವು ಆತನನ್ನು ಮತ್ತೆ ದ್ಯಾವಪ್ಪನ ಮನೆಗೆ ಹೋಗುವುದಕ್ಕೆ ಬಿಡುವುದಿಲ್ಲ. ಸಿಡಿಯನ ಮಗ ಬೆಂಗಳೂರಿಗೆ ಕೆಲಸವನ್ನರಸಿ ಹೋದಾತ ತನ್ನ ತಾಯಿ ಮತ್ತು ತಂಗಿಗಾದ ಅಪಮಾನ ತನ್ನ ತಂದೆಗಾದ ಮಾನಸಿಕ ಯಾತನೆಗೆ ಪ್ರತಿಫಲವಾಗಿ ಪಟ್ಟಣದಲ್ಲಿ ಒದುತ್ತಿದ್ದ ದ್ಯಾವಪ್ಪನ ಮಗಳನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಈ ಸಂಗತಿಯನ್ನು ತಿಳಿದ ಸಿಡಿಯನಿಗೆ ಒಂದು ಕಡೆ ಸಂತಸವಾದರೆ ಮತ್ತೊಂದು ಕಡೆ ತನ್ನ ಮಗನು ನೀತಿಗೆಟ್ಟನಲ್ಲಾ ಎಂದು ವ್ಯಥೆಯಾಗುತ್ತದೆ. ಕೊನೆಗೆ ದ್ಯಾವಪ್ಪ ಮತ್ತು ಆತನ ಮಗ ಯೋಗೀಶನಿಗೆ ತಮ್ಮ ತಪ್ಪುಗಳು ಅರಿವಾಗಿ ಸಿಡಿಯನ ಕುಟುಂಬಕ್ಕೆ ಶರಣಾಗುತ್ತಾರೆ. ಬರಡಾಗಿ ಕತ್ತಲೆಯ ಕೂಪದಲ್ಲಿ ಸಿಲುಕಿದ್ದ ದ್ಯಾವಪ್ಪನ ಕುಟುಂಬಕ್ಕೆ ಸಿಡಿಯನ ಕುಟುಂಬ ತನ್ನ ಕರುಣೆಯ ದೀಪವನ್ನಚ್ಚಿ ಬೆಳಗುತ್ತದೆ.

ಈ ಕತೆಯು ಬಡವ ಮತ್ತು ಶ್ರೀಮಂತರ ನಡುವಿನ ವ್ಯತ್ಯಾಸ ಮತ್ತು ಬಡವರ ಕರಣೆಯ ಮಮಕಾರ, ಶ್ರೀಮಂತರ ದರ್ಪ, ಹಿಂಸಿಸುವ ಪ್ರವೃತ್ತಿಯನ್ನು ಸ್ಪಷ್ಟವಾಗಿ ಚಿತ್ರೀಕರಿಸಿದೆ. ಈ ಕತೆಗೆ ೨೦೦೩ರ ದೀಪಾವಳಿ ವಿಶೇಷಾಂಕದಲ್ಲಿ ಪ್ರಥಮ ಬಹುಮಾನ ಸಂದಿದೆ.

❖ **ಮಂಜುನಾಥ್ ಗೀತಾ :– 'ನಗೆ ನಮ್ಮ ಕುಲದೇವರು'**

ಈ ಕಥೆಯಲ್ಲಿ ಅಂಕ ಎನ್ನುವ ವ್ಯಕ್ತಿ, ತನಗೆ ವಂಶಪಾರಂಪರ್ಯವಾಗಿ ಬೆಳೆದು ಬಂದಿದ್ದ ಜಾನಪದ ಕಲೆಯನ್ನು ಮೈಗೂಡಿಸಿಕೊಂಡು ಊರಿನ ಜನರ ಮನಸ್ಸನ್ನು ಗೆದ್ದರುತ್ತಾನೆ. ಒಳ್ಳೆಯ ವ್ಯಕ್ತಿತ್ವ ಮತ್ತು ಸಜ್ಜನಿಕೆಯ ಮನೋಭಾವದವನಾದ ಅಂಕ ಬಡವನು, ದಲಿತನೂ ಆಗಿರುತ್ತಾನೆ. ಆತನ ಊರಿಗೆ ಚುನಾವಣೆ ಬರುತ್ತದೆ. ಅಂಕನ ಕೇರಿಯನ್ನು ಮೀರಿಸಲು ಕ್ಷೇತ್ರವನ್ನಾಗಿ ಮಾಡಲಾಗಿರುತ್ತದೆ. ಆ ಕೇರಿಯ ಜನ ಅಂಕನನ್ನು ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸುತ್ತಾರೆ. ಅಂಕ ತನ್ನ ತುಂಡು ಜಮೀನನ್ನು ಅಡವಿಟ್ಟು ಚುನಾವಣೆಗೆ ನಿಲ್ಲುತ್ತಾನೆ. ನಂತರ ಚುನಾವನೆಯಲ್ಲೂ ಸೋತು ತನ್ನ ಅಸ್ತಿಯನ್ನು

ಕಳೆದುಕೊಂಡು ಬೀದಿ ಬಿಕಾರಿಯಾಗುತ್ತಾನೆ. ಅಂದರೆ ಮನುಷ್ಯ ತನ್ನ ಮೂಲ ಕಸುಬನ್ನು ತೊರೆದು ತನಗೆ ನಿಲುಕಲು ಅಸಾಧ್ಯವಾದದ್ದನ್ನು ಬಯಸಿದರೆ ಆತನಿಗೊದಗುವ ದುರ್ ಗತಿಯನ್ನು ಈ ಕತೆ ಚಿತ್ರಿಸುತ್ತದೆ.

ಅಂಕನು ತನ್ನ ಪೂರ್ವಜರಿಂದ ವಂಶಪಾರಂಪರ್ಯವಾಗಿ ಹರಿದು ಬಂದ ಜನಪದ ಕಲೆಗಳಾದ ಜನಪದ ಕುಣಿತ, ವೇಷಭೂಷಣ, ಹಾಡು, ಕರಕುಶಲ ಕಲೆಗಳು ಹೀಗೆ ಎಲ್ಲದರಲ್ಲಿಯೂ ಪರಿಣತಿ ಪಡೆದು ಕೊಂಡಿರುತ್ತಾನೆ. ಊರಿನಲ್ಲಿ ಯಾವುದೇ ಸಮಾರಂಭಗಳಾದರೂ ಅಂಕನ ಕುಣಿತ ಮತ್ತು ಹಾಡು ಇದ್ದೆ ಇರುತ್ತಿತ್ತು. ಅಂಕ ತನ್ನ ಕುಣಿತ ಹಾಡುಗಾರಿಕೆಯಿಂದ ಎಲ್ಲರ ಮನಸ್ಸನ್ನು ಗೆದ್ದಿರುತ್ತಾನೆ. ಪ್ರತಿಯೊಬ್ಬರಿಗೂ ಅಂಕ ಎಂದರೆ ಅಚ್ಚುಮೆಚ್ಚು ಒಮ್ಮೆ ಆ ಊರಿನಲ್ಲಿ ಜಾತ್ರೆ ಆರಂಭವಾಗುತ್ತದೆ. ಅದೇ ವೇಳೆಯಲ್ಲಿ ಆ ಊರಿಗೆ ಚುನಾವಣೆಯೂ ಹತ್ತಿರವಾಗುತ್ತದೆ. ಅಂಕನು ತನ್ನ ಕೇರಿಯ ಜನರ ಮಾತನ್ನು ಕೇಳಿ ಚುನಾವಣೆಗೆ ನಿಲ್ಲುತ್ತಾನೆ. ಜಾತ್ರಾ ಸಮಾರಂಭದಲ್ಲಿ ಭಾಗವಹಿಸದೆ ತನ್ನ ಎದುರಾಳಿಯಾಗಿ ನಿಂತಿದ್ದ ಕರಗನ ಕುತಂತ್ರಕ್ಕೆ ಬಲಿಯಾಗಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಾನೆ. ಅಂಕ ಚುನಾವಣೆಯಲ್ಲಿ ಸೋತು ತನ್ನ ಆಸ್ತಿಯನ್ನು ಗೌರವವನ್ನು ಕಳೆದುಕೊಂಡು ಕುಗ್ಗಿ ಹೋಗುತ್ತಾನೆ.

ಈ ಕತೆಯಲ್ಲಿ ಕತಾ ವಸ್ತು ಪ್ರಸ್ತುತ ಒಂದು ಕೇರಿಯ ಜೀವನ ಚಿತ್ರಣ ಅಲ್ಲಿನ ರಾಜಕೀಯ ಕುತಂತ್ರಗಳನ್ನು ತಿಳಿಸುತ್ತದೆ. ಆದರೆ ಈ ಕತೆಯಲ್ಲಿ ಮೂಡಿ ಬಂದಿರುವ ತಂತ್ರಗಾರಿಕೆ ಓದುಗರನ್ನು ಗೊಂದಲಕ್ಕೆ ಸಿಲುಕಿಸುತ್ತದೆ. ಕ್ರಮವಾದ ಅರ್ಥಗ್ರಹಿಕೆಯನ್ನು ನೀಡುವಲ್ಲಿ ನಿರೂಪಕ ಯಶಸ್ವಿಯಾಗಿಲ್ಲ. ಈ ಕತೆಯ ತಿರುಳನ್ನು ತೀರ್ಪುಗಾರರು ಮತ್ತೊಮ್ಮೆ ಪರಿಶೀಲಿಸಬೇಕಾಗಿತ್ತು. ಈ ಕತೆಗೆ ೨೦೦೧ರಲ್ಲಿ ದೀಪಾವಳಿ ವಿಶೇಷಾಂಕದಲ್ಲಿ ಮೂರನೇ ಬಹುಮಾನ ದೊರೆತಿದೆ.

❖ **ಶಿವಲಿಂಗು ಬಳಿಗಾರ :– 'ಕಮಲಮ್ಮ ಕೊಲೆ ಧರ್ಮ ಮತ್ತು ಅಧಿಕಾರ'**

ಈ ಕತೆಯಲ್ಲಿ ಕಮಲಮ್ಮ ಒಬ್ಬ ರಾಜಕಾರಣಿಯಾಗಿ ಅಧಿಕಾರವನ್ನು ವಹಿಸಿಕೊಂಡಾಗ ಆಕೆಯನ್ನು ಪುರುಷ ಸಮಾಜ ಕೊಲೆ ಗಡುಕಿ ದೃಷ್ಟ ಹೆಂಗಸು ಎಂದು ದೂರುತ್ತದೆ. ಈ ಕತೆಯ ನಿರೂಪಕನೂ ಸಹ ಹಾಗೆಯೇ ಬಾವಿಸಿರುತ್ತಾನೆ. ಕತೆಯ ನಾಯಕ ಪತ್ರಕರ್ತನಾಗಿದ್ದು, ಆತ ಕಮಲಮ್ಮನನ್ನು ಸಂದರ್ಶನ ಮಾಡಲು ಹೋದಾಗ ಆಕೆ ಆತನಿಗೆ ಮೊದಲಿಂದಲೂ ಪರಿಚಯವಿದ್ದರಿಂದ ಆತನ ಮುಂದೆ ಬಿಯರ್ ಕುಡಿಯುತ್ತಾ ತಾನು ಈ ಸಮಾಜದಿಂದ ದೂಶಿಸಲ್ಪಟ್ಟದ್ದನ್ನು ಹಾಗೂ ತನ್ನ ಗಂಡ ತನಗೆ ಮಾಡಿದ

ಅನ್ಯಾಯವನ್ನು ವಿವರಿಸುತ್ತಾಳೆ. ಕಮಲಮ್ಮನ ಗಂಡ ತನ್ನ ಹೆಂಡತಿಗೆ ವಂಚಿಸಿ ಆಕೆಯ ತಂಗಿಯನ್ನು ಪ್ರೇಮಿಸುತ್ತಾನೆ. ಈ ಸನ್ನಿವೇಶದಿಂದ ಈಕೆ ಆತನಿಂದ ದೂರವಾಗಿ ತನ್ನ ಚಿಕ್ಕಪ್ಪನ ಮನೆಯನ್ನು ಸೇರುತ್ತಾಳೆ. ನಂತರ ಕಮಲಮ್ಮಳ ಗಂಡ ಇವಳನ್ನು ಸಂಸಾರದ ಸಂಕೋಲೆಯಲ್ಲಿ ಬಂದಿಸಲು ಪ್ರಯತ್ನಿಸಿ ವಿಫಲ ನಾಗುತ್ತಾನೆ. ಕಮಲಮ್ಮ ಆತನನ್ನು ದೂರ ಮಾಡಿದಾಗ ಆತ ಕೊಲೆ ಮಾಡಲು ಪ್ರಯತ್ನಿಸುತ್ತಾನೆ. ಆ ಸಂಧರ್ಭದಲ್ಲಿ ಆಕೆಯ ಚಿಕ್ಕಪ್ಪ ಆಕೆಯ ಗಂಡನನ್ನು ಕೊಂದು ಕಮಲಮ್ಮನ ಪ್ರಾಣ ರಕ್ಷಣೆ ಮಾಡುತ್ತಾನೆ. ಹೀಗೆ ಮಾನಸಿಕವಾಗಿ ಬಹಳನೊಂದ ಕಮಲಮ್ಮ ಆಕೆಯಲ್ಲಿದ್ದ ಒಳ್ಳೆಯತನದಿಂದ ಇಂದು ಯಶಸ್ಸು ಗಳಿಸಿ ಒಂದು ಉನ್ನತ ಸ್ಥಾನದಲ್ಲಿರುತ್ತಾಳೆ. ಆದರೆ ಆಕೆ ಸಾಂಸಾರಿಕ ಚೌಕಟ್ಟನ್ನು ಮೀರಿ ಈ ಹಂತಕ್ಕೆ ಬೆಳೆದಿದ್ದರಿಂದ ಆಕೆಯನ್ನು ಸಮಾಜ ಕೆಟ್ಟ ದೃಷ್ಟಿಯಿಂದ ನೋಡುತ್ತದೆ. ಇಲ್ಲಿ ಸ್ತ್ರೀಪುರುಷನ ಹಂಗನ್ನು ತೊರೆದು ಏನನ್ನು ಮಾಡಹೊರಟರೂ ಅದು ನೋಡುಗರ ಕಣ್ಣಿಗೆ ಕೆಟ್ಟದಾಗಿಯೇ ಕಾಣುವುದನ್ನು ನಾವು ಈ ಕತೆಯಲ್ಲಿ ಗಮನಿಸಬಹುದು. ಈ ಕತೆಯು ಪ್ರಸ್ತುತ ಸಮಾಜದಲ್ಲಿ ಸ್ತ್ರೀಯ ನೋವನ್ನು ಆಕೆಯ ಮೇಲಾಗುವ ಶೋಷಣೆಯನ್ನು ಮಾನಸಿಕ ತೊಳಲಾಟವನ್ನು ಚಿತ್ರಿಸಿದೆ. ಈ ಕತೆಗೆ ೧೯೬೫ರ ದೀಪಾವಳಿ ವಿಶೇಷಾಂಕದಲ್ಲಿ ಎರಡನೇ ಬಹುಮಾನ ದೊರೆತಿದೆ.

❖ **ಕೆ.ಎಸ್. ಬಾಯಿರಿ :– 'ದಿಂಡೀ'**

ಈ ಕತೆಯಲ್ಲಿ ದ್ಯಾವಮ್ಮ ಎಂಬ ಮಹಿಳೆ ನೀಚ ಗಂಡನ ಅಸಹಾಯಕತೆಯನ್ನು ಹೊರದೂಡಿ, ಎರಡು ಮಕ್ಕಳನ್ನು ಸಾಕುವ, ಅವರ ಬದುಕನ್ನು ಅಸನಾಗಿಸುವ, ಅವರಿಗೆ ಒಂದು ನೆಲೆಯನ್ನು ಒದಗಿಸುವುದರತ್ತ ತನ್ನ ಸಾಧನೆಯನ್ನು ಸಾಧಿಸಿ ತೋರಿಸುತ್ತಾಳೆ. ತನ್ನ ಗಂಡ ಸೂಳೆಯ ಸಹವಾಸವನ್ನು ಮಾಡಿ ಮನೆ ಮತ್ತು ಆಸ್ತಿ ಎಲ್ಲವನ್ನು ಹಾಳು ಮಾಡುತ್ತಾನೆ. ಇದರಿಂದ ಬೇಸತ್ತ ದ್ಯಾವಮ್ಮ ತನ್ನ ಸಂಸಾರದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ತನ್ನ ಅಣ್ಣನ ನೆರವನ್ನು ಪಡೆದು ಖಾನಾವಳಿ ನೆಡೆಸಲು ಬೇಕಾದಂತಹ ವಸ್ತುಗಳನ್ನು ಅಣ್ಣನಿಂದ ಪಡೆದು ಜಾತ್ರೆ ಆಗುವಲ್ಲಿಗೆ ಹೋಗಿ ಖಾನಾವಳಿಯನ್ನು ನಡೆಸಿ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಕೊಳುತ್ತಾಳೆ.ಖಾನಾವಳಿಯಿಂದ ಬಂದ ಹಣದಿಂದ ತನ್ನ ಮಕ್ಕಳಿಬ್ಬರಿಗೂ ಆಸ್ತಿಯನ್ನು ಸಂಪಾದನೆ ಮಾಡುತ್ತಾಳೆ. ಮಕ್ಕಳನ್ನು ತಕ್ಕಮಟ್ಟಿಗೆ ವಿದ್ಯಾವಂತರನ್ನಾಗಿಯೂ ಮಾಡುತ್ತಾಳೆ. ಆದರೆ ಮಗ ಶರಣ್ಯ ತನ್ನ ತಾಯಿಯೊಂದಿಗೆ ಜಗಳವಾಡಿ ಆಸ್ತಿಯಲ್ಲಿ ಪಾಲನ್ನು ಕೇಳುತ್ತಾನೆ. ತಾನು ಸಂಪಾದಿಸಿದ ಆಸ್ತಿಯನ್ನು ಪಾಲು ಮಾಡಲೊಪ್ಪದೆ ದ್ಯಾವಮ್ಮ ಮಗನಿಗೆ ಬುದ್ಧಿ ಹೇಳುತ್ತಾಳೆ. ಆದರೆ ಇಬ್ಬರು ಮಕ್ಕಳು ಸೇರಿ ದ್ಯಾವಮ್ಮಳನ್ನು ಹೊರದೂಡುತ್ತಾರೆ.

ಜೀವನದಲ್ಲಿ ಬಹಳ ಶ್ರಮಪಟ್ಟು ಮುಂದೆ ಬಂದಿದ್ದ ದ್ಯಾವಮ್ಮ ನೊಂದು ತೀರ್ಥಯಾತ್ರೆಗೆಂದು ಪಂಡರಾಪುರಕ್ಕೆ ಬರುತ್ತಾಳೆ. ಪಂಡರಾಪುರದಲ್ಲಿ ದೇವರ ದರ್ಶನ ಪಡೆದು ಸ್ವತಂತ್ರವಾಗಿ ತಾನೇ ಒಂದು ಖಾನಾವಳಿಯನ್ನು ಆರಂಭಿಸುತ್ತಾಳೆ. ಈ ಕತೆಯಲ್ಲಿ ಹೆಣ್ಣು ಮನಸ್ಸು ಮಾಡಿದರೆ ಎಲ್ಲರ ಹಂಗನ್ನು ತೊರೆದು ದಿಟ್ಟತನದಿಂದ ಬಾಳವೆ ಮಾಡುತ್ತಾಳೆ ಎಂಬುದನ್ನು ಸ್ವಾರಸ್ಯವಾಗಿ ಚಿತ್ರಣಗೊಂಡಿದೆ. ಈ ಕತೆಯ ವಸ್ತು ತಂತ್ರ ಓದುಗನನ್ನು ಉಲ್ಲಾಸಗೊಳಿಸುವಂತಹ ರೀತಿಯಲ್ಲಿ ಚಿತ್ರಣಗೊಂಡಿ -ರುವುದನ್ನು ಕಾಣಬಹುದು. ಈ ಕತೆಗೆ ೨೦೦೬ರ ದೀಪಾವಳಿ ವಿಶೇಷಾಂಕ ಮೊದಲನೇ ಬಹುಮಾನ ಸಂದಿದೆ.

❖ **ಡಿ.ಸಂದ್ಯಾ ಹೊನೆಗುಂಟಿಕರ್:– 'ಹಾವು ಮುತ್ತಿನ ಹುಡುಕಾಟ'**

ಈ ಕತೆಯಲ್ಲಿ ಲೈಂಗಿಕ ಕಾರ್ಯಕರ್ತೆಯರು ಪುರುಷ ಸಮಾಜದಿಂದ ಶೋಷಣೆಗೆ ಒಳಗಾಗಿ ನಾನಾ ಕಷ್ಟಗಳಿಂದ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ತಮ್ಮ ಜೀವನವನ್ನು ಸಾಗಿಸುವ ದೃಷ್ಟಿಯಿಂದ ಲೈಂಗಿಕ ಕಾರ್ಯಕರ್ತೆಯಾಗಿ ರೂಪುಗೊಂಡಿರುತ್ತಾರೆ. ಇದರಿಂದ ಏಡ್ಸ್ ಎಂಬ ಹೆಮ್ಮಾರಿಗೆ ಸಿಲುಕಿ ಈ ಸ್ತ್ರೀಯರು ಪಡುವಂತಹ ಕಷ್ಟ, ಸಮಾಜದಿಂದ ಅನುಭವಿಸು ನಿಂದನೆಗಳನ್ನು ಈ ಕತೆ ತೆರದಿಡುತ್ತದೆ. ನಿರೂಪಕಿ ಏಡ್ಸ್ ರೋಗ ನಿಯಂತ್ರಣದ ಕಾರ್ಯಕ್ರಮದಲ್ಲಿ ಮಾಹಿತಿಯನ್ನು ಪಡೆಯಲು ಒಂದು ಸಮಾರಂಭಕ್ಕೆ ಹೋಗುತ್ತಾಳೆ. ಆ ಸಮಾರಂಭದಲ್ಲಿ ಅಬ್ದುಲ್ ಎನ್ನುವ ಒಬ್ಬ ವ್ಯಕ್ತಿ ತಾನು ಏಡ್ಸ್ ರೋಗಿಗಳನ್ನು ಸಂದರ್ಶನ ಮಾಡಿದಾಗ ಆತನಿಗಾದ ಅನುಭವವನ್ನು ಸ್ವಾರಸ್ಯಕರವಾಗಿ ಬಿತ್ತರಿಸುತ್ತಾನೆ. ಲೈಂಗಿಕ ಕಾರ್ಯಕರ್ತೆಯರು ಪುರುಷರನ್ನು ತಮ್ಮ ಕಡೆ ಸೆಳೆಯಲು ರೇಟುಗಳನ್ನು ಕಮ್ಮಿ ಮಾಡುವ ಜಾಸ್ತಿ ಮಾಡುವ ಪ್ರಸಂಗಗಳು. ಅವರು ಯಾವ ಯಾವ ಒತ್ತಡಗಳಿಗೆ ಸಿಲುಕಿ ಇಂತಹ ಕೆಲಸಗಳಿಗೆ ಇಳಿದಿರುತ್ತಾರೆ. ಎನ್ನುವಂತಹ ವಿಚಾರವನ್ನು ತನ್ನ ಮಾಹಿತಿ ಪುಸ್ತಕದಲ್ಲಿ ದಾಖಲಿಸಿಕೊಂಡದನ್ನು ವಿವರಿಸುತ್ತಾನೆ. ಈ ಸಮಾರಂಭದಲ್ಲಿ ಶ್ಯಾಮಲಾ ಎಂಬ ಏಡ್ಸ್ ರೋಗಿ ತಮ್ಮ ಸಂಗಡಿಗರ ನೋವನ್ನು ಹಾಗೂ ತಾನೂ ಪಡುತ್ತಿರುವ ನೋವನ್ನು ನಿಸ್ಸಂಕೋಚವಾಗಿ ವಿವರಿಸುತ್ತಾಳೆ. ನಿರೂಪಕಿಗೆ ಇದೆಲ್ಲಾ ಅಸಹ್ಯವೆನ್ನಿಸುತ್ತದೆ. ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದ ವಿಜಯೇಂದ್ರ ಕೊನೆಯಲ್ಲಿ ಏಡ್ಸ್ ರೋಗಿಯರ ಮಾನಸಿಕ ತೊಳಲಾಟಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿದಾಗ ನಿರೂಪಕಿ ತನ್ನ ಮನೋಭಾವವನ್ನು ಬದಲಾವಣೆ ಮಾಡಿಕೊಳ್ಳುತ್ತಾಳೆ. ಈ ಕತೆಯಲ್ಲಿ ಸ್ತ್ರೀ ಸಮಾಜದಲ್ಲಿ ತನ್ನ ನಡತೆಯನ್ನು ಹಾಳು ಮಾಡಿಕೊಳ್ಳುವುದಕ್ಕೆ ಹಾಗು ಸಮಾಜದಿಂದ ದೂಶಿತಳಾಗುವುದಕ್ಕೆ ಪುರುಷನೇ ಕಾರಣ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮಹಿಳೆಯು

ತನ್ನಂತೆಯೇ ಇರುವ ಮತ್ತೊಬ್ಬ ಮಹಿಳೆಯ ಅಸಹಾಯಕತೆಯನ್ನು ಅರಿಯದೆ ಪುರುಷನಿಗಿಂತ ಹೆಚ್ಚು ಪ್ರಬಲವಾಗಿ ಲೈಂಗಿಕ ಕಾರ್ಯಕರ್ತೆಯರನ್ನು ದ್ವೇಶಿಸುವ ಅವರ ಒಡನಾಟದಿಂದ ದೂರವಿಡುವ ಕೆಟ್ಟ ಮನಸ್ಥಿತಿ ಈ ಕತೆಯಲ್ಲಿ ಚಿತ್ರಿತವಾಗಿದೆ.

ಈ ಕತೆಗೆ ೨೦೦೬ರ ದೀಪಾವಳಿ ವಿಶೇಷಾಂಕದಲ್ಲಿ ಎರಡನೇ ಬಹುಮಾನ ದೊರೆತಿದೆ.

❖ **ವಿರೇಶ ಸಾದ್ರಿ ಹೊರತ್ತಾಗಿ :-'ಪಾಲು'**

ಈ ಕತೆಯನ್ನು ಬ್ಯಾಟೆಯನ್ನೇ ತನ್ನ ಜೀವನ ಎಂದು ಕೊಂಡಿದ್ದ ಯಮನಪ್ಪ ಪ್ರತಿ ದಿನ ಮಾಂಸವಿಲ್ಲದೆ ಊಟಮಾಡುತ್ತಿರಲಿಲ್ಲ ಕೊನೆಪಕ್ಷ ಆತನಿಗೆ ಕೋಳಿ ಮಟ್ಟೆಯಾದರೂ ಊಟದ ಜೊತೆಗೆ ನೆಂಚಿಕೊಳ್ಳಲು ಬೇಕೇಬೇಕಾಗಿತ್ತು. ಹೀಗಿದ್ದಂತಹ ವ್ಯಕ್ತಿ ಕೊನೆಗೆ ಮಾಂಸವನ್ನು ತಿನ್ನುವುದನ್ನೇ ಬಿಡುತ್ತಾನೆ. ಈ ಕತೆಯಲ್ಲಿ ಹಸಿವು ಹಾಗೂ ಮಾಂಸದ ದಾಹ ಎಂಬುದು ಊರಿನ ತುಂಬ ಯಾವ ರೀತಿ ಹರಡುತ್ತದೆ.ಚಿಗರೆ ಮರಿಯ ಮುಗ್ಧತೆಯಿಂದ ಜನರ ಮನಸ್ಸು ಹೇಗೆ ಬದಲಾಗುತ್ತದೆ ಎಂಬುದನ್ನು ಕತೆಗಾರರು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಬ್ಯಾಟಿ ಯಮನಪ್ಪನೆಂದೇ ಊರಿನ ತುಂಬಾ ಪ್ರಸಿದ್ಧವಾದ ಯಮನಪ್ಪ ಒಂದು ದಿನ ಬ್ಯಾಟಿಗೆ ಹೋಗದೆ ಊರ ಮುಂದಿನ ಜಗಲಿಯ ಮೇಲೆ ಕುಳಿತಿರುತ್ತಾನೆ. ಅದೇ ಸಮಯದಲ್ಲಿ ಶಾಲೆಗೆ ರಜೆ ಇದ್ದ ಕಾರಣ ಶಾಲಾ ಮಕ್ಕಳು ಸುತ್ತಮುತ್ತಲು ಗದ್ದಲ ಮಾಡುತ್ತಿರುತ್ತಾರೆ. ಈ ಗದ್ದಲದಿಂದ ಬೇಸತ್ತ ಯಮನಪ್ಪ ಹಾಗೂ ಊರಿನ ಜನ ಮಕ್ಕಳನ್ನು ಗದರುತ್ತಾರೆ. ಆದರೂ ಅವರ ಗದ್ದಲ ಕಡಿಮೆಯಾಗುವುದಿಲ್ಲ ಆಗ ಶಾಲೆಯ ಮೇಸ್ತ್ರನ್ನು ಬೈದುಕೊಂಡು ಸುಮ್ಮನಾಗುತ್ತಾರೆ. ಅದೇ ಸಮಯಕ್ಕೆ ದಾರಿ ತಪ್ಪಿ ಊರಿಗೆ ಬಂದಿದ್ದ ಚಿಗರೆ ಮರಿ ಮಕ್ಕಳ ಗದ್ದಲಕ್ಕೆ ಹೆದರಿ ಅಲ್ಲೇ ಪಕ್ಕದ ಪೊದೆಯೊಂದರಲ್ಲಿ ಅಡಿಗಿಕೊಂಡಿರುತ್ತದೆ. ಚಿಗರೆಯನ್ನು ಕಂಡಂತಹ ಹುಡುಗರು ಆಶ್ಚರ್ಯದಿಂದ ಕೂಗಾಡುತ್ತಾರೆ. ಇವರಿಂದ ಎಚ್ಚೆತ್ತ ಯಮನಪ್ಪ ಕೂಡಲೇ ಚಿಗರೆಮರಿ ಇದ್ದಂತಹ ಸ್ಥಳಕ್ಕೆ ದಾವಿಸಿ ಅದನ್ನು ಹಿಡಿಯಲು ಮುಂದಾಗುತ್ತಾನೆ. ಬೇಟೆಯಲ್ಲಿ ಸಂಪೂರ್ಣ ಅನುಭವವಿದ್ದ ಯಮನಪ್ಪ ತನ್ನ ಎಲ್ಲಾ ಚತುರ್ ವಿದ್ಯೆಯನ್ನು ಬಳಸಿ ಚಿಗರೆ ಮರಿಯನ್ನು ಹಿಡಿದು ಹೆಗಲ ಮೇಲೆ ಹಾಕಿಕೊಂಡು ಮನೆಗೆ ಹೋಗುತ್ತಾನೆ.'ಮಕ್ಕಳೆಲ್ಲಾ ಕುತೂಹಲದಿಂದ ಯಮನಪ್ಪನ ಮನೆಯ ಮುಂದೆ ಆ ಚಿಗರೆ ಮರಿಯನ್ನು ನೋಡಲು, ಮುಟ್ಟಲು, ಆತುರವರೆಯುತ್ತಾರೆ. ಯಮನಪ್ಪ ಅವರನ್ನೆಲ್ಲಾ ಗದರಿಸಿ ಕಳುಹಿಸುತ್ತಾನೆ. ಯಮನಪ್ಪ ಮನೆಯಲ್ಲಿ ಚಿಗರೆ ಮಾಂಸಕ್ಕೆ ಮಸಾಲೆ ಅರೆಯಲು ತನ್ನ ಹೆಂಡತಿಗೆ ಆಜ್ಞಾಪಿಸಿದಾಗ ಊರಿನ ಜನ ಒಬ್ಬೊಬ್ಬರಾಗಿಯೇ ಚಿಗರೆ ಮಾಂಸದ ಪಾಲಿಗೆ ಬರುತ್ತಾರೆ. ಯಮನಪ್ಪನಿಗೆ ಆಶ್ಚರ್ಯ ಮತ್ತು ಕೋಪ ಎರಡೂ ಬರುತ್ತದೆ.

ಚಿಗರೆಯ ಮರಿಯನ್ನು ಹಿಡಿದು ತಂದವನು ನಾನು ಇವರೆಲ್ಲಾ ಪಾಲಿಗಾಗಿ ಬಂದಿದ್ದರಲ್ಲಾ ಎಂದು, ಆದರೆ ಊರಿನ ಜನ ನಮ್ಮ ಮಕ್ಕಳು ಗಲಾಟೆ ಮಾಡಿದ್ದರಿಂದಲೇ ಆ ಚಿಗರೆ ಮರಿ ಪೊದೆಯಲ್ಲಿ ಸೇರಿಕೊಂಡದ್ದು, ಅವರೇ ನಿನಗೆ ಆ ಚಿಗರೆ ಮರಿಯನ್ನು ತೋರಿಸಿದ್ದು, ಇದರಿಂದ ನಮಗೂ ಇದರಲ್ಲಿ ಪಾಲಿದೆ ಎಂದು ವಾದ ಮಾಡುತ್ತಾರೆ. ಈ ವಾದ ವಿವಾದದಿಂದ ಬೇಸತ್ತ ಯಮನಪ್ಪನ ಮನಸ್ಸು ಪರಿವರ್ತನೆಯಾಗಿ ಆ ಮುದ್ದು ಚಿಗರೆ ಮರಿಯ ಕಾಂತಿಯುತವಾದ ಮುಖವನ್ನು ನೋಡಿ ಆತನ ಮನಸ್ಸು ಕರಗಿ ಚಿಗರೆ ಮರಿಯನ್ನು ಕಾಡಿಗೆ ಬಿಡುತ್ತಾನೆ. ಅದೇ ರೀತಿ ಇನ್ನೆಂದು ಮಾಂಸ ತಿನ್ನುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

ಈ ಕತೆಯಲ್ಲಿ ತನ್ನ ಜೀವನದುದ್ದಕ್ಕೂ ಪ್ರಾಣಿವಧೆಯನ್ನು ಮಾಡುತ್ತಾ ಬಂದಿದ್ದ ಯಮನಪ್ಪ ಊರಿನ ಜನರೆಲ್ಲಾ ಚಿಗರೆ ಮರಿಯ ಮಾಂಸಕ್ಕಾಗಿ ಆತನೊಂದಿಗೆ ಜಗಳವಾಡಿದಾಗ ಮಾಂಸದ ಆಸೆನ್ನೇ ಬಿಡುತ್ತಾನೆ. ಜಗಳ, ವೈರತ್ವ ಪ್ರಾಣಿಗಾಗುವ ಹಿಂಸೆಯನ್ನು ಅರಿತು, ಅಹಿಂಸತತ್ವದ ಪರಮತ್ವವನ್ನು ಅರಿತು ಆತ ಚಿಗರೆಯ ಮರಿಯನ್ನು ಕಾಡಿಗೆ ಬಿಡುತ್ತಾನೆ. ಈ ಪ್ರಸಂಗ ಇಂದು ನಡೆಯುವ ಪ್ರಾಣಿ ಹಿಂಸೆಯನ್ನು ಹಾಗೂ ಅದರಿಂದಾಗುವ ಅನರ್ಥವನ್ನು ಪ್ರತಿಬಿಂಬಿಸುತ್ತದೆ. ಈ ಕತೆಗೆ ೨೦೦೮ರ ದೀಪಾವಳಿ ವಿಶೇಷಾಂಕದಲ್ಲಿ ಮೂರನೇ ಬಹುಮಾನ ದೊರೆತಿವೆ.

❖ **ನಾಗಮಂಗಲ ಕೃಷ್ಣಮೂರ್ತಿ:– 'ಡವ್ ಕೋತಿ'**

ಈ ಕತೆಯು ಮೈಸೂರಿನ ಐತಿಹಾಸಿಕ ಮಹತ್ವವನ್ನು ಟಿಪ್ಪುಸುಲ್ತಾನನ ಆದರ್ಶಗುಣವನ್ನು ವಿನಾಸದ ಅಂಚಿಗೆ ತಲುಪಿಸಿರುವ ಶ್ರೀರಂಗಪಟ್ಟಣದ ಸ್ಥಿತಿಯನ್ನು, ಅಲ್ಲಿನ ಗೈಡ್‌ಗಳು ಸುಳ್ಳು ಸುಳ್ಳಾಗಿ ಹೇಳುವಂತಹ ಕಟ್ಟು ಕತೆಗಳನ್ನು ಸ್ವಾರಸ್ಯವಾಗಿ ವಿವರಿಸುತ್ತದೆ.

ಟಿಪ್ಪು ಸುಲ್ತಾನನ ಆಜ್ಞೆಯ ಮೇರೆಗೆ ಫ್ರಾನ್ಸ್ ಗೆ ಟಪಾಲು ಹೊತ್ತು ತೆರಳಿದ್ದ ಬಿಳಿಯ ಪಾರಿವಾಳವು ಪ್ರಾನ್ಸ್ ಚಕ್ರವರ್ತಿಗೆ ಸಂದೇಶವನ್ನು ಮುಟ್ಟಿಸಿ ಹಿಂದಿರುಗಿದಂತಹ ಸಂದರ್ಭದಲ್ಲಿ ತನ್ನ ಕಣ್ಣಿಗೆ ಕಾಣುವಂತಹ ಶ್ರೀರಂಗಪಟ್ಟಣದ ಅನಾತ ಚಿತ್ರಣವನ್ನು ನೋಡಿ ಮರುಕ ವ್ಯಕ್ತಪಡಿಸುತ್ತದೆ. ಟಿಪ್ಪುಸುಲ್ತಾನನ ಆಸೆ ಆಕಾಂಕ್ಷೆಗಳು ಇಂದು ಏನಾಗಿವೆ? ಟಿಪ್ಪುವಿನ ನೆಲೆ ಎಲ್ಲಿ? ಈ ರೀತಿಯಾಗಿ ಪ್ರಶ್ನೆಗಳನ್ನು ಹಾಕಿಕಕೊಳ್ಳುತ್ತಾ ವ್ಯಥೆಪಡುತ್ತದೆ. ಟಿಪ್ಪುಸುಲ್ತಾನ್ ಬಿಳಿಯಕೋತಿಗಳನ್ನು ದೇಶದಿಂದ ತೊಲಗಿಸಲು ಪಟ್ಟಂತಹ ಸಾಹಸ, ದೇಶಿಯ ಮತ್ತು ವಿದೇಶಿಯರ ನೆರವನ್ನು ಪಡೆಯಲು ಹಂಬಲಿತಿ ಕೊನೆಗೆ ಆತ ಮಡಿದಂತಹ ಸಂಗತಿಯನ್ನು ಜ್ಞಾಪಿಸಿಕೊಳ್ಳುತ್ತದೆ. ಶ್ರೀರಂಗಪಟ್ಟಣದಲ್ಲಿನ ಗೈಡ್ 'ರಂಗಚಾರಿ'

ಇಲ್ಲಿಗೆ ಬರುವಂತಹ ಜನರನ್ನು ಮೋಡಿಮಾಡುವ ಉದ್ದೇಶದಿಂದ ಟಿಪ್ಪುವಿನ ಬಗ್ಗೆ ಅನೇಕ ರೀತಿಯ ಕತೆಗಳನ್ನು ತಾನೇ ಸೃಷ್ಠಿಮಾಡಿ ಹೇಳುವಂತಹ ಸಂಗತಿ ಹಾಗೂ ಇದನ್ನೆಲ್ಲಾ ಕೇಳಿ ತಲೆ ತಿರುಗಿ ಬೀಳುವ ಪಾರಿವಾಳ ಇದು ಈ ಕತೆಗೊಂದು ರೋಚಕತೆಯನ್ನು ತಂದು ಕೊಡುತ್ತದೆ. ಪಾರಿವಾಳ ಶ್ರೀರಂಗಪಟ್ಟಣದ ಕೋಟೆಯ ಸುತ್ತ ವಾಸವಾಗಿದ್ದ ತನ್ನ ಪಾರಿವಾಳಗಳ ಬಳಗವನ್ನು ಹುಡುಕುತ್ತದೆ. ಆದರೆ ಅಲ್ಲಿ ತನ್ನವರಾರೂ ಇಲ್ಲದನ್ನು ನೋಡಿ ಮರುಗಿ ಶ್ರೀರಂಗಪಟ್ಟಣದ ಹೊಸ ವಾತಾವರಣಕ್ಕೆ ಹೊಂದಿಕೊಳ್ಳದೆ ಇಲ್ಲಿರುವದು ಬೇಡ ಎಂದು ಗಾಂಧಿನಾಡಿನತ್ತ ಧಾವಿಸುತ್ತವೆ. ಗಾಂಧಿನಾಡು ಶಾಂತಿ ನೆಮ್ಮದಿಯ ತಾಣವಾಗಿರದೆ ಅಲ್ಲಿಯಾರೋ ಕುರುಚಲು ಗಡ್ಡದ ಕಂಚಿನ ಕಂಠದ ಅಜಾನುಬಾಹುವೊಬ್ಬ ಸಿಂಹಾಸನದಲ್ಲಿ ಕೂತಿರುವ ಸಂಗತಿಯನ್ನು ಕಂಡು ಗಾಂಧಿಯತತ್ವಗಳು ಇಲ್ಲಿಯೂ ಮರೆಯಾಗಿರುವುದನ್ನು ಕಂಡು ದುಃಖಿಸುತ್ತದೆ. ಟಿಪ್ಪು ನಾಡಿನಲ್ಲಿ ಬೃಹದಾಕಾರದ ಹದೊಂದು ತನ್ನ ಕಾಲಿನಿಂದ ಕೋಟೆಯನ್ನು ಕೆದಕಿ ಹುರುಳಿಸುತ್ತಿರುವ ದೃಶ್ಯ ಶ್ರೀರಂಗಪಟ್ಟಣದ ಸ್ಮಾರಕಗಳ ವಿನಾಶವನ್ನ ಸೂಚಿಸುತ್ತದೆ.

ಈ ಕತೆಯಲ್ಲಿ ಐತಿಹಾಸಿಕ ಸಂಗತಿ ವಸ್ತುವಾಗಿ ಬಂದಿದ್ದರೂ ಪ್ರಸ್ತುತವಾಗಿರುವ ಸಮಾಜದ ಅವ್ಯವಸ್ಥೆ ನಾವು ನಮ್ಮ ಸ್ಮಾರಕಗಳನ್ನು ಹಾಗೂ ಐತಿಹಾಸಿಕ ಸಂಗತಿಗಳನ್ನು ಯಾವ ರೀತಿ ಹಾಳುಮಾಡುತ್ತಿದ್ದೇವೆ. ನಮ್ಮ ಇಂದಿನ ಬದುಕು ಯಾವ ರೀತಿಯಲ್ಲಿ ಯಾಂತ್ರಿಕತೆಯಿಂದ ಸಾಗುತ್ತಿದೆ. ಎಂಬ ಅಂಶವನ್ನು ಈ ಕತೆ ಸೃಷ್ಟಿಕರಿಸುತ್ತದೆ. ನಮ್ಮ ಹಿರಿಯರ ಆದರ್ಶಮೌಲ್ಯಗಳು ಎಲ್ಲಿವೆ? ಎಂದು ಪ್ರಶ್ನೆ ಮಾಡುತ್ತದೆ. ಈ ಕತೆಗೆ ೨೦೦೮ರ ಮೊದಲ ಬಹುಮಾನ ದೊರೆತಿದೆ.

❖ **ಮೋಹನಹಬ್ಬು :– 'ವೃತ್ತಗೊಳಗೊಂದು ವೃತ್ತ'**

ಈ ಕತೆಯಲ್ಲಿ ಬಡತನಕ್ಕೆ ಹೆದರಿದ ವ್ಯಕ್ತಿಯೋರ್ವ ಜೀವನವನ್ನು ಸಾಗಿಸಲಾರದೆ ತನ್ನ ಹೆಂಡಿತಿ ಮಕ್ಕಳನ್ನು ನಡುದಾರಿಯಲ್ಲಿ ಕೈಬಿಟ್ಟು ಹೊರಟು ಹೋಗುತ್ತಾನೆ. ಮುಂದೆ ಆತನಿಗೆ ತನ್ನ ತಪ್ಪಿನ ಅರಿವಾಗಿ ಮರಳಿ ಮನೆಗೆ ಬರುತ್ತಾನೆ. ಅಂದರೆ ಈ ಕತೆಯಲ್ಲಿ ಎಂದೆಂದಿಗೂ ಮನುಷ್ಯ ತನ್ನವರನ್ನು, ತನ್ನ ಬಂಧುಬಾಂದವರನ್ನು ಅಗಲಿ ಜೀವಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತದೆ.

ಶರ್ಮ ಎನ್ನುವ ಒಬ್ಬ ಬ್ರಾಹ್ಮಣ ವ್ಯಕ್ತಿ ಹೆಂಡತಿ ಹಾಗೂ ಇಬ್ಬರು ಮಕ್ಕಳನ್ನು ಹೊಂದಿದ್ದು ಆತ ಬಡತನದ ಬೇನೆಗೆ ಸಿಲುಕಿ ಮನೆಯಿಂದ ಕಾಲು ಹೊರಗಿಟ್ಟಾಗ ದಾರಿಯಲ್ಲಿ ಸಾಲಕೊಟ್ಟವರ ಕಾಟವನ್ನು ತಾಳಲಾರದೆ; ಸಂಸಾರ ಸಾಗಿಸಲು ಅಸಾಧ್ಯ

ಎನ್ನುವಂತಹ ಸ್ಥಿತಿಗೆ ಬಂದು ನಿಲ್ಲುತ್ತಾನೆ. ಶರ್ಮ ಬಹಳ ಯೋಚಿಸಿ ಮನೆಬಿಟ್ಟು ಹೊರಡುವ ದೃಢ ನಿರ್ಧಾರವನ್ನು ಮಾಡುತ್ತಾನೆ. ತನ್ನ ಮನೆಯಲ್ಲಿ ಒಂದು ಪತ್ರವನ್ನು ಬರೆದಿಟ್ಟು ಮನೆಯಿಂದ ಹೊರಬಂದು ಶಿರಸಿಯ ಬಸ್ ನಿಲ್ದಾಣದಲ್ಲಿ ನನ್ನನ್ನು ಯಾರಾದರೂ ನೋಡುತ್ತಾರೆಯೇ ಎಂದು ಹೆದರಿಕೆಯಿಂದ ಯಾರಿಗೂ ಕಾಣದಂತೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾನೆ. ದಾರಿಯ ಮಧ್ಯೆ ಕಾಡಿನಲ್ಲಿ ನಡೆದು ಸಾಗುತ್ತಿರಬೇಕಾದರೆ ದೂರದಲಿದ್ದ ಒಂದು ಗುಡಿಸಲಿನ ಬಳಿ ಹೋಗುತ್ತಾನೆ. ಗುಡಿಸಲಿನಲ್ಲಿ ವಾಸವಾಗಿದ್ದ ಬಸಪ್ಪ ಶರ್ಮರನ್ನು ಕಂಡು ಯಾರು? ಏನು? ಎಂದು ವಿಚಾರಿಸಿ ತನ್ನ ಮನೆಯಲ್ಲಿ ಜಾಗವನ್ನುಕೊಡುತ್ತಾನೆ. ಹೀಗೆ ಬಸಪ್ಪನ ಮನೆಯಲ್ಲಿ ಆಶ್ರಯ ಪಡೆಯುತ್ತಾನೆ. ಬಸಪ್ಪನ ಯಜಮಾನನಿಂದ ಲೆಕ್ಕ ಬರೆಯುವ ಕೆಲಸ ಪಡೆದು ತನ್ನ ಜೀವನವನ್ನು ಸಾಗಿಸುತ್ತಿರುತ್ತಾನೆ. ಆತನಿಗೆ ತನ್ನ ಮನೆ, ಹೆಂಡತಿ ಮಕ್ಕಳು ಪದೇ ಪದೇ ಜ್ಞಾಪಕಕ್ಕೆ ಬಂದರೂ ಸಹ ತನ್ನ ಹಿಂದಿನ ಬಡತನದ ಬೇಗೆ ಆತನ ಮನಸ್ಸನ್ನು ಹಿಂಡುತ್ತಿರುತ್ತದೆ. ಬಸಪ್ಪ ತನ್ನ ಜೀವನದಲ್ಲಿ ತಾನು ಅನುಭವಿಸಿದ ಹಾಗೂ ತನ್ನ ತಂದೆ ತನಗೆ ಮಾಡಿದ ಅನ್ಯಾಯವೆಲ್ಲವನ್ನು ಹೇಳಿ ತನ್ನ ಜೀವನದ ದುರ್ಘಟನೆಯನ್ನು ವಿವರಿಸುತ್ತಾನೆ. ಇದನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡ ಶರ್ಮ ತಾನು ಮಾಡಿದ್ದು ಸರಿಯೇ? ಆಸಹಾಯಕಳಾದ ಹೆಂಡತಿ ಹಾಗೂ ಚಿಕ್ಕಮಕ್ಕಳನ್ನು ಬಿಟ್ಟು ಬಂದೆನಲ್ಲಾ ಅವರ ಗತಿ ಏನಾಗಿರಬಹುದು ನನ್ನ ಹೆಂಡಿತಿ ಎಷ್ಟು ಕಷ್ಟಪಟ್ಟಿರಬಹುದು ಎಂಬುದಾಗಿ ಯೋಚಿಸಿತ್ತಾನೆ ನಂತರ ತನ್ನ ಮನಸ್ಸನ್ನು ಸಂಪೂರ್ಣ ತಿದ್ದಿಕೊಂಡು ಮರಳಿ ಮನೆಗೆ ಹೊರಡುತ್ತಾನೆ. ಶರ್ಮರ ೨ನೇ ಮಗನು ತನ್ನ ತಂದೆ ಮನೆಯನ್ನು ತೊರೆದು ಹೋದ ಮೇಲೆ ಮನೆಯ ಸಂಸಾರದ ಬಾರವನ್ನೆಲ್ಲಾ ಹೊತ್ತು ತನ್ನ ಓದನ್ನು ಮುಂದು ವರೆಸುತ್ತಿರುತ್ತಾನೆ. ತನ್ನ ತಂದೆ ದಿಢೀರನೇ ಮನೆಗೆ ಪ್ರತ್ಯಕ್ಷವಾಗಿದ್ದನ್ನು ಕಂಡು ಮುಗಳುನಕ್ಕು ತನ್ನ ಓದನ್ನು ಮುಂದುವರೆಸುತ್ತಾನೆ. ಆದರೆ ಆತನ ಮನದಲ್ಲಿ ತನ್ನ ತಂದೆ ಮತ್ತೆ ಯಾಕೆ ಮನೆಗೆ ಹಿಂದಿರುಗಿದ ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ.

ಈ ಕತೆ ಮನುಷ್ಯನ ಅವಿನಾಭಾವ ಸಂಬಂಧ ಎಂದೆಂದೂ ಕಡೆದು ಹೋಗಲು ಸಾಧ್ಯವಿಲ್ಲ, ಸಮಾಜದಲ್ಲಿ ತಮ್ಮ ಕಷ್ಟವೇ ದೊಡ್ಡದಲ್ಲ ನಮಗಿಂತಲೂ ಕಷ್ಟದಲ್ಲಿರುವವರು ನಮಗಿಂತಲೂ ಹೆಚ್ಚು ನೋವನ್ನುಂಡವರು ಇರುತ್ತಾರೆ. ಇವರನ್ನೆಲ್ಲಾ ನೋಡಿ ನಾವು ಜೀವನ ಬಂಡಿಯನ್ನು ಮುನ್ನೆಡೆಸಬೇಕು. ನೋವಿನಿಂದ, ಸಂಕಷ್ಟಗಳಿಂದ ದೂರವಾಗಿರುವುದು ಬದುಕೇಅಲ್ಲ ಎಂಬುದನ್ನು ಸಾರಿ ಸಾರಿ ಹೇಳುತ್ತದೆ. ಈ ಕತೆಗೆ ೨೦೦೭ರಲ್ಲಿ ದೀಪಾವಳಿ ವಿಶೇಷಾಂಕದಲ್ಲಿ ೨ನೇ ಬಹುಮಾನ ಪಡೆದುಕೊಂಡಿದೆ.

❖ ಬಿ.ಆರ್, ವೆಂಕಣ್ಣ :- 'ಮುಗಿಲೊಡಲ ಮಿಂಚು'

ಈ ಕತೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸಕ್ಕೆ ಸೇರಿದಂತಹ ಯುವಕನು ತಾನು ಹೊಸದಾಗಿ ಪೇದೆಯಾಗಿ ಸೇರಿದಾಗ ತಾನು ಅನುಭವಿಸಿದ ಕಷ್ಟಗಳನ್ನು ವಿವರಿಸುತ್ತಾನೆ. ಕೊನೆಗೆ ಪೊಲೀಸ್ ವ್ಯವಸ್ಥೆಯ ವಿರುದ್ಧ ಆತ ಸಿಡಿದು ಬೀಳುತ್ತಾನೆ. ಪ್ರಸ್ತುತವಾಗಿ ಈ ಕತೆಯು ಇಂದು ಅಸ್ಥಿತ್ವದಲ್ಲಿರುವ ಪೊಲೀಸ್ ವ್ಯವಸ್ಥೆಯಲ್ಲಿ ಅಡಗಿರುವ ಅವ್ಯವಸ್ಥೆ ಹಾಗೂ ಅದರಲ್ಲಿ ನಡೆಯುವ ಶೋಷಣೆಯನ್ನು ಸೂಕ್ಷ್ಮವಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಪೊಲೀಸ್ ಪೇದೆಯಾಗಿ ಕೆಲಸಕ್ಕೆ ಸೇರಿದ ಯುವಕ ಸ್ಟೇಷನ್ ಒಳಗೆ ಕಾಲಿಡುತ್ತಿದ್ದಂತೆಯೇ ಆತನಿಗೆ ಅನೇಕ ರೀತಿಯ ನಿಷೇಧಗಳನ್ನು ಹಾಗೂ ಆತನು ಸ್ಟೇಷನ್ನಿನಲ್ಲಿ ಮಾಡಬೇಕಾಗಿರುವ ಕೆಲಸಗಳನ್ನು ಸೂಚಿಸುತ್ತಾರೆ. ಈ ವ್ಯವಸ್ಥೆಯನ್ನು ಕಂಡಂತಹ ಪೇದೆ ಒಲ್ಲದ ಮನಸ್ಸಿನಿಂದ ಕೆಲಸ ನಿರ್ವಹಿಸುತ್ತಿರುತ್ತಾನೆ. ರಾಜಶೇಖರ ಎಂಬ ಮತ್ತೊಬ್ಬ ಸೀನಿಯರ್ ಪೇದೆ, ಹೊಸ ಪೇದೆಗೆ ಬಹಳ ಆತ್ಮೀಯನಾಗುತ್ತಾನೆ. ಆತನಿಂದ ಪೊಲೀಸ್ ಸ್ಟೇಷನ್ನಿನ ರಹಸ್ಯವನ್ನು ತಮ್ಮ ಪೊಲೀಸರು ಎಸಗುವ ಹೇಸಿಗೆ ಕೆಲಸವನ್ನೆಲ್ಲಾ ತಿಳಿದುಕೊಳ್ಳುತ್ತಾನೆ. ಇವರಿಂದ ಈ ಹುದ್ದೆಗೆ ಯಾಕಾದರೂ ಸೇರಿದೆನೋ ಎಂದು ಮರುಗುತ್ತಾನೆ. ಈತ ಈ ರೀತಿ ಮರುಗುವುದಕ್ಕೆ ಒಂದು ಕಾರಣವಿರುತ್ತದೆ. ಚಿಕ್ಕವಯಸ್ಸಿನಲ್ಲಿ ತಂದೆ ತಾಯಿಯನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿ ಬೆಳೆಯುತ್ತಾನೆ. ಗೌಡನ ಮನೆಯ ಕೆಲಸವನ್ನು ಮಾಡಕೊಂಡು ಡಿಗ್ರಿಯನ್ನು ಪಡೆಯುತ್ತಾನೆ. ಡಿಗ್ರಿ ಮುಗಿಸಿದ ನಂತರ ತನ್ನಣ್ಣನ ಒತ್ತಾಯದ ಮೇರೆಗೆ ಆ ಊರಿನ ಸಾರಾಯಿ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾನೆ. ಹೀಗಿದ್ದಾಗ ಹಿಂದೆ ಯಾವಾಗಲೋ ಆತ ಪೇದೆ ನೇಮಕಾತಿ ಪರೀಕ್ಷೆಗೆ ಹೋಗಿ ಬಂದಿರುತ್ತಾನೆ. ಈತ ಆಯ್ಕೆ ಯಾಗದಿದ್ದರೂ ಕಾದಿರಿಸಿದ ಪಟ್ಟಿಯಲ್ಲಿ ಇವನ ಹೆಸರಿಸುತ್ತದೆ. ಕೊನೆಗೆ ಕೆಲವು ತಿಂಗಳುಗಳಾದ ಮೇಲೆ ಈತನಿಗೆ ಕೆಲಸಕ್ಕೆ ಆರ್ಡರ್ ಬರುತ್ತದೆ. ಈ ಸಂಗತಿಯನ್ನು ಕೇಳಿ ಬಹಳ ಸಂತೋಷದಿಂದ ಆತ ಪೇದೆ ಕೆಲಸಕ್ಕೆ ಸೇರುತ್ತಾನೆ. ಈ ರೀತಿಯಾಗಿ ಕೆಲಸಕ್ಕೆ ಸೇರಿದವನಿಗೆ ಕೆಲಸ ಮಾಡಲು ಇಷ್ಟವಿರದಿದ್ದರೂ ಅದನ್ನು ಬಿಟ್ಟರೆ ಹಿಂದೆ ತಾನು ಅನುಭವಿಸಿದ ಕಷ್ಟಕ್ಕೆ ಮರಳಿ ಧುಮುಕುವುದು ಹೇಗೆ ಎಂದು ಯೋಚಿಸಿ ಮಾನಸಿಕ ಯಾತನೆ ಪಡುತ್ತಾನೆ. ಕೊನೆಗೆ ಪೊಲೀಸ್ ವ್ಯವಸ್ಥೆಯಿಂದ ಬೇಸತ್ತು ಯುವ ಕ್ರಾಂತಿಕಾರಿಯಾಗಿ ರೂಪುಗೊಳ್ಳುತ್ತಾನೆ. ಈ ಕತೆಯು ಪೊಲೀಸ್ ವ್ಯವಸ್ಥೆಯ ಇಂದಿನ ಕ್ರೌರ್ಯವರ್ತನೆ ಹೊಸ ಪೇದೆಗಳು ಅನುಭವಿಸುವ ಮಾನಸಿಕ ಯಾತನೆಯನ್ನುಸ್ವಾರಸ್ಯವಾಗಿ ಚಿತ್ರಿಸುತ್ತದೆ. ಈ ಕತೆಗೆ ೧೯೯೭ರ ದೀಪಾವಳಿ ವಿಶೇಷಾಂಕದಲ್ಲಿ ಮೊದಲನೇ ಬಹುಮಾನ ದೊರೆತಿದೆ.

❖ **ಸಂದೀಪ ನಾಯಕ :– 'ಉರುಳಿದ ವೃಕ್ಷ'**

ಈ ಕತೆಯಲ್ಲಿ ಮನುಷ್ಯನ ದೃಷ್ಟ ಬುದ್ಧಿ ನಮ್ಮ ಸುತ್ತಲಿನ ಪರಿಸರಕ್ಕೆ ಯಾವ ರೀತಿ ಮಾರಕವಾಗುತ್ತದೆ ಎಂಬುದನ್ನು ಕತೆಗಾರ ಸ್ವಾರಸ್ಯವಾಗಿ ಈ ಕತೆಯಲ್ಲಿ ವಿವರಿಸಿದ್ದಾನೆ. ಎರಡು ಕುಟುಂಬಗಳಿಗೆ ತಮ್ಮ ಹಿರಿಯರಿಂದ ಭಾಗವಾಗಿ ಬಂದಿದ್ದ ಬೃಹದಾಕಾರವಾದ ಮಾವಿನ ಮರ ತಮಗೂ ಸುತ್ತಮುತ್ತಲ ಮನೆಯವರಿಗೆ ಹೇಗೆ ಉಪಕಾರಿಯಾಗಿತ್ತು. ಎಂಬುದನ್ನು ನಿರೂಪಕ ಸ್ವಾರಸ್ಯವಾಗಿ ವಿವರಿಸಿದ್ದಾನೆ. ಊರಿಗೆ ಬಸ್ಸು ಬರಲು ಯೋಗ್ಯವಾದ ರಸ್ತೆ ಬೇಕೆಂದು, ರಸ್ತೆ ಮಾಡಲು ಈ ಬೃಹದಾಕಾರವಾದ ಮರವನ್ನು ಕಡಿಯುತ್ತಾರೆಂಬ ಸುದ್ದಿ ಊರಿನಲ್ಲೆಲ್ಲಾ ಹರಡುತ್ತದೆ. ನಿರೂಪಕ ಮರವು ನಮಗೆ ವಂಶಪಾರಂಪರ್ಯವಾಗಿ ಬಂದದ್ದು ಇದ್ದರಿಂದ ಊರಿನವರಿಗಿರುವ ಉಪಕಾರವನ್ನು ಅರಿತು ಮರವನ್ನು ಕಡಿಯಲು ಬಿಡದೆ ಪ್ರತಿಭಟಿಸುತ್ತಾನೆ. ಊರಿನ ಜನ ಈ ಮರದಿಂದ ನಮ್ಮೂರಿಗೆ ಬಸ್ಸು ಬರದಂತಾಗುತ್ತದೆ ಎಂದು ಆತನೊಂದಿಗೆ ವಾದ ಕ್ಕಿಳಿಯುತ್ತಾರೆ. ಊರಿನವರ ಮನಸ್ಥಾಪವನ್ನು ಸಹಿಸಲಾಸಾಧ್ಯವಾಗಿ ಮರವನ್ನು ಕಡಿಸಲು ಒಪ್ಪುತ್ತಾನೆ. ಆ ಊರಿನ ದೇವಣ್ಣ ಮರದ ವ್ಯಾಪಾರಿಯಾಗಿದ್ದು ಆ ಮರವನ್ನು ಕಡಿಯುವುದಕ್ಕೆ ಕುಮ್ಮಕ್ಕು ನೀಡಿರುತಾನೆ. ಊರಿನವರ ಬೇಡಿಕೆಯಂತೆ ಬೃಹದಾಕಾರವಾದ ಮಾವಿನ ಮರವನ್ನು ಕಡಿಯಲಾಗುತ್ತದೆ. ಹೀಗೆ ಮರ ಕಡಿದು ಎಷ್ಟು ದಿನಗಳಾದರೂ ರಸ್ತೆಯೇ ಆಗುವುದಿಲ್ಲ. ಬಸ್ಸು ಊರ ಒಳಗೆ ಬಾರದೆ ಊರ ಹೊರಗಡೆಯೇ ಬಂದು ಹೋಗುತ್ತಿರುತ್ತದೆ. ಊರಿನ ಜನ ಮಾವಿನ ಮರದ ಸಂವೃದ್ಧಿಯನ್ನು ನೋಡಲು ಸಹಿಸದೆ ಯಾವುದೋ ಒಂದು ಕುಂಟುನೆಪ ಮಾಡಿ ಕೊಂಡು ಮರವನ್ನು ಕಡಿದುರುಳಿಸುತ್ತಾರೆ.

ಈ ಕತೆಯಲ್ಲಿ ಮನುಷ್ಯ ತನ್ನ ಕೆಟ್ಟ ಆಲೋಚನೆಯಿಂದ ತನ್ನ ಸುತ್ತಲಿನ ಪರಿಸರವನ್ನು ಯಾವ ರೀತಿ ನಾಶಮಾಡುತ್ತಾನೆ. ಸಮಾಜದ ತುಂಬೆಲ್ಲಾ ಆಸೂಯೆ, ಕಂದಾಚಾರಗಳು ಹೆಚ್ಚಿ ಮನುಷ್ಯ ತನ್ನ ವಿನಾಶದ ಜೊತೆಗೆ ಮೂಖ ಪರಿಸರವನ್ನು ತುಳಿತಕ್ಕೆ ಈಡು ಮಾಡುವ ಪರಿಸ್ಥಿತಿಯನ್ನು ಕತೆಗಾರ ತನ್ನ ಕತೆಯಲ್ಲಿ ಕಟ್ಟಿಕೊಟ್ಟಿದ್ದಾನೆ. ಈ ಕತೆಗೆ ೨೦೦೩ರ ದೀಪಾವಳಿ ವಿಶೇಷಾಂಕದಲ್ಲಿ ಮೂರನೇ ಬಹುಮಾನ ದೊರೆತಿದೆ.

❖ **ಗಂಗಾದರ ಬೀಚನಹಳ್ಳಿ : – 'ಜೀಮಾತ ವಾಹನ'**

ಈ ಕತೆಯಲ್ಲಿ ನಿರೂಪಕ ತನಗಾದ ಅನುಭವವನ್ನೋ ಅಥವಾ ತನಗೆ ನಿದ್ರೆಯಲ್ಲಿ ಬಿದ್ದ ಕನಸನ್ನೋ ಇಲ್ಲಿ ಕತೆಯಾನ್ನಾಗಿ ಮೂಡಿಸಿದ್ದಾನೆ. ನಿರೂಪಕ ತನ್ನ ಹೆಂಡತಿಯೊಂದಿಗೆ ರಾತ್ರಿ ಮಲಗಿದ್ದಾಗ ದಿಢೀರನೆ ಆತನಿಗೆ ಎಚ್ಚರಕೆಯಾಗುತ್ತದೆ. ಕಣ್ಣನ್ನು

ತೆರೆದು ನೋಡುತ್ತಾನೆ. ತನ್ನ ಮನೆಯ ಕಿಟಕಿಯ ಬಳಿ ಕಳ್ಳನೋರ್ವ ಕಳ್ಳತನಕ್ಕೆ ಸಂಚು ರೂಪಿಸುತ್ತಿರುವುದು ಕಾಣುತ್ತದೆ. ಕಳ್ಳನನ್ನು ಕಂಡೊಡನೆ ಹೆದರಿ ತನ್ನ ಹೆಂಡಿತಿಯನ್ನು ಎಚ್ಚರಿಸಲು ಮುಂದಾಗಿ ಮತ್ತೆ ತಡೆದು, ಅವಳು ಎದ್ದರೆ ಕಿರುಚಾಡುತ್ತಾಳೆಂದು ಸುಮ್ಮನಾಗುತ್ತಾನೆ. ಕಳ್ಳನು ತನ್ನ ಕಳ್ಳತನಕ್ಕಾಗಿ ಮಾಡುತ್ತಿರುವಂತಹ ಸಂಚುಗಳನ್ನೆಲ್ಲಾ ಗಮನಿಸುತ್ತಿರುತ್ತಾನೆ. ನಿರೂಪಕ ತನ್ನ ಮನಸ್ಸಿನಲ್ಲಿರು ಭಯ ಹಾಗೂ ತನ್ನ ತಾಯಿ ನಾನು ಚಿಕ್ಕವನಿದ್ದಾಗ ಹೇಳುತ್ತಿದ್ದ ಕಳ್ಳರ ಕತೆಗಳನ್ನು ನೆನೆದು ಬಹಳ ಭಯ ಬೀತನಾಗುತ್ತಾನೆ. ಅಕ್ಕಪಕ್ಕದ ಮನೆಗಳಲ್ಲಿ ಕಳ್ಳತನಗಳಾದಾಗ ಅವರು ವಿವರಿಸುತಿದ್ದ ಕಳ್ಳರ ಸಾಹಸಗಳು ನಿರೂಪಕನಲ್ಲಿ ಚಿಂತೆ ಮತ್ತು ಭಯ ಎರಡೂ ಮೂಡುವಂತೆ ಮಾಡುತ್ತವೆ.

ಕಳ್ಳ ಕಿಟಕಿಯಿಂದ ಮನೆಯ ಒಳಗಡೆ ಇರುವ ವಸ್ತುಗಳನ್ನು ಗಮನಿಸುತ್ತಾನೆ. ಆತನ ಕಣ್ಣಿಗೆ ಟೇಬಲ್ ಮೇಲೆ ಇರುವ ಚಿನ್ನದ ಸರ ಕಾಣುತ್ತವೆ. ಸರವನ್ನು ತೆಗೆದುಕೊಳ್ಳಲು ಕೈಯನ್ನು ಚಾಚುತ್ತಾನೆ. ಸರ ಎಟುಕದೇ ಹೋದಾಗ ಎರಡು ಕಲ್ಲುಗಳ ಮೇಲೆ ನಿಂತು ಕಡ್ಡಿಯನ್ನು ತೆಗೆದುಕೊಂಡು ಸರವನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಾನೆ. ನಿರೂಪಕ ಕಳ್ಳನ ಕೈಯನ್ನು ಹಿಡಿಯಲು ಪ್ರಯತ್ನಿಸಿ ನಂತರ ಹೆದರಿ ಸುಮ್ಮನಾಗುತ್ತಾನೆ. ಕಳ್ಳ ಕಡ್ಡಿಯ ಮೂಲಕ ಸರವನ್ನು ತೆಗೆದುಕೊಳ್ಳಲು ಪ್ರಯತ್ನಿಸಿದಾಗ ನಿರೂಪಕ ಸರವನ್ನು ಕೆಳಗೆ ಬೀಳಿಸುತ್ತಾನೆ. ಸರವನ್ನು ಕದಿಯಲು ಸಾಧ್ಯವಾಗದಿದ್ದಾಗ ಕಳ್ಳ ಬಂದ ದಾರಿಗೆ ಸುಂಕವಿಲ್ಲವೆನ್ನುವಂತೆ ವಾಪಾಸ್ಸಾಗಲು ಮುಂದಾಗುತ್ತಾನೆ. ನಿರೂಪಕ ಆತನನ್ನು ಹಿಡಿಯಲು ಮನಸ್ಸುಮಾಡಿ ಮನೆಯಿಂದ ಹೊರಗೆ ತನಗೊದಗುವ ಅಪಾಯ, ಸಂಕಷ್ಟಗಳನ್ನು ನೆನೆದು ಸುಮ್ಮನಾಗುತ್ತಾನೆ. ಬೆಳಗ್ಗೆ ಎದ್ದು ನೋಡಿದಾಗ ಸರ ಕೆಳಗಡೆ ಬಿದ್ದಿರುವುದಿಲ್ಲ ಟೇಬಲ್ ಮೇಲೆಯೇ ಇರುತ್ತದೆ. ನಿರೂಪಕ ಈ ಪ್ರಸಂಗವನ್ನು ತನ್ನ ಹೆಂಡತಿಗೂ ಹೇಳದೆ ಸುಮ್ಮನಾಗುತ್ತಾನೆ. ಈ ಪ್ರಸಂಗ ನಿಜವಾಗಿ ನೆಡೆದದ್ದೊ ಅಥವಾ ಕನಸೋ ಎಂಬುದು ಆತನಿಗೆ ತಿಳಿಯದಂತಾಗುತ್ತದೆ. ಈ ಕತೆಯಲ್ಲಿ ಕಳ್ಳತನದ ಸನ್ನಿವೇಶವನ್ನೇ ಉತ್ತಮ ತಂತ್ರಗಾರಿಕೆಯ ಮೂಲಕ ಕತೆಗಾರ ಸ್ವಾರಸ್ಯವಾಗಿ ಚಿತ್ರಿಸಿದ್ದಾನೆ. ಇಲ್ಲಿ ಓದುಗರಿಗೆ ಈ ಕತೆ ನಿರೂಪಕನಿಗಾದ ಅನುಭವವೋ ಅಥವಾ ಕನಸೋ ಎಂಬುದು ಅವರಲ್ಲಿ ಸಂದೇಹವನ್ನು ಮತ್ತು ಕುತುಹಲವನ್ನು ಮೂಡಿಸುತ್ತದೆ. ಈ ಕತೆಗೆ ೨೦೦೨ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಪ್ರಥಮ ಬಹುಮಾನ ದೊರಕಿದೆ.

❖ **ಬಿ.ಎಂ. ಗಿರಿರಾಜ್ : 'ಎಲ್ಲೋ ಹುಟ್ಟಿ ಎಲ್ಲೋ ಬೆಳೆದು'**

ಈ ಕತೆಯು ಮುಸ್ಲಿಂ ಸಂವೇದನಾ ದೋರಣೆಗಳನ್ನು ಒಳಗೊಂಡ ಕತೆಯಾಗಿದೆ. ನಝರೀನ ಎಂಬ ಮಹಿಳೆ ಶಿವಸುಂದರರಂರವರ ಆಫೀಸಿನಲ್ಲಿ ಸ್ಟೆನೋಗ್ರಾಫರ್ ಆಗಿ ಕೆಲಸ

ನಿರ್ವಹಿಸುತ್ತಿರುತ್ತಾಳೆ. ಅದೇ ಕಛೇರಿಯಲ್ಲಿ ಲಾ ಪ್ರಾಕ್ಟೀಸ್ ಮಾಡುತ್ತಿದ್ದ ಇರಬಾರ್ಖು ಒಮ್ಮೆ ಝುರೀನಳನ್ನು ಮದುವೆಯಾಗುತ್ತೀಯ ಎಂದು ಕೇಳುತ್ತಾನೆ. ಈ ಮಾತನ್ನು ಕೇಳಿ ನರ್ಝುರೀನಗೆ ಭಯ, ಆತಂಕ, ನಾಚಿಕೆ, ನೋವು ಎಲ್ಲವೂ ಒಟ್ಟಿಗೆ ಬಂದು ಆಕೆಯನ್ನು ಅಪ್ಪಳಿಸಿದಂತಾಗುತ್ತದೆ. ಆಗ ನರ್ಝುರೀನ ತನ್ನ ಹಿಂದಿನ ದುರ್ಘಟನೆಯನ್ನು ನೆನೆದು ಏನೂ ಪ್ರತಿಕ್ರಿಯಿಸಲಾರದೆ ಸುಮ್ಮನಾಗುತ್ತಾಳೆ.

ನರ್ಝುರೀನ ಚಿಕ್ಕವಳಾಗಿದ್ದಾಗ ಆಕೆಯ ತಂದೆ ತಾಯಿ ದುಡ್ಡಿನ ಆಸೆಗೊಸ್ಕರ ಹನ್ನೆರಡು ಹರಯದ ಈಕೆಯನ್ನು ಮುದುಕನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಮುದಿಯನಿಗೆ ಹಿಂದೆ ಮೂರು ಜನ ಹೆಂಡತಿಯರು ಆತನ ಹಿಂಸೆಯನ್ನು ಸಹಿಸಲಾರದೆ ಓಡಿಹೋಗಿರುತ್ತಾರೆ. ನರ್ಝುರೀನಾಗೆ ಇಷ ಇಲ್ಲದಿದ್ದರೂ ಆಕೆ ಮುದಿಯನನ್ನು ಕೈಹಿಡಿಯುತ್ತಾಳೆ. ಆತ ನರ್ಝುರೀನಳನ್ನು ಮೊದಲನೆಯ ರಾತ್ರಿ ಆಕೆಗೆ ಊಟವನ್ನಾಕದೆ, ತನ್ನ ಕಾಮುಖ ಭಾವನೆಗಳಿಗೆ ಆಕೆಯನ್ನು ಬಳಸಿ ಕ್ರೂರವಾಗಿ ಹಿಂಸಿಸುತ್ತಾನೆ. ತನ್ನ ಗಂಡನ ಕ್ರೂರ ವರ್ತನೆಯನ್ನು ತಾಳಲಾರದೆ ನರ್ಝುರೀನ ಮನೆಯಿಂದ ಹೊರಬರುತ್ತಾಳೆ. ಬಂದವಳು ನೇರವಾಗಿ ಪೊಲೀಸರ ರಕ್ಷಣೆ ಪಡೆದು, ಕೋರ್ಟ್‌ನಲ್ಲಿ ತನ್ನ ಗಂಡನಿಂದ ಮುಕ್ತಿಯನ್ನು ಸಂಪಾದಿಸಿಕೊಳ್ಳುತ್ತಾಳೆ. ಈ ವಿಷಯವನ್ನಾದರಿಸಿ ಇಸ್ಲಾಂ ಧರ್ಮ ಮತ್ತು ಸಮಾಜ ಆಕೆಯನ್ನು ಹೊರಹಾಕುತ್ತದೆ. ಇದರಿಂದ ಸಂಪೂರ್ಣವಾಗಿ ನೊಂದ ನರ್ಝುರೀನ ಶಿವಸುಂದರಂ ರವರ ನೆರವಿನಿಂದ ಓದನ್ನು ಮುಂದುವರಿಸಿ ಅವರ ಕಛೇರಿಯಲ್ಲೇ ಕೆಲಸವನ್ನು ಮಾಡುತ್ತಿರುತ್ತಾಳೆ.

ನರ್ಝುರೀನ ಹೀಗೆ ತನ್ನ ಹಿಂದಿನ ಕತೆಯನ್ನು ಜ್ಞಾಪಿಸಿಕೊಂಡು ಇರಬಾರ್ಖುನಿಗೆ ಏನು ಹೇಳಬೇಕೆಂದು ತೋಚದೆ ಸುಮ್ಮನಿರುತ್ತಾಳೆ. ನಂತರ ಶಿವಸುಂದರಂ ಮತ್ತು ತನ್ನ ಗೆಳತಿಯೊಂದಿಗೆ ಇರಬಾರ್ಖು ಹೇಳಿದ ಮಾತನ್ನು ಹೇಳುತ್ತಾಳೆ. ಈ ಮಾತನ್ನು ಕೇಳಿ ಶಿವಸುಂದರಂ ಸಂತೋಷದಿಂದ ಒಪ್ಪಿಕೊ ಎಂದು ಹೇಳಿದಾಗ ನರ್ಝುರೀನ ತನ್ನ ಹಳೆಯ ನೋವನ್ನು ಮರೆತು ಹೊಸ ಪ್ರಪಂಚಕ್ಕೆ ಕಾಲಿಡುತ್ತಾಳೆ. ಈ ಕತೆಯಲ್ಲಿ ಮುಸ್ಲಿಂ ಸಮಾಜ ಹಾಗೂ ಇಸ್ಲಾಂ ಧರ್ಮದಲ್ಲಿರುವ ಕ್ರೂರ ನಡವಳಿಕೆ ವರ್ತನೆ ಯಾವ ರೀತಿಯದ್ದು ತಿಳಿಯಬಹುದು.ಈ ಕತೆಗೆ ೨೦೦೩ರ ದೀಪಾವಳಿ ವಿಶೇಷಾಂಕದಲ್ಲಿ ಮೂರನೇ ಬಹುಮಾನ ದೊರಕಿದೆ.

❖ ಬಿ.ಎಲ್. ವೇಣು : 'ಸುಡುಗಾಡುಸಿದ್ದ'

ಬಿ.ಎಲ್. ವೇಣುರವರು ೧೯೪೫ರಲ್ಲಿ ಚಿತ್ರದುರ್ಗದಲ್ಲಿ ಜನಿಸಿದರು. ಇವರು ವಿಜ್ಞಾನ ವಿಷಯದಲ್ಲಿ ಪದವಿಧರರು. ಇವರು ೨೯ ಕಾದಂಬರಿಗಳನ್ನು ಬರೆದಿದ್ದಾರೆ. ಇವುಗಳಲ್ಲಿ ೯ ಕಾದಂಬರಿಗಳು ಸಿನಿಮಾ ಆಗಿವೆ.ಇವರು ೭ ಕಥಾ ಸಂಕಲನಗಳನ್ನು ಬಿಡುಗಡೆ ಮಾಡಿದ್ದಾರೆ. ೪ ನಾಟಕಗಳನ್ನು ರಚಿಸಿದ್ದಾರೆ. ೮ ಕಿರುಕಾದಂಬಿರಗಳನ್ನು ರಚಿಸಿದ್ದಾರೆ.

ಬಿ.ಎಲ್. ವೇಣುರವರ 'ಪ್ರೇಮಪರ್ವ' ಕಾದಂಬರಿ ಹಲವು ಭಾಷೆಗಳಿಗೆ ಭಾಷಾಂತರಗೊಂಡಿದೆ. ಇವರು ಕುವೆಂಪು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

ಪ್ರಶಸ್ತಿಗಳು : ಅನಾಕೃ ಪ್ರಶಸ್ತಿ, ಗೋರೂರು, ಹಾವನೂರು, ಆರ್ಯಭಟ ಪ್ರಶಸ್ತಿಗಳು ದೊರೆತಿವೆ. ರಾಷ್ಟ್ರೀಯ ಬಾವೈಕ್ಯತಾ ಪ್ರಶಸ್ತಿ , ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ಇವರು ಪಡೆದುಕೊಂಡಿದ್ದಾರೆ.

ಬಿರುದುಗಳು :- ಸಾಹಿತ್ಯ ಭೂಷಣ, ಸಾಹಿತ್ಯ ರತ್ನಾಕರ.

೧೧-೦೧-೨೦೦೯ ರಲ್ಲಿ ಇವರಿಗೆ 'ಚಿನ್ಮೂಲಾದ್ರಿ ಸಿರಿ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಲಾಗಿದೆ.

ಈ ಕತೆಯಲ್ಲಿ ಜೀವನದಲ್ಲಿ ಬೇಸತ್ತು ಸಾಯುವ ಹಂತ ತಲುಪಿದ ಬಾಲಕ ನೋರ್ವ ಸ್ಮಶಾನದಲ್ಲಿ ಆಶ್ರಯಪಡೆದು ಕಡೆಗೆ ಸ್ಮಶಾಸನ ಅಧಿಪತಿಯಾಗಿ ತನ್ನ ಜೀವನವನ್ನು ಅರ್ಥಬದ್ಧವಾಗಿ ಅಲ್ಲಿಯೇ ಸಾಗಿಸುತ್ತಾನೆ. ಸುಡುಗಾಡಿನ ಸಿದ್ದನು ಏನು ತಿಳಿಯದವನಂತೆ ಕಂಡರೂ ಅವನ ವರ್ತನೆ ಮತ್ತು ಅವನ ಯೋಚನಾ ಕ್ರಮಗಳನ್ನು ನೋಡಿದರೆ ಆತನ ಜ್ಞಾನ ಮತ್ತು ವರ್ಚಸ್ಸು ಯಾವರೀತಿಯದ್ದು ಎಂದು ತಿಳಿಯಬಹುದು.

ಸಿದ್ದ ಸುಡುಗಾಡಿನಲ್ಲಿ ವಾಸಿಸುತ್ತಿದ್ದರಿಂದ ಆತನನ್ನು ಸುಡುಗಾಡುಸಿದ್ದ ಎಂದು ಜನ ಕರೆಯುತ್ತಿದ್ದರು. ಈತ ನಿಯತ್ತಿನಿಂದ ಯಾರಿಗೂ ಮೋಸ ಮಾಡದೆ ಬಡವರಿಂದ ಹೆಚ್ಚಿನ ದೇಣಿಗೆ ಪಡೆಯದೆ ಸ್ಮಶಾನದಲ್ಲಿ ಹೆಣವನ್ನು ಸುಡುತ್ತಿದ್ದ ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಕೊನೆಗೆ ಜೀವನದಲ್ಲಿ' ಬೇಸತ್ತು ಸಾಯುವ ಹಂತಕ್ಕೆ ತಲುಪುತ್ತಾನೆ. ಸ್ಮಶಾನದಲ್ಲಿ ವಾಸವಾಗಿದ್ದ ಬೈರ ಆತನನ್ನು ರಕ್ಷಿಸಿ ಸ್ಮಶಾನದಲ್ಲಿ ತಂದು ಇರಿಸಿಕೊಳ್ಳುತ್ತಾನೆ. ಸ್ಮಶಾನದ ವಾತಾವರಣಕ್ಕೆ ಪ್ರಾರಂಭದಲ್ಲಿ ಹೊಂದಿಕೊಳ್ಳದ ಸಿದ್ಧ ಕಾಲ ಕಳೆದಂತೆ ಸ್ಮಶಾನವನ್ನೇ ತನ್ನ ದುಡಿಮೆಯ ರಂಗಭೂಮಿಯನ್ನಾಗಿ ಮಾಡಿಕೊಳ್ಳುತ್ತಾನೆ. ತನ್ನ ಸ್ಮಶಾನದ ಪಕ್ಕದ ಹೋಟೆಲಿನ ಜುಂಜಿಯ ಗಂಡ ಸತ್ತ ಮೇಲೆ ಆಕೆಯನ್ನು ಮದುವೆಯಾಗಿ ಒಂದು ಗಂಡು

ಮಗುವನ್ನು ಪಡೆಯುತ್ತಾನೆ. ಒಂದು ದಿನ ಸ್ಮಶಾನಕ್ಕೆ ಒಂದು ಹೆಣ ಬರುತ್ತದೆ. ಆ ಹೆಣದ ಹಿಂದೆ ನಾಲ್ಕೈದು ಕಾರುಗಳು ಬರುತ್ತದೆ. ಶವ ಸಂಸ್ಕಾರವಾಗಬೇಕಾದರೆ ಕಾರಿನಲ್ಲಿ ಬಂದಿದ್ದ ಗಂಡು ಮಕ್ಕಳು ತಮ್ಮ ತಂದೆ ಬದುಕಿದ್ದಾಗ ನಮಗೆ ಏನನ್ನು ಮಾಡಲಿಲ್ಲ ಆತ ತನ್ನ ಮಕ್ಕಳನ್ನು ಬೇದಬಾವ ಮಾಡಿಸಾಕಿದ ಎಂದು ಸತ್ತ ತಂದೆಯನ್ನು ಬೈದುಕೊಳ್ಳುತ್ತಾರೆ. ಈ ವಿಷಯವನ್ನೆಲ್ಲಾ ಆರಿಸುತ್ತಿದ್ದ ಸಿದ್ದ ಬಹಳ ರೋದಿಸುತ್ತಾ, ತಾನೂ ಸಹ ಚಿತೆಗೆ ಬೆಂಕಿ ಹಾಕಿ ತಲೆ ಬೋಳಿಸಿ ಕೊಂಡು ತಾನು ಸಹ ಪಿಂಡವನ್ನು ಹಾಕುತ್ತಾನೆ. ಈ ಕತೆಯೊಳಗೆ ಈ ಒಂದು ಪ್ರಸಂಗ ಓದುಗರನ್ನು ಒಂದು ಚಿದಂಬರ ರಹಸ್ಯಕ್ಕೆ ತಳ್ಳುವ ಮತ್ತು ಹಲವಾರು ಯೋಚನೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ಕತೆಗೆ ೨೦೦ನೇ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಮೊದಲನೇ ಬಹುಮಾನ ದೊರೆತಿದೆ.

೧೯೯೫-೨೦೦೮ರ ವರೆಗಿನ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಆಯ್ದುಕೊಂಡಿರುವ ೨೦ ಕಥೆಗಳನ್ನು ಕುರಿತು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ. ಈ ಎಲ್ಲಾ ಕತೆಗಳು ನಮ್ಮ ಸಮಾಜ ಮತ್ತು ಪರಿಸರ ಇಂದು ಯಾವ ತಿರುವನ್ನು ಪಡೆಯುತ್ತಿದೆ. ಎಂಬ ಅಂಶವನ್ನು ವಾಸ್ತವಕ್ಕೆ ಹತ್ತಿರವಾಗಿ ವಿವರಿಸಲು ಪ್ರಯತ್ನಿಸುತ್ತವೆ. ಹೆಚ್ಚಾಗಿ ಇಲ್ಲಿನ ಕತೆಗಳಲ್ಲಿ ಸ್ತ್ರೀಪಾತ್ರಗಳನ್ನೇ ಪ್ರಮುಖವಾಗಿ ಚಿತ್ರಿಸಲಾಗಿದೆ. ಪ್ರತಿಯೊಂದು ಕತೆಯೂ ಉತ್ತಮ ತಂತ್ರ ವಿನ್ಯಾಸವನ್ನು ಅಳವಡಿಸಿಕೊಂಡು ತಮ್ಮದೇ ಆದಂತಹ ಹೊಸ ರಚನಾ ವಿಧಾನವನ್ನು ಅಳವಡಿಸಿಕೊಂಡಿವೆ. ನಮ್ಮ ಸುತ್ತಿಲಿನ ಸಮಾಜದಲ್ಲಿ ನಾವು ದಿನ ನಿತ್ಯ ಕಾಣುವಂತಹ ಸ್ತ್ರೀ ಶೋಷಣೆ, ಜಾತೀಯತೆ, ಮನುಷ್ಯನಲ್ಲಿರುವ ಕ್ರೌರ್ಯತೆ ಪರಿಸರ ವಿನಾಶ ಕಾನಬಹುದು, ಕೆಟ್ಟರಾಜಕಾರಣ ಹೀಗೆ ಹತ್ತು ಹಲವು ವಿಷಯ ವಸ್ತು ಈ ಕತೆಗಳಲ್ಲಿ ಚಿತ್ರಿತವಾಗಿವೆ. ಕನ್ನಡ ಸಣ್ಣ ಕಥಾ ಸಾಹಿತ್ಯ ಇತ್ತೀಚಿಗೆ ಹೊಸ ತಿರುವನ್ನು ಪಡೆಯುತ್ತಿದೆ. ಎಂಬುದನ್ನು ಈ ಕತೆಗಳು ಸಾರಿ ಹೇಳುತ್ತೇವೆ.

ಅಧ್ಯಾಯ –೫

ಕತೆಗಳ ವೈಶಿಷ್ಟ್ಯ

ದೀಪಾವಳಿ ವಿಶೇಷಾಂಕದ ಕತೆಗಳಲ್ಲಿ ಪ್ರತಿಯೊಂದು ಕತೆಯೂ ಸಹ ವಿಶಿಷ್ಟ ವಸ್ತುವನ್ನು, ಉತ್ತಮ ತಂತ್ರಗಾರಿಕೆಯನ್ನು, ಸಮಕಾಲೀನ ಸಮಾಜವನ್ನು, ತನ್ನದೇ ಆದ ನಿಲುವು ದೋರಣೆಗಳನ್ನು ಪ್ರತಿಬಿಂಬಿಸುತ್ತವೆ. ಈ ಕತೆಗಳಲ್ಲಿ ಕಂಡು ಬರುವ ವಸ್ತುಗಳು ಇಂದಿನ ಸಮಾಜದಲ್ಲಿ ನಾವು ನೀವು ದಿನ ನಿತ್ಯ ನೋಡುವಂತಹ ಅನೇಕ ಘಟನೆಗಳು ಉದಾ : ಸ್ತ್ರೀಶೋಷಣೆ, ಜಾತೀಯತೆ, ವರ್ಗಸಂಘರ್ಷ, ಅಧುನಿಕರಣದಿಂದ ಆಗುತ್ತಿರುವಂತಹ ವಿನಾಶ, ನಮ್ಮ ಜನರಲ್ಲಿ ಇಂದು ಅಡಗಿರುವ ಅಸೂಯೆ, ದ್ವೇಷ, ದೃಷ್ಟ ಆಲೋಚನೆಗಳು ಇಂತಹವೇ ಈ ಕತೆಗಳಲ್ಲಿ ಮೂಡಿ ಬಂದಿರುವ ಸನ್ನಿವೇಶಗಳಾಗಿವೆ. ಹೀಗೆ ದೀಪಾವಳಿ ವಿಶೇಷಾಂಕದ ಕತೆಗಳು ಉತ್ತಮ ತಂತ್ರಗಾರಿಕೆ ಹಾಗು ಶೈಲಿಯನ್ನು ಬಳಸಿಕೊಂಡು ಓದುಗರಲ್ಲಿ ಕುತೂಹಲವನ್ನು ಮೂಡಿಸುತ್ತವೆ. ಕತೆಗಳು ಬೆಳವಣಿಗೆಯಾಗುತ್ತಾ ಮಧ್ಯ ಮಧ್ಯದಲ್ಲಿಯೇ ಹಿಂದಿನ ಅನೇಕ ಸನ್ನಿವೇಶಗಳನ್ನು ನವಿರಾಗಿ ಚಿತ್ರಿಸುತ್ತವೆ. ಕೆಲವು ಕತೆಗಳಲ್ಲಿ ಕ್ರೂರವಾದ ಪಾತ್ರಗಳು ಕೊನೆಯಲ್ಲಿ ಓದುಗರಿಗೆ ಮರುಕ ಹುಟ್ಟುವಂತೆ ಮಾಡುತ್ತವೆ. ಹಾಗೂ ಐತಿಹಾಸಿಕ ಪ್ರಸಂಗಗಳನ್ನು ಪ್ರಸ್ತುತವಾಗಿ ಕಣ್ಣ ಮುಂದೆ ನಡೆದಂತೆ ಬಿಂಬಿಸುತ್ತವೆ. ಕತೆಯನ್ನು ಕೆಲವು ಕಡೆ ನಿರೂಪಕ, ಕೆಲವು ಕಡೆಗಳಲ್ಲಿ ಕತೆಯ ಪ್ರಮುಖ ಪಾತ್ರ, ಇನ್ನು ಕೆಲವು ಕಡೆ ನಿರೂಪಕ ಹಾಗು ಕತೆಯ ಪಾತ್ರಗಳೆರಡೂ ಕತೆಯನ್ನು ಕಟ್ಟಿಕೊಡುತ್ತವೆ. ಈ ರೀತಿಯಾಗಿ ಉತ್ತಮ ತಂತ್ರಗಾರಿಕೆಯು ಇಲ್ಲಿನ ಕತೆಗಳಲ್ಲಿ ಅಡಗಿರುವುದನ್ನು ಕಾಣಬಹುದು.

ನವೋದಯ, ಪ್ರಗತಿಶೀಲ, ನವ್ಯ ಕಾಲಘಟ್ಟಗಳ ಕತೆಗಳಲ್ಲಿ ಸಾಮಾಜಿಕ ಪ್ರಸಂಗಗಳೇ ಕಂಡು ಬಂದರೂ, ಇತ್ತೀಚಿನ ಕತೆಗಳಂತೆ ನೇರವಾದ ವಿಮರ್ಶೆಯನ್ನು, ಹೋರಾಟದ ಕಿಚ್ಚನ್ನು, ನೋವಿನ, ಅಸಹಾಯಕತೆಯ ವಿವಿಧ ಮುಖಗಳನ್ನು ಬಿಂಬಿಸಲು ಸಾಧ್ಯವಾಗಿಲ್ಲ. ಆದ್ದರಿಂದ ದೀಪಾವಳಿ ವಿಶೇಷಾಂಕದ ಕತೆಗಳು ಓದುಗನಿಗೆ ಹೊಸ ಹೊಸ ಅನುಭವಗಳು ಹೊಸ ಆಲೋಚನಾ ಮನೋಭಾವವನ್ನು ಪ್ರಸ್ತುತ ಸಮಾಜದ ಸನ್ನಿವೇಶವನ್ನು ತಿಳಿಯಲು ಬಹಳ ಉಪಯುಕ್ತವಾಗಿವೆ.

೧೯೯೫ರಲ್ಲಿ ಬಹುಮಾನ ಪಡೆದ ಶಿವಲಿಂಗು ಬಳಿಗಾರರ 'ಕಮಲಮ್ಮ ಕೊಲೆ ಧರ್ಮ ಮತ್ತು ಅಧಿಕಾರ' ಕತೆಯಲ್ಲಿ ಸ್ತ್ರೀಸಂವೇದನಾತ್ಮಕ ಕತಾ ವಸ್ತುವನ್ನು ಕಾಣಬಹುದು. ಈ ಕತೆಯಲ್ಲಿ ಪ್ರಾರಂಭದಿಂದಲೂ ಕೊನೆಯವರೆವಿಗೂ ನಿರೂಪಕತೆ ಕತೆಯನ್ನು ಚಿತ್ರಿಸುತ್ತಾ ಸಾಗುತ್ತಾನೆ. ಕತೆಯನ್ನು ಹೇಳುತ್ತಾ ಹಿಂದಿನ ವಿಷಯವನ್ನು ಸೊಗಸಾಗಿ ಕಟ್ಟಿಕೊಡುವ ನಿರೂಪಕನ

ತಂತ್ರಗಾರಿಕೆ ವಿಶಿಷ್ಟವಾದದ್ದಾಗಿದೆ. ಪ್ರಸ್ತುತ ಸಮಾಜದಲ್ಲಿ ಹೆಣ್ಣು ಪುರುಷನ ಆಶ್ರಯವನ್ನು ತೊರೆದು ರಾಜಕೀಯ ಪ್ರವೇಶಿಸಿದರೆ ಆಕೆ ಎದುರಿಸಬೇಕಾದ ಸಮಸ್ಯೆ, ಅಪಮಾನ, ಟೀಕೆಗಳನ್ನು ಈ ಕತೆಯಲ್ಲಿ ಸ್ವಾರಸ್ಯವಾಗಿ ಚಿತ್ರೀಕರಣಗೊಂಡಿದೆ. ಈ ಕತೆಯನ್ನು ಕುರಿತು ಪ್ರೊ. ಸುಮತೀಂದ್ರ ನಾಡಿಗ್, ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಸಣ್ಣ ಕಥೆ ಹಾಗೂ ಪ್ರಬಂಧಗಳನ್ನು ಬರೆಯುವವರ ಸಂಖ್ಯೆ ಕ್ಷೀಣಿಸುತ್ತಿದೆ. ಸಂಖ್ಯೆಯ ದೃಷ್ಠಿಯಿಂದ ಮಾತ್ರವಲ್ಲ. ಗುಣಮಟ್ಟದ ಮಾನದಂಡದಿಂದ ಸಹ. ಕಳೆದ ವರ್ಷಕ್ಕಿಂತ ಪ್ರಜಾವಾಣಿ ದೀಳಪಾವಳಿ ಕಥಾ ಸ್ಪರ್ಧೆಗೆ ಬಂದಿದ್ದ ಕಥೆಗಳ ಸಂಖ್ಯೆ ಈ ವರ್ಷ ಇಳಿದಿದೆ. ೧೯೯೫ರ ಸ್ಪರ್ಧೆಗೆ ಸಾಮಾನ್ಯ ವಿಭಾಗಕ್ಕೆ ೪೫ ಕಥೆಗಳೂ ಬಂದಿದ್ದವು. ಸಂಪಾದಕೀಯ ವಿಭಾಗದವರ ಪ್ರಾಥಮಿಕ ಪರಿಶೀಲನೆಯನ್ನು ದಾಟಿ ತೀರ್ಪುಗಾರರ ಪರಿಶೀಲನೆಗೆ ಬಂದುವು ಸಾಮಾನ್ಯ ವಿಭಾಗದಲ್ಲಿ ೧೨ ಮತ್ತು ವಿದ್ಯಾರ್ಥಿ ವಿಭಾಗದಲ್ಲಿ ೩ ಮಾತ್ರ ವಸ್ತು, ರೂಪ, ಭಾಷೆಯ ದೃಷ್ಟಿಯಿಂದ ವಿದ್ಯಾರ್ಥಿ ವಿಭಾಗದಲ್ಲಿ ಒಂದು ಕಥೆ ಮಾತ್ರ ಆಯ್ಕೆಗೆ ಅರ್ಹವಾಯಿತು. ಸಾಮಾನ್ಯ ವಿಭಾಗದಲ್ಲಿ ಏಳು ಕಥೆಗಳು ಮಾತ್ರ ವಿವರವಾದ ಪರಿಶೀಲನೆಗೆ ಒಳಗಾದುವು. ಹಿಂದಿನಂತೆ ವಸ್ತು ವೈವಿಧ್ಯ, ಬಂಧ, ನಿರ್ವಹಣೆ ಕಲೆಗಾರಿಕೆಗಳಲ್ಲಿ ತೀಕ್ಷ್ಣ ಮೇಲಾಟವೇನೂ ಕಂಡು ಬರಲಲಿಲ್ಲ ಎಂಬುದು ವಿಷಾದನೀಯ.

ಪರಿಶೀಲನೆಗೆ ಬಂದ ಕಥೆಗಳಲ್ಲಿ ವಸ್ತು ವೈವಿಧ್ಯ ಕಂಡು ಬಂದರೂ ಒಲವು ಗ್ರಾಮೀಣ ಹಿನ್ನೆಲೆಯ ವಸ್ತುವಿನ ಕಡೆಗೆ, ಗ್ರಾಮೀಣ ಬದುಕಿನಲ್ಲಿ ಕೆಳವರ್ಗದವರ ಮೇಲಿನ ದಮನಕಾರೀ ಪ್ರವೃತ್ತಿ. ಹಲವು ಸ್ವರಗಳಲ್ಲಿ ಬಹುವಾಗಿ ಕಾಡುತ್ತಿದೆ. ಎಂಬುದು ಸ್ಪಷ್ಟ ಸಮರ್ಥ ಗ್ರಾಮೀಣ ಸೊಗಡಿನ, ಪ್ರಾದೇಶಿಕ ವೈಶಿಷ್ಟ್ಯ ಪೂರ್ಣ ಭಾಷೆಯೂ ಈ ಬರಹಗಾರರ ಅನುಭವದ ಹಿನ್ನೆಲೆಯನ್ನು ದೃಢೀಕರಿಸುತ್ತದೆ. ಉಳಿದ ಕಥೆಗಳಲ್ಲಿ ಕಥೆಗಾರರ ನಿರ್ಲಕ್ಷ್ಯಕ್ಕೆ ಮೊದಲ ಬಲಿ ಭಾಷೆ ಎನಿಸುತ್ತದೆ. ಹೇಗೂ ಕಥೆಯನ್ನು ಹೇಳಿದರಾಯಿತು. ಎಂಬ ಧೋರಣೆ ಕಂಡು ಬರುತ್ತದೆ. ಕಥೆಯಲ್ಲಿ ನಿರೂಪಣೆಯ ಭಾಷೆ ಸೃಜನಶೀಲ ಕಲೆಯ ಮಾಧ್ಯಮ ಎಂಬ ಪ್ರಜ್ಞೆ ಬಹುಜನ ತರುಣ ಕಥೆಗಾರರಲ್ಲಿ ಇಲ್ಲ. ಕುಟುಂಬದ ಸಣ್ಣ ಘಟನೆಯೊಂದರ ಸುತ್ತ ಚಿತ್ರಕ ಶಕ್ತಿಯಿಂದ. ಮಾತಿನ ಮೋಡಿಯಿಂದ ವಾತಾವರಣ ನಿರ್ಮಿಸಿ ಪಾತ್ರಗಳನ್ನು ಸ್ಪುಟವಾಗಿ ಕಂಡಿರಿಸಿ ಸೂಕ್ಷ್ಮ ಕಲೆಗಾರಿಕೆಯನ್ನು ತೋರುತ್ತಿದ್ದ ಕೈ ಕಾಣ ಬರುತ್ತಿಲ್ಲ ಆದ್ದರಿಂದಲೇ ಗ್ರಾಮೀಣ ಪರಿಸರದ ವಸ್ತುವುಳ್ಳ ಕಥೆಗಳು ಗಮನ ಸೆಳೆಯುತ್ತವೆ. ಸಂಘರ್ಷದ ಸ್ಪಷ್ಟ ವೈದೃಶ್ಯಗಳಲ್ಲಿ ಕಥೆ ಬೆಳೆಯುತ್ತದೆ. ಭಾಷೆಯ ಚಿತ್ರಕ ಶಕ್ತಿಯನ್ನು ದುಡಿಸಿ ಕೊಂಡಿರುಕವುಕದೂ ಮೂರು ನಾಲ್ಕು ಕಥೆಗಳಲ್ಲಿ ಕಾಣಬಹುದಾಗಿದೆ. ತರುಣ ಕಥೆಗಾರರು ವ್ಯವಧಾನ ಶೈಥಿಲ್ಯದಿಂದ ಹೊರಬಂದು ಒಟ್ಟು ಬಂಧ, ರೂಪ, ಭಾಷಯ ಬಗೆಗೂ ಹೆಚ್ಚು ಗಮನ ಹರಿಸಿ ಸಂಯಮಪೂರ್ಣ ನಿರ್ವಹಣೆಯನ್ನು ಸಾಧಿಸಬೇಕಿದೆ. ಸಂಯಮ ಸಣ್ಣಕಥೆಗಳ ವಸ್ತು ನಿರ್ವಹಣೆಯಲ್ಲಿ ಅತ್ಯಂತ ಅಪೇಕ್ಷಣೀಯ ಗುಣ.

ಕಾಮವೇ ಆಗಲಿ, ಕೆಳವರ್ಗದ ಬದುಕಿನ ಚಿತ್ರಣವೇ ಆಗಲಿ ಬರಹಗಾರನ ಗೀಳು ಮೇಲುಗೈಯಾಗಬಾರದು. ಪರಿಶೀಲನೆಗೆ ಬಂದುವು ಕೆಲವೇ ಕಥೆಗಳಾದರೂ ತೀರ್ಪುಗಾರರ ಮನಸ್ಸನ್ನು ಕಾಡಿದ ಕೊರತೆಗಳು ಈ ಬಗೆಯವು.

'ಕಮಲಮ್ಮ ಕೊಲೆ, ಧರ್ಮ ಮತ್ತು ಅಧಿಕಾರ' ಎರಡನೆಯ ಬಹುಮಾನ ಪಡೆದ ಕಥೆ ಸಮಕಾಲೀನ ರಾಜಕೀಯ ಸ್ಥಿತಿಯ ಒಂದು ಚಿತ್ರ. ರಾಜಕೀಯ ಕ್ಷೇತ್ರ, ಸಾರ್ವಜನಿಕ ಜೀವನಕ್ಕಿಳಿದ ವ್ಯಕ್ತಿಯ ಖಾಸಗಿ ಬದುಕು ಸಾರ್ವಜನಿಕರ ಕಣ್ಣಿಗೆ, ಬಹಿರಂಗದ ಒರೆಗಲ್ಲಿಗೆ ಒಳಗಾಗುವ ವಸ್ತುವನ್ನೊಳಗೊಂಡಿದೆ. ಅದರಲ್ಲೂ, ಇತ್ತೀಚೆಗೆ ಮಹಿಳೆಯರು ಬಹುವಾಗಿ ಕೆಳವರ್ಗದಿಂದ ಬಂದ, ವಿದ್ಯೆ ಅನುಭವಗಳ ಪೂರ್ವ ಸಿದ್ಧತೆಯಿಲ್ಲದವರು ಪಂಚಾಯಿತಿಗಳಿಗೆ ಆರಿಸಿ ಬಂದಿರುವ ಬರುತ್ತಿರುವ ಹಿನ್ನೆಲೆಯಲ್ಲಿ ಎದುರಿಸಬೇಕಾದ ಕಲುಷಮಯ ವಾತಾವರಣದ ಹಲವು ನಿಟ್ಟಿನ ಸವಾಲುಗಳ ಚಿತ್ರಣವಿದೆ. ಕಮಲಮ್ಮ ಎಂದರೆ ಗಂಡನನ್ನೇ ಕೊಲೆ ಮಾಡಿಸಿದವಳು ಎಂದು ಆಕೆಯ ಬಗ್ಗೆ ಹರಡಿದ್ದ ಸುದ್ದಿಯನ್ನು ಚಿಕ್ಕಂದಿನಿಂದ ಕೇಳಿದ್ದ ನಿರೂಪಕನಿಗೆ ಅವಳ ಖಾಸಗಿ ಬದುಕಿನ ವಿವರಗಳು. ಸಮಾಜದಲ್ಲಿ ಕುರುಡು ಕಣ್ಣುಗಳು ನಂಬ ಬಯಸುವ ಪಿಸುಮಾತಿನ ಸುದ್ದಿ ವದಂತಿಯ ತೆರವು ಅನಾವರಣಗೊಳ್ಳುವ ಬಗೆ ಈ ಕಥೆಯ ಸತ್ಯ. ಅಣ್ಣ, ತಂಗಿ ಗಂಡ ಇವರಿಂದ ಅನುಭವಿಸಿದ ಸಂಕಷ್ಟಗಳ ನಡುವೆಯೂ ಎಲ್ಲೋ ಒಂದು ದಿಟ್ಟತನದ, ಸಂಕಲ್ಪದ ಎಳೆ ಇದೆ. ಈ ಎಲ್ಲ ಆಡಚಣೆ ಅತಂಕಗಳನ್ನು ಮೆಟ್ಟಿ ನಿವಾರಿಸಿ ಮೇಲೆ ಬರುವ ಕಮಲಮ್ಮ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷಿಣಿಯಾಗುತ್ತಾಳೆ. ನಿರೂಪಕನೊಡನೆ ನಡೆದ ಸಂವಾದ ಈ ಬದುಕಿನ ರೇಖೆ ಸಾಗಬಹುದಾದ ನಿಟ್ಟಿನ ಸೂಚನೆ ಇದೆ. ಬೀರು ಕುಡಿಯುತ್ತ ಆಡುವ ಮಾತುಗಳು, ಅಧಿಕಾರ ತರಬಹುದಾದ ಪರಿವರ್ತನೆಗೆ ಸೂಚನೆಗಳೆ? ಇಲ್ಲವೆ. ಇದುವರೆಗೆ ಅವಳೇ ಹೇಳುವಂತೆ ಕಾಯ್ದ ಧರ್ಮ, ಸಮಾಜಕ್ಕೆ ವರವಾಗುತ್ತದೆಯೆ? ಪ್ರಶ್ನೆ ಉಳಿಯುತ್ತದೆ.

ಒಟ್ಟು ಕಥೆಗಳನ್ನು ಗಮನಿಸಿದಾಗ ವ್ಯವಸ್ಥೆ ಗ್ರಾಮೀಣ ಬದುಕಿನಲ್ಲಿನ ವರ್ಗ ಶೋಷಣೆಗಳ ಬಗೆಗಿನ ಆಕರ್ಷನೆ ಎದ್ದು ಕಾಣುತ್ತವೆ. ನವುರಾದ ಮನುಷ್ಯ ಸಂಬಂಧಗಳು, ಕುಟುಂಬದ ಸೀಮಿತ ಪರಿಸರದಲ್ಲಿಯೇ ಕಾಣಬರುವ ಬಿರುಕುಗಳು, ಸಂಘರ್ಷಗಳ ಸೂಕ್ಷ್ಮತೆ ಹೊಸ ಬರಹಗಾರರ ಗಮನ ಸೆಳೆಯುತ್ತಿಲ್ಲ. ಬಹುಶಃ ಅಂತಹ ವಸ್ತುಗಳ ನಿರ್ವಹಣೆ ಕಷ್ಟ ಸಾಧ್ಯವೆನಿಸುತ್ತಿರಬಹುದೆ. ಟಿ.ವಿ. ಸಂಸ್ಕೃತಿಯ ಹೊಸ ಉತ್ಪ್ರೇಕ್ಷಿತ ವಾತಾವರಣದಲ್ಲಿ ಎನಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

೨೦೦೨ರ ಸಾಲಿನಲ್ಲಿ ಬಹುಮಾನ ಪಡೆದ ಜಿ.ವಿ. ಆನಂದಮೂರ್ತಿಯವರ 'ಬೀಜ ದೇವತೆ' ಕತೆಯಲ್ಲಿ ಪುಟ್ಟೀರಮ್ಮ ತಲೆತಲಾಂತರದಿಂದ ಬಿತ್ತನೆ ಮಾಡುವ ಬೀಜಗಳನ್ನು ಸಂರಕ್ಷಿಸುವ ಜಾನಪದ ಕೃಷಿ ಪದ್ದತಿಯು ಕತೆಯ ವಸ್ತುವಾಗಿರುತ್ತದೆ. ಈ ಕತೆಯಲ್ಲಿ ಹೊಸ ಕೃಷಿ ಪದ್ಧತಿಯೊಂದಿಗೆ ಜನಪದ ಕೃಷಿಯನ್ನು ಹೋಲಿಸಿ, ಜಾನಪದ ಸತ್ವವನ್ನು ಎತ್ತಿಹಿಡಿಯಲಾಗಿದೆ. ಆಧುನಿಕ ಕೃಷಿ ಪದ್ಧತಿಯ ವಿರುದ್ಧ ಎದ್ದು ನಿಲ್ಲುವ ಜನಪದ ಕೃಷಿ, ಪುಟ್ಟೀರಮ್ಮ ತಾಯಿಯಂತೆ ಬಿತ್ತನೆ ಕಾಳುಗಳನ್ನು ಶೇಖರಿಸುವ ಚಿತ್ರಣ ಬಹಳ ಸುಂದರವಾಗಿ ಈ ಕತೆಯಲ್ಲಿ ಮೂಡಿಬಂದಿದೆ. ಈ ಕತೆಯನ್ನು ಕುರುತು ಪ್ರೊ. ಸುಧಾಕರ್, ಡಾ. ರಾಜೇಂದ್ರ ಚೆನ್ನಿಯವರು ಪ್ರಜಾವಾಣಿ ವರ್ಷ ವರ್ಷ ಏರ್ಪಡಿಸುತ್ತಾ ಬರುತ್ತಿರುವ 'ದೀಪಾವಳಿ ಕಥಾ ಸ್ಪರ್ಧೆ ಅನೇಕ ಉದಯೋನ್ಮುಖ ಸಣ್ಣ ಕತೆಗಾರರಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಸಣ್ಣ ಕಥಾ ಪ್ರಕಾರದ ಚಲನಶೀಲತೆಗೆ ಸನ್ನೆಗೋಲಾಗಿದೆ. ಲಂಕೇಶ್, ತೇಜಸ್ವಿ ಸುಧಾಕರ, ಬೆಸಗರಹಳ್ಳಿ ರಾಮಣ್ಣ ಮೊದಲಾದ ಉತ್ತಮ ಕತೆಗಾರರ ಪಡೆ ಇದರೊಳಗೆ ಭಾಗಿಯಾಗುವಂತೆ ಮಾಡಿ ಮಾನ್ಯತೆಯನ್ನು ತಂದುಕೊಟ್ಟಿದೆ ಒಟ್ಟಿನಲ್ಲಿ ಸಣ್ಣ ಕಥಾ ಪ್ರಕಾರ 'ಸ್ಥಾವರ ಗೊಳ್ಳಲು ಬಿಡದೆ 'ಜಂಗಮ ಸ್ಥಿಯಲ್ಲಿ ಸಾಗಲು ಶ್ರಮಿಸುತ್ತಾ ಬಂದಿದೆ ಎಂಬುದು ಸರ್ವಜನ ಸಂವೇದ್ಯ.

ಸ್ಪರ್ಧೆಗೆ ಬಂದ ೯೧೨ ಕಥೆಗಳಲ್ಲಿ ಸಂಪಾದಕ ವರ್ಗ ಮೊದಲ ಸುತ್ತಿನ ಜರಡಿ ಹಿಡಿದು. ತೀರ್ಪುಗಾರರ ಅವಗಾಹನೆಗೆ ಕಳಿಸಿಕೊಟ್ಟಿರುವ ಕತೆಗಳು ಸಾರ್ವಜನಿಕ ವಿಭಾಗದಲ್ಲಿ ೩೨ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ೭.

ಕನ್ನಡದಲ್ಲಿ ಬರೆಯ ಹೊರಡುವ ಹೊಸ ಸಣ್ಣ ಕತೆಗಾರನಿಗೆ ಎದುರಾಗುವ ಸವಾಲುಗಳು ವಿಶಿಷ್ಟವಾದವು. ಈ ಸಾಹಿತ್ಯ ಪ್ರಕಾರ ಆಧುನಿಕ ಕಾಲದ ಸಂಕೀರ್ಣ ಸಂವೇದನೆಗೆ ಮಾಧ್ಯಮವಾದ ಹಾಗೆ ಇತರ ಪ್ರಕಾರಗಳು ಆಗಲಿಲ್ಲ. ಅಲ್ಲದೆ ಸುದೈವದಿಂದ ಕನ್ನಡದ ಅತ್ಯುನ್ನತ ಪ್ರತಿಬೆಗಳು ಈ ಪ್ರಕಾರಗಳು ಬಳಸಿಕೊಂಡಿದ್ದು ಕೂಡ ಮುಖ್ಯ ಹೀಗಾಗಿ ಅನುಭವದ ಸ್ವಂತಿಕೆ ಹಾಗೂ ಬರವಣಿಗೆಯ ಕ್ರಮದ ಪ್ರಯೋಗಶೀಲತೆ ಇವೆರಡೂ ಮೇಳವಿಸದಿದ್ದರೆ ಕನ್ನಡದ ಹೊಸ ಕತೆಗಾರ ತನ್ನ ದನಿಯನ್ನು ವ್ಯಕ್ತಪಡಿಸಲಾರ. 'ಪ್ರಜಾವಾಣಿ' ಕಥಾ ಸ್ಪರ್ಧೆ ಅತ್ಯುತ್ತಮ ಸಣ್ಣ ಕತೆಗಾರರ ಅರಂಗೇಟ್ರಮ್' ನ ವೇದಿಕೆಯಾಗಿ ತನ್ನದೇ ಪರಂಪರೆ ಹೊಂದಿದೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡರೆ ಈ ವರ್ಷದ ಕಥಾ ಸ್ಪರ್ಧೆಗೆ ಬಂದ ಕತೆಗಳು ನಿರಾಸೆ ಹುಟ್ಟಿಸುವಂಥವು, ತೀರ್ಪುಗಾರರಿಗೆ ಒದಗಿಸಿದ ಅಂತಿಮ ಪಟ್ಟಿಯಲ್ಲಿದ್ದ ೩೨ ಕತೆಗಳಲ್ಲಿ ಬಹಳಷ್ಟು ಕತೆಗಳು ತೀರಾ ಸಾಮಾನ್ಯ ದರ್ಜೆಯವು.

ಓದತೊಡಗಿದೊಡನೆಯೆ ಅವುಗಳ ಮುಂದಿನ ಬೆಳವಣಿಗೆಯನ್ನು ಊಹಿಸುವಷ್ಟು ನಿರೀಕ್ಷಿತ ಧಾಟಿಯಲಿ ಬರೆದ ಕತೆಗಳು ಕಥಾ ಸಂವಿಧಾನ, ನಿರೂಪಣೆ ಮಾತ್ರ ಎಲ್ಲಕ್ಕಿಂತ ಹೆಚ್ಚಾಗಿ ಅವುಗಳಲ್ಲಿ ಅಭಿವ್ಯಕ್ತವಾಗುವು ಜೀವನದೃಷ್ಟಿ ಮತ್ತು ಅನುಭವದ ಶೋಧನೆಯ ದೃಷ್ಟಿಯಿಂದ ಈಗಾಗಲೇ ಕ್ಲೀಷೆ ಆಗಿರುವುದನ್ನೇ ಹೇಳುವಂಥವು. ಆಶ್ಚರ್ಯವೆಂದರೆ 'ನವೋದಯ ಕಾಲದ ಭಾವುಕತೆ' ಎಮದು ವಿಮರ್ಶಕರು ಜರೆಯುತ್ತಿದ್ದ ಸರಳೀಕೃತ ಗ್ರಹಿಕೆಗಳು ಈ ಕತೆಗಳಲ್ಲಿ ಕಂಡು ಬರುತ್ತವೆ. ಅಲ್ಲದೆ ಹಳ್ಳಿಯ ಬದುಕು. ಅನ್ಯಾಯ ಶೋಷಣೆ ಇವುಗಳ ಬಗ್ಗೆ ಸರಿಯದ ಧೋರಣೆಯಿದ್ದರೆ ಕತೆಗಾರಿಕೆ ಅಷ್ಟೇನೂ ಮಹತ್ವದ್ದಲ್ಲ ಎನ್ನುವ ಧೋರಣೆ ಇವುಗಳಲ್ಲಿ ಕಂಡು ಬರುತ್ತವೆ. ಕತೆಗಾರಿಕೆಯ ಎಲ್ಲಾ ನ್ಯೂನತೆಗಳನ್ನು ಬದಿಗಿಟ್ಟು ಸ್ಪರ್ಧೆಗೆ ಬಂದ ಕತೆಗಳು ಒಟ್ಟಾರೆಯಾಗಿ ಹೊಸ ಬರಹಗಾರರ ಬಗ್ಗೆ, ಬರಹದ ಬಗ್ಗೆ ಖಚಿತವಾದ್ದುದನ್ನು ಪ್ರತಿನಿಧಿಸುತ್ತವೆ. ಎಂದುಕೊಳ್ಳುವುದಾದರೆ ಈ ಅಂಶಗಳನ್ನು ಗಮನಿಸಬಹುದು.

೧) ನಗರವಾಸಿ ವ್ಯಕ್ತಿಗಳ ಆತ್ಮಕೇಂದ್ರಿತ ಅನುಭವಗಳ ಅಭಿವ್ಯಕ್ತಿ ಇತ್ತೀಚಿನ ಕತೆಗಳ ವಸ್ತುವಾಗಿ ಉಳಿದೆ ಇಲ್ಲವೆಂದು ಹೇಳಬಹುದು. ಹೆಚ್ಚಾಗಿ ಎಲ್ಲಾ ಕತೆಗಳು ನಗರದಿಂದಾಚೆಗಿನ ಬದುಕಿ ಅನುಭವವನ್ನು, ಆ ಬದುಕಿನದೇ ಆದ ಪರಿಸರ ಮತ್ತು ಪ್ರಾಚೀನ ನುಡಿಗಟ್ಟಿನ ಮೂಲಕ ಗ್ರಹಿಸುವ ಪ್ರಯತ್ನವನ್ನು ಮಾಡುತ್ತವೆ. ಈ ಅರ್ಥದಲ್ಲಿ ಕತೆಗಳು ಹೆಚ್ಚು ನಿರ್ಧಿಷ್ಟವಾಗಿ ಪ್ರಾಂತೀಯ ಅಥವಾ ಸ್ಥಳೀಯವಾಗಿವೆ. ದೇವನೂರು ಮಹಾದೇವರ 'ಕುಸುಮ ಬಾಲೆ' ಮೊದಲು ಪ್ರಕಟಿತವಾದಾಗ ಆ ಕೃತಿಯ ಸಾಂದ್ರವಾದ ಸ್ಥಳೀಯ ಉಪಭಾಷೆಗಳ ಬಗ್ಗೆ ಬಂದ ಆಕ್ಷೇಪಣೆಗಳು ಅಪ್ರಸ್ತುತವೆನ್ನುವ ಹಾಗೆ ಹೊಸ ಬರಹಗಾರರು ತಮ್ಮ ಕತೆಗಳಲ್ಲಿ ಸ್ಥಳೀಯ ಭಾವನೆಗಳನ್ನೇ ನೆಚ್ಚಿಕೊಂಡು ಬರೆಯುತ್ತಿದ್ದಾರೆ.

೨) ಅನುಭವವು ಗ್ರಾಮೀಣ ಮತ್ತು ಸ್ಥಳೀಯವಾಗಿರುವ ಜೊತೆಗೆ ಒಟ್ಟಾರೆ ಧೋರಣೆಗಳು Politically Correct ಆಗಿವೆ. ಅಂದರೆ ಪ್ರಗತಿಪರವೆಂದು ಹೆಸರಿಸಬಹುದಾದ ಧೋರಣೆಗಳ ಹೊರತಾಗಿ ಇನ್ನೇನನ್ನೊ ಹೇಳುವ ಧೈರ್ಯ ಅಥವಾ ಆವಶ್ಯಕತೆ ಈ ಬರಹಗಾರರಿಗೆ ಅನ್ನಿಸಿಲ್ಲ.

೩) ಬದುಕಿನ ವಿವರಗಳನ್ನು ದಾಖಲೆಮಾಡುವುದರಲ್ಲಿ ಕಂಡು ಬರುವ ಸಂಮೃದ್ಧತೆ ಹಾಗೂ ಸಾಂದ್ರತೆಗಳು ಗುಣಾತ್ಮಕ ಅಂಶಗಳಾವೆ. ಕಥೆಗಾರ ತನ್ನ ಅನುಭವ ಲೋಕದೊಂದಿಗೆ ಹೊಂದಿರುವ ಆತ್ಮೀಯತೆ ಇವು ದ್ಯೋತಕವಾಗಿವೆ. ಆದರೆ ಕೇವಲ ಸಮಾಜ ಶಾಸ್ತ್ರೀಯ ಎನ್ನಬಹುದಾದ ರೀತಿಯಲ್ಲಿ ಈ ವಿವರಗಳನ್ನು ಬಳಸಿಕೊಳ್ಳುವುದು ಆತಂಕದ ವಿಷಯವಾಗಿದೆ.

ವಸ್ತುವಿನ ದೃಷ್ಟಿಯಿಂದ ಹೇಳುವುದಾದರೆ. ನಾವು ಓದಿದ ಕತೆಗಳು ಆಧುನಿಕರಣ, ನಗರೀಕರಣ, ಜಾಗತೀಕರಣದ ಸದ್ಯದ ಅಂಶಗಳಿಗೆ ಬದ್ಧವಾಗಿವೆ. ಸಮಕಾಲೀನ ಸಂಸ್ಕೃತಿ ಹಾಗೂ ರಾಜಕೀಯ ಚರ್ಚೆಗಳಿಗೆ ತೆರೆದುಕೊಂಡಿವೆ.

೨ನೇ ಬಹುಮಾನ ಪಡೆದ 'ಬೀಜ ದೇವತೆ' ಕಥೆಯಲ್ಲಿ ಊರು ಮತ್ತು ಮನೆಯೊಳಗೆ ಕಾಲಿಟ್ಟುರುವಂತಹ ಭ್ರಷ್ಟತೆ. ಅನೈತಿಕತೆಯ ವಿರುದ್ಧ ತನ್ನ ಸಹಜವಾದ ಶ್ರದ್ಧೆಯ ಮೂಲಕ ನಂಬಿ ಪಾಲಿಸುತ್ತಿರುವ ಸ್ವಚ್ಛ ಜೀವನದ ಮೂಲಕ ಎದುರಿಸುವ ಬೀಜಗಳ ತಾಯಿಯೊಬ್ಬಳ ಚಿತ್ರಣವಿದೆ. ನೇರವಾದ ಶಕ್ತಪೂರ್ಣ ನಿರೂಪಣೆಯೊಂದಿಗೆ ಎಲ್ಲಿಯೂ ಕೂಡ ವಾಚ್ಯವಾಗಿ ಸಮಾಜದ ಬಗ್ಗೆ ಟೀಕೆ ಟಪ್ಪಣಿ ಮಾಡದೆ ಅದರ ಅಳದಲ್ಲಿ ಆಗುತ್ತಿರುವ ನೈತಿಕತೆಯ ಪಲ್ಲಟವನ್ನೇ ಕತೆಗಾರರು ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಕಥೆಯ ಉದ್ದಕ್ಕೂ ಹಲವಾರು ಸ್ತರ ಅರ್ಥ ಒಮ್ಮಿಸುತ್ತಿರುವ 'ಬೀಜ' ರೂಪಕ ಕಥೆಗೆ ಸ್ವಶಕ್ತವಾದ ರೂಪವನ್ನು ಕೊಟ್ಟಿದೆ ಎಂದು ಅಭಿಪ್ರಾಯ ಪಡುತ್ತಾರೆ.

೨೦೦೫ರಲ್ಲಿ ಬಹುಮಾನ ಪಡೆದ ಡಾ. ವಿನಯಾರವರ 'ಕಡೆತನಕಾ ಕಾಯೋ ಅಭಿಮಾನ' ಈ ಕತೆಯಲ್ಲಿ ನಾಲ್ಕು ತಲಾಮಾರುಗಳನ್ನು ಕಾಣುವ ಸ್ತ್ರೀಯೊಬ್ಬಳು, ಪ್ರತಿ ತಲೆಮಾರಿನಲ್ಲಿಯೂ ತನಗೊದಗುವ ಹಿಂಸೆಯನ್ನು ಸಹಿಸಿಕೊಂಡು ದಿಟ್ಟತನದ ಜೀವನವನ್ನು ಸಾಗಿಸುತ್ತಾಳೆ ಎಂಬ ಸಂಗತಿ ಇಲ್ಲಿ ಚಿತ್ರಣಗೊಂಡಿದೆ. ಈ ಕತೆಯಲ್ಲಿ ನಿರೂಪಕಿಯೇ ಕತೆಯನ್ನು ಮುನ್ನೆಡೆಸುತ್ತಾಳೆ. ನಿರೂಪಕಿಯ ಜೊತೆ ಹಲವು ಪಾತ್ರಗಳು ಇಲ್ಲಿ ಸಂಭಾಷಣೆಗೆ ತೊಡಗುವುದನ್ನು ಕಾಣಬಹುದು. ಈ ಕತೆಯನ್ನು ಕುರಿತು ಡಾ. ಕೆ.ವಿ. ನಾರಾಯಣ ಹಾಗೂ ರಾಘವೇಂದ್ರ ಪಾಟೀಲರು ಹೇಳುವಂತೆ ಪ್ರಜಾವಾಣಿಯ ಈ ಸಲದ ಕಥಾ ಸ್ಪರ್ಧೆಗೆ ಬಂದ ಕತೆಗಳ ಸಂಖ್ಯೆ ಸುಮಾರು ೫೦೦ರಷ್ಟು ಇದು ಕಳೆದ ವರ್ಷದ ಸ್ಪರ್ಧೆಗೆ ಬಂದ ಕತೆಗಳ ಸಂಖ್ಯೆಗೆ ಹೋಲಿಸಿದರೆ ಕಡಿಮೆ. ಮೊದಲ ಸುತ್ತಿನ ಆಯ್ಕೆಯನ್ನು ದಾಟಿಕೊಂಡು ತಮ್ಮ ಬಳಿಗೆ ಬಂದ ಕತೆಗಳ ಸಂಖ್ಯೆ ವಿದ್ಯಾರ್ಥಿ ವಿಭಾಗದ ೬ ಕತೆಗಳು ಸೇರಿದಂತೆ ಒಟ್ಟು ೪೦.

ಈ ೪೦ಕತೆಗಳು ನಮ್ಮಲ್ಲಿ ಒಂದಲ್ಲ ಒಂದು ರೀತಿ ಅತೃಪ್ತಿಯನ್ನು ಮೂಡಿಸಿವೆ. ಯಾಕೆ ಜೀವ ಝಲ್ಲೆನ್ನುವಂತಹ 'ಇಡೀ ಬದುಕನ್ನು ಈ ಮುಷ್ಟಿಗಾತ್ರದಲ್ಲಿ ಹಿಡಿದುಕೊಡುತ್ತೇನೆ ಎಂತ್ತೆನ್ನುವ ಛಲ, ಶ್ರದ್ಧೆ, ತನ್ಮಯತೆಗಳು ನಮ್ಮ ಹೊಸ ಕತೆಗಾರಿಗೆ ಸಾಧ್ಯವಾಗುತ್ತಿಲ್ಲ ಎನ್ನುವ ಪ್ರಶ್ನೆ ನಮ್ಮಲ್ಲಿ ಮೂಡಿತ್ತು. ಕಥೆ ಬರೆಯುವ ಕ್ರಿಯೆಯಲ್ಲಿ ಶ್ರದ್ಧೆ, ಇದ್ದು ನನ್ನ ಒಡಲ ಅನುಭವದ ತುಣುಕು ಎಂದು ಅಚ್ಚಿಕೊಂಡು ತೊಡಗುವಿಕೆ ಇಲ್ಲಿದರುವುದನ್ನು ನಮ್ಮಲ್ಲಿಗೆ ಬಂದ ಬಹುತೇಕ ಕತೆಗಳನ್ನು ಓದಿ ಅನುಭವಿಸಿದೆವು. ಕತೆ ಕತೆಗಾರನ ಜೀವನವನ್ನು ಒಳಗೊಳ್ಳುವ ನಾಟಕ ಅದು

ಬರೀ ವಿಚಾರಗಳ ಮಂಡನೆಯಾಗಲಿ ಪ್ರತಿಪಾದನೆಯಾಗಲಿ ಅಲ್ಲ. ಅದು ತನ್ನದೇ ಆದ ಭಾವಕೋಶವೊಂದನ್ನು ಕಟ್ಟಿಕೊಂಡು ನಿಲ್ಲುತ್ತದೆ. ಮತ್ತು ಆ ಭಾವಕೋಶದ ಮೂಲಕ ತನ್ನನ್ನು ತಾನು ಮೀರುವ ಸಾಧ್ಯತೆಗಳನ್ನು ಗಳಿಸಿಕೊಳ್ಳುತ್ತದೆ. ನಮಗೆ ಬಂದ ೪೦ ಕಥೆಗಳನ್ನು ಓದಿದಾಗ ಅನ್ನಿಸಿದ ಸಂಗತಿ ಎಂದರೆ ಜೀವನವನ್ನು ಇಡಿಯಾಗಿ ಗ್ರಹಿಸಲು ಇಲ್ಲಿನ ಬಹುತೇಕ ಕತೆಗಾರರು ಸಾಹಿತ್ಯದ ಪರಿಕರಗಳನ್ನು ಕರಗತ ಮಾಡಿಕೊಂಡಿಲ್ಲವೇನೋ ಎಂದು. ಸಾಹಿತ್ಯದ ಪರಿಕರಗಳ ಹೊರತಾಗಿಯೂ ಜೀವನದ ಗ್ರಹಿಕೆಗೆ ಅನ್ಯ ಶಿಸ್ತೀಯ ಮಾರ್ಗಗಳಿವೆ. ಅಂತಹ ಪರಿಕರಗಳನ್ನು ಇಲ್ಲಿನ ಬಹುತೇಕ ಕತೆಗಾರರು ರೂಢಿಸಿಕೊಂಡಿಲ್ಲವೆಂದು ಅನ್ನಿಸುತ್ತದೆ.

ಈ ಮೇಲಿ ಮಾತುಗಳು ಯಾವ ಆಕ್ಷೇಪಗಳನ್ನು ಇಟ್ಟುಕೊಂಡು ನಾವು ಕತೆಗಳನ್ನು ಓದಿದೆವು ಎನ್ನುವುದನ್ನು ಹೇಳುತ್ತವೆ. ಇಂತಹ ಆಕ್ಷೇಪಗಳ ಹಿನ್ನೆಲೆಯಲ್ಲಿ ೪೦ ಕಥೆಗಳನ್ನು ಓದಿದಾಗ 'ಕಡೆತನಕ ಕಾಯೋ ಅಭಿಮಾನ' ಕತೆ ನಮ್ಮ ಎದೆ ತಟ್ಟಿತು. ದಟ್ಟವಾದ ಬರವಣಿಗೆಯ ಈ ಪುಟ್ಟ ಕತೆ ನಾಲ್ಕು ತಲೆಮಾರುಗಳ ಜೀವನದ ಬೀಸನ್ನು ತನ್ನಲ್ಲಿ ಹಿಡಿದಿಟ್ಟುಕೊಂಡು ತೋರುತ್ತದೆ. ನಿರೂಪಕನ ಶ್ರದ್ಧೆ ಎಲ್ಲಿಯೂ ಸಡಿಲುಗೊಳ್ಳದಂತೆ ಸಾಗುತ್ತದೆ. ಕಥೆಯಲ್ಲಿ ಇಡಿಯಾಗಿ ಹರಡಿಕೊಂಡಿರುವುದು ಬದುಕು ಯಾವ ವೈಚಾರಿಕತೆಯ ಹಂಗಿಗೂ ಒಡ್ಡಿಕೊಳ್ಳದ ಬದುಕು! ಹಾಗೆಂದರೆ ಇಲ್ಲಿ ವೈಚಾರಿಕತೆ ಮಾಯವಾಗಿದೆ. ಎಂದೇನೂ ಅಲ್ಲ. ಇಲ್ಲಿ ಹಳ್ಳಿಯ ಸಾಲ ವ್ಯವಸ್ಥೆಯ ಪೆಟಿ ಬೂರ್ಜ್ವಾ ವ್ಯವಸ್ಥೆಯ ಬಗೆಗೆ ಹೆಣ್ಣಿನ ಶೋಷಣೆಯ ಗಂಡಿನ ದಮನಕಾರೀ ನಡವಳಿಕೆಯ ಬಗೆಗೆ, ಆಧುನೀಕರಣ ಜಾಗತೀಕರಣಗಳಿಂದ ಉಂಟಾದ ಪಲ್ಲಟಗಳ ಬಗೆಗೆ – ಹೀಗೆ ಅನೇಕ ವೈಚಾರಿಕ ಆಕೃತಿಗಳ ಬಗೆಗಿನ ಸೂಚನೆಗಳಿವೆ. ಆದರೆ ಇವೆಲ್ಲ ಅನುಷಂಗಿಕವಾದವುಗಳು. ಕಥೆಯ ನಿಜವಾದ ಶ್ರದ್ಧಾ ಕೇಂದ್ರ ಬದುಕು ಮತ್ತು ಅದು ಹೆಣೆದುಕೊಳ್ಳುವ ಸಂಬಂಧಗಳು ಮಾತ್ರ, ಆದ್ದರಿಂದಲೇ ಇಲ್ಲಿ ಬರುವ ಎಲ್ಲ ಪಾತ್ರಗಳೂ ಅಧೀಕೃತವಾಗಿ ಸ್ಥಾಪನೆಗೊಳ್ಳುತ್ತೆ. ಕಥೆಯಲ್ಲಿ ಒಂದು ಸಾಲಿನಲ್ಲಿ ಮಾತ್ರ ಬರುವ ಮೂಕಿ ಪ್ರೇಮಾ ಮತ್ತು ಕೇವಲ ಒಂದೆರಡು ಸಾಲುಗಳಲ್ಲಿ ಉಲ್ಲೇಖಗೊಳ್ಳುವ ಸುಬ್ರಾಯಪ್ಪ ಕಥೆಯ ಆವರಣದಲ್ಲಿ ದೀರ್ಘಕಾಲದಿಂದಲೂ ನಮ್ಮೊಂದಿಗೆ ಇದ್ದ ಜೀವಂತ ವ್ಯಕ್ತಿಗಳು ಅನ್ನಿಸುತ್ತದೆ. ಎಂದು ಈ ಕತೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೨೦೦೫ರಲ್ಲಿ ಬಹುಮಾನ ಪಡೆದ ಮಂಜುನಾಥಗೀತಾರವರ 'ಹಸಿರುಗಾಜಿನ ಬಳೆ' ಕತೆಯಲ್ಲಿ ಹೆಣ್ಣಿಗೆ ಸಂಬವಿಸುವ ಪ್ರಾಕೃತಿಕ ಋತು ಕ್ರಿಯೆಯನ್ನು ಅನಿಷ್ಟವೆಂಬಂತೆ ಕಾಣುವುದು. ಅನೈತಿಕ ಕ್ರಿಯೆಯಲ್ಲಿ ತೊಡಗುವ ಹೆಣ್ಣಿಗೆ ಸಮಾಜದಿಂದ ಆಗುವ ಹಿಂಸೆ ಹಾಗೂ ಆಕೆಯ ಮಕ್ಕಳು ಅನುಭವಿಸುವ ಅವಮಾನ ಇವನ್ನೇ ಪ್ರಧಾನ ಅಂಶವನ್ನಾಗುಳ್ಳ ಈ ಕತೆ ಹೆಣ್ಣಿನ ಅಸಹಾಯಕತೆಯನ್ನು ಚಿತ್ರಿಸಿಕೊಡುತ್ತದೆ. ಈ ಕತೆಯನ್ನು ಕುರಿತು ಡಾ. ಕೆ.ವಿ. ನಾರಾಯಣ

ಹಾಗೂ ರಾಘವೇಂದ್ರ ಪಾಟೀಲರು ಈ ಕತೆಯು ನವ ಪುರಾಣ ಒಂದನ್ನು ಕಟ್ಟಿಕೊಡುತ್ತದೆ. ಎನ್ನುತ್ತಾರೆ. ಈ ಕಥೆ ಗಂಡು –ಹೆಣ್ಣಿನ ಸಂಬಂಧದ ಅದಿಮ ಪ್ರತಿಮೆಯನ್ನು ಕೇಂದ್ರವಾಗಿಸಿಕೊಂಡು ಹೆಣ್ಣಿನ ಬಗೆಗೆ ಒಂದು ಹೊಸ ಭಾಷ್ಯವನ್ನು ಕಟ್ಟಿಕೊಡುತ್ತದೆ.

> ಗಂಡು ಹೆಣ್ಣನ್ನು ಬಯಸುತ್ತದೆ ಮತ್ತು
> ಅಸಹ್ಯಪಡುತ್ತದೆ.
> ಗಂಡು ಹಿಂಸಿಸುತ್ತ ಸುಖಪಡುತ್ತದೆ.
> ಹಿಂಸೆಗೆ ಒಳಗಾದ ಹೆಣ್ಣಿಗೆ ತಳ್ಳಲು ಕೈಯಿಲ್ಲ
> ಒದೆಯಲು ಕಾಲಿಲ್ಲ.
> ಹೆಣ್ಣು ಧರೆಗೆ ದೊಡ್ಡವನ
> ಅವ್ವ– ಮಗಳು–ಅಕ್ಕ–ತಂಗಿ
>
> ಗಂಡು ನೊರೊಂದು ಹಸಿರು ಗಾಜಿನ ಬಳೆಯ
> ಚೂರುಗಳನ್ನು ಬಯಸುತ್ತದೆ.

ಈ ಹೊಸ ಭಾಷ್ಯ ಸಂಬಂಧಗಳ ಗ್ರಹಿಕೆಯನ್ನು ಕುರಿತಂತೆ ಮತ್ತು ಆ ಮೂಲಕ ಒಟ್ಟು ಬದುಕನ್ನು ನೋಡುವುದನ್ನು ಕುರಿತಂತೆ ಹೊಸ ಒಳನೋಟಗಳನ್ನು ಕಟ್ಟಿಕೊಡುತ್ತದೆ. ಹೊಸ ಮಿಥ್ ಒಂದನ್ನು ಕಟ್ಟಲು ದುಡಿಯುವ ಈ ಕತೆ ಅದಕ್ಕಾಗಿ ಹಳೆಯ ಮಿಥನ್ನು ಒಡೆಯುತ್ತದೆ. ಈ ರೀತಿಯಾಗಿ ಈ ಕತೆಯ ಬಗ್ಗೆ ಅಭಿಪ್ರಾಯ ಪಡುತ್ತಾರೆ.

೨೦೦೪ರಲ್ಲಿ ಬಹುಮಾನ ಪಡೆದ ಅಲಕ ತೀರ್ಥಹಳ್ಳಿಯವರ ' ಈ ಕತೆಗಳ ಸಹವಾಸವೇ ಸಾಕು' ಎಂಬ ಕತೆಯಲ್ಲಿ ಶಾರದತ್ತೆ ಉತ್ತಮ ಕತೆಗಾರ್ತಿಯಾಗಿದ್ದು ತನ್ನ ಜೀವನದಲ್ಲಿ ತಾನು ಹಿಂದೆ ಕಂಡದನ್ನು, ಹಿಂದೆ ಕೇಳಿದನ್ನು ತನ್ನದೇ ಆದ ನಿರೂಪಣಾ ಶೈಲಿಯನ್ನು ಬಳಸಿ ಕತೆ ಹೇಳುತ್ತಿರುತ್ತಾಳೆ. ಈ ಕತೆಯ ಪ್ರಮುಖ ಪಾತ್ರವಾದ 'ಅಕ್ಷತಾ ಕುಮಾರಿ' ಮತ್ತು ಆಕೆಯ ಅತ್ತೆ ಇಬ್ಬರೂ ಕೂಡಿ ಈ ಕತೆಯನ್ನು ಕಟ್ಟಿಕೊಡುವ ಕತೆಯ ತಂತ್ರಗಾರಿಕೆ ಬಹಳ ವಿಶಿಷ್ಟವಾಗಿ ಮೂಡಿಬಂದಿದೆ. ಹೆಣ್ಣಿನ ಮನಸ್ಸಿನ ಒಳತೋಟಗಳನ್ನು ಈ ಕತೆ ಸ್ಪಷ್ಟವಾಗಿ ಧ್ವನಿಸುತ್ತದೆ.

ಈ ಕತೆಯನ್ನು ಕುರಿತು ಕುಂ. ವೀರಭದ್ರಪ್ಪ ಹಾಗೂ ಎ.ಎನ್. ಪ್ರಸನ್ನರವರು. ಈ ಕತೆ ಹೆಣ್ಣಿನ ಬಾಂದವ್ಯವನ್ನು ಹಾಗೂ ಹೆಣ್ಣಿನ ಮನಸ್ಸಿನಲ್ಲಿ ಸುಳಿಯುವ ಸಂದೇಹಗಳು ಕುಟುಂಬದ ಕಲಹಕ್ಕೆ ನಾಂದಿಯಾಗುವ ಸನ್ನಿವೇಶವನ್ನು ಒಳಗೊಂಡಿದೆ ಎನ್ನುತ್ತಾರೆ. ಕಾಲಗರ್ಭದಲ್ಲಿ

ಎಂದೋ ಕರಗಿಹೋಗಿದ್ದ ಘಟನೆಗಳು ಒಟ್ಟಾಗಿ ಹರಳುಗಟ್ಟಲು ಈಗಲೂ ತವಕಿಸುತ್ತವೆ ಎಂದು ಈ ಕತೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೨೦೦೬ರಲ್ಲಿ ಬಹುಮಾನ ಪಡೆದ ಕೆ.ಎಸ್. ಬಾಯಿರಿರವರ 'ದಿಂಡೀ' ಕತೆಯಲ್ಲಿ ಅಸಹಾಯಕ ಸ್ತ್ರೀ ಯೊಬ್ಬಳು ತಾನು ಎಲ್ಲರಂತೆ ಬದುಕಬೇಕೆಂಬ ಚಲವನ್ನು ತೊಟ್ಟು ಖಾನಾವಳಿಯನ್ನು ನಡೆಸಿ ತನ್ನ ದಿಟ್ಟತನವನ್ನು ಕತೆಯುದ್ದಕ್ಕೂ ಪ್ರದರ್ಶಿಸುತ್ತಾಳೆ. ತನ್ನ ಗಂಡನ ಕೆಟ್ಟಚಟಗಳನ್ನು ಸಹಿಸಿಕೊಂಡು ತನ್ನೆರಡು ಮಕ್ಕಳಿಗೂ ಒಂದು ನೆಲೆಯನ್ನು ಒದಗಿಸಿ ಅವರ ಬಾಳು ಹಸನಾದ ಮೇಲೆ ತನ್ನ ಮಕ್ಕಳಿಂದಲೂ ಹೊರದೂಡಲ್ ಪಟ್ಟು ಮತ್ತೆ ಸ್ವತಂತ್ರವಾಗಿ ಖಾನಾವಳಿಯನ್ನು ಆರಂಬಿಸಿ ತನ್ನ ಆದರ್ಶ ಬದುಕನ್ನು ಸಾಮಾನ್ಯ ಸ್ತ್ರೀಯರ ಮುಂದಿಡುತ್ತಾಳೆ. ಪ್ರಾರಂಭದಿಂದ ಕೊನೆಯವರೆವಿಗೂ ನಿರೂಪಕನೇ ಈ ಕತೆಯನ್ನು ಚಿತ್ರಿಸಿದ್ದಾನೆ. ಕತೆಯನ್ನು ಕುರಿತು ಸಿ.ಎನ್. ರಾಮಚಂದ್ರನ್ ಮತ್ತು ಚಿ. ಶ್ರೀನಿವಾಸರಾಜು ರವರು ಈ ಕತೆಯಲ್ಲಿ ಒಬ್ಬ ಸಾಮಾನ್ಯ ಮಹಿಳೆ ತೋರುವ ದಿಟ್ಟತನವು ಪ್ರಸ್ತುತ ಸಮಾಜದಲ್ಲಿ ಸ್ತ್ರೀಸಂವೇದನಾತ್ಮಕ ಹೋರಾಟಕ್ಕೆ ಉತ್ತಮ ಉದಾಹರಣೆ ಎಲ್ಲರಿಂದಲೂ ಹೊರದೂಡಲು ಪಟ್ಟರು ಸ್ತ್ರೀ ತನ್ನ ತನವನ್ನು ಹೇಗೆ ಕಾಪಾಡಿಕೊಳ್ಳಬಲ್ಲಳು ಎಂಬುದನ್ನು ಈ ಕತೆ ಧ್ವನಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

೨೦೦೬ರಲ್ಲಿ ಬಹುಮಾನ ಪಡೆದ ಡಿ.ಸಂಧ್ಯಾ ಹೊನಗುಂಟಿಕರ್ ರವರ 'ಹಾವು ಮುತ್ತಿನ ಹುಡುಕಾಟದಲ್ಲಿ' ಈ ಕತೆಯಲ್ಲಿ ನಮ್ಮ ಸಮಾಜದಲ್ಲಿ ಹೆಣ್ಣು ಲೈಂಗಿಕ ಕಾರ್ಯಕರ್ತೆಯಾಗಿ ಪರಿವರ್ತನೆಯಾಗಲು ಪುರುಷರೇ ಕಾರಣ, ಪುರುಷ ಪ್ರಧಾನವಾದ ಈ ಸಾಮಾಜಿಕ ವ್ಯವಸ್ಥೆ ಹೆಣ್ಣನ್ನು ಪ್ರತಿ ಹೆಜ್ಜೆಹೆಜ್ಜೆಗೂ ಯಾವ ರೀತಿ ತುಳಿಯುತ್ತದೆ. ಲೈಂಗಿಕ ಕಾರ್ಯಕರ್ತೆಯರು ಏಡ್ಸ್ ಮಹಾಮಾರಿಗೆ ಸಿಲುಕಿ ಅವರು ಸಮಾಜದಿಂದ, ಮಾನಸಿಕವಾಗಿ ದೈಹಿಕವಾಗಿ ಅನುಭವಿಸುವ ಹಿಂಸೆ ಈ ಕತೆಯಲ್ಲಿ ಸ್ವಾರಸ್ಯವಾಗಿ ಚಿತ್ರಣಗೊಂಡಿದೆ. ಕತೆಯ ಪ್ರಾರಂಭದಿಂದಲೂ ನಿರೂಪಕ ಹಲವು ಪ್ರಸಂಗಗಳನ್ನು ಕಣ್ಣಿಗೆ ಕಟ್ಟುವಂತಹ ರೀತಿಯಲ್ಲಿ ಚಿತ್ರಿಕರಿಸಿದ್ದಾರೆ. ಈ ಕತೆಯನ್ನು ಕುರಿತು ಸಿ.ಎನ್. ರಾಮಚಂದ್ರನ್, ಹಾಗೂ ಚಿ. ಶ್ರೀ ನಿವಾಸರಾಜುರವರು ಇಲ್ಲಿ ಕತೆಗಾರ್ತಿ ನೀಡಿರುವ ಮಾಹಿತಿಗಳ ಆಧಾರದ ಮೇಲೆ ಲೈಂಗಿಕ ಕಾರ್ಯಕರ್ತೆಯರ ನೋವು ಏನು? ಎಂಬುದು ಹಾಗೂ ಕತೆ ಸಾಮಾಜಿಕ ಮನಸ್ಸಿಗೆ ಎಷ್ಟರ ಮಟ್ಟಿಗೆ ತಟ್ಟುತ್ತದೆ. ಎಂಬುದು ಮುಖ್ಯ ಇಂದು ಸ್ತ್ರೀಮೂಕಿಯಾಗಿ ಅನುಭವಿಸುವ ನೋವುಗಳಲ್ಲಿ ಇದು ಕೂಡ ಒಂದು ಎಂದು ಹೇಳುತ್ತಾರೆ.

೨೦೦೮ರಲ್ಲಿ ಬಹುಮಾನ ಪಡೆದ ವೀರೇಶ ಸೌದ್ರಿ ಹೊಕ್ರಾನಿಯವರ 'ಪಾಲು' ಕತೆಯು ಬ್ಯಾಟಿ ಯಮುನಪ್ಪ ಬ್ಯಾಟೆಯನ್ನೇ ತನ್ನ ಜೀವನದ ಪ್ರತಿಷ್ಠೆ ಎಂದುಕೊಂಡು ಪ್ರಾಣಿಗಳ ಪ್ರಾಣಹರಣ ಮಾಡುತ್ತಿದ್ದ. ಕೊನೆಗೆ ಆತನಿಗೆ ಜ್ಞಾನೋದಯವಾಗಿ ಆತನಲ್ಲಿ ಗೌಪ್ಯವಾಗಿ ಅಡಗಿದ್ದ ಮೌಲ್ಯಯುತ ಅಂಶಗಳು ಹೊರ ಬರುತ್ತವೆ. ಈ ಕತೆಯಲ್ಲಿ ನಿರೂಪಕ ಕೆಲವು ಪ್ರಸಂಗಗಳಲ್ಲಿ ಮಾತ್ರ ಮಾತನಾಡುತ್ತೇನೆ. ಆದರೆ ಇಲ್ಲಿನ ಪಾತ್ರಗಳನ್ನೇ ಸಂಭಾಷಣೆಯಲ್ಲಿ ಹೆಚ್ಚಾಗಿ ತೊಡಗಿಸಿ ಸ್ವಾರಸ್ಯವಾಗಿ ಕತೆಯನ್ನು ಕಟ್ಟಿಕೊಡುತ್ತಾನೆ. ಈ ಕತೆಯನ್ನು ಕುರಿತು ಬರಗೂರು ರಾಮಚಂದ್ರಪ್ಪ ಹಾಗೂ ಹೆಚ್.ಎಸ್.ರಾಘವೇಂದ್ರ ರಾವ್ ರವರು 'ಪಾಲು' ಕತೆಯು ಮನುಷ್ಯನೊಳಗೆ ಅಡಗಿರುವ ಭಿನ್ನನೆಲೆಗಳನ್ನು ಶೋಧಿಸುವ ಸಾರ್ಥಕ ಪ್ರಯತ್ನ. ಈ ಕತೆ ಕೊನೆಯತನ ಓದುಗರ ಕುತೂಹಲವನ್ನು ಕಾಪಾಡಿಕೊಂಡು ಅನಿರೀಕ್ಷಿತ ತಿರುವುಗಳನ್ನು ಪಡೆಯುತ್ತಾ ವಾತ್ಸಲ್ಯದ ಚಿಲುಮೆಯಲ್ಲಿ ಮುಗಿಯುತ್ತದೆ. ಕೊನೆಯ ಕೆಲವು ಮಾತುಗಳು ವಾಚ್ಯವೆನ್ನಿಸಿದರು. ಇದು ಸಂಯಮ ಶೀಲವಾದ ಕತೆ. ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಅಂಶಗಳೆರಡೂ ಅಡಗಿರುತ್ತವೆ. ಆದರೆ ಅವುಗಳು ಸನ್ನಿವೇಶಕ್ಕೆ ತಕ್ಕಂತೆ ಪಾತ್ರವಹಿಸುತ್ತವೆ ಎಂಬುದಕ್ಕೆ ಈ ಕತೆ ಉದಾಹರಣೆ ಎಂದು ಹೇಳುತ್ತಾರೆ.

೨೦೦೮ರಲ್ಲಿ ಬಹುಮಾನ ಪಡೆದ ನಾಗಮಂಗಲ ಕೃಷ್ಣಮೂರ್ತಿಯವರ 'ಡವ್ ಕೋಟ್!' ಈ ಕತೆಯು ಇಂದಿನ ಶ್ರೀರಂಗಪಟ್ಟಣದ ಕತೆಯನ್ನು ಓದುಗರ ಮನಸ್ಸನ್ನು ತಲ್ಲಣಗೊಳಿಸುವಂತ ರೀತಿಯಲ್ಲಿ ಚಿತ್ರಿಸಿದೆ. ಪಾರಿವಾಳವನ್ನು ಕತೆಯ ಪ್ರಮುಖ ಪಾತ್ರವನ್ನಾಗಿಸಿಕೊಂಡ ಕತೆ ಪಾರಿವಾಳದ ಮೂಲಕವೇ ಕತೆಯನ್ನು ಮುಂದುವರೆಯುವಂತೆ ಮಾಡಿದ ಕತೆಗಾರನ ತಂತ್ರವನ್ನು ಮೆಚ್ಚಬೇಕಾದುದ್ದೆ. ಪ್ರಸ್ತುತವಾಗಿ ಇಂದು ಆಧುನೀಕರಣದಿಂದ ಬದಲಾಗುತ್ತಿರುವ ಸಮಾಜ ಯಾವ ರೀತಿ ಹೊಸ ರೂಪವನ್ನು ಪಡೆದುಕೊಂಡು ತನ್ನ ಹಿಂದಿನ ಜೀವನವನ್ನು ಐತಿಹಾಸಿಕ ಸ್ಮಾರಕಗಳನ್ನು ನಾಶಗೊಳಿಸುತ್ತಿದ್ದೆ ಎಂಬುದನ್ನು ಈ ಕತೆ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಬ್ರಿಟಿಷರ ವಿರುದ್ಧದ ಪ್ರತೀಕಾರ ಗಾಂಧಿನಾಡಿನ ಇಂದಿನ ಪರಿಸ್ಥಿತಿ, ಶ್ರೀರಂಗಪಟ್ಟಣದಲ್ಲಿನ ಐತಿಹಾಸಿಕ ಸ್ಮಾರಕಗಳ ವಿನಾಶವನ್ನು ಕುರಿತು ಈ ಕತೆ ಓದುಗರಿಗೆ ಅರ್ಥೈಸುತ್ತದೆ. ನಿರೂಪಕ ಈ ಕತೆಯಲ್ಲಿ ಪಾರಿವಾಳವನ್ನು ಪ್ರಧಾನ ಪಾತ್ರವನ್ನಾಗಿಸಿಕೊಂಡು ಚಿತ್ರೀಸಿರುವ ಈ ಕತೆ ಪಾರಿವಾಳಕ್ಕೆ ಕತೆಯನ್ನು ತೆಗೆಯುವ ಶಕ್ತಿ ನೀಡಿರುವ ತಂತ್ರಗಾರಿಕೆ ವಿಶಿಷ್ಟವಾಗಿರುವುದನ್ನು ಕಾಣಬಹುದು. ಈ ಕತೆಯನ್ನು ಕುರಿತು ಬರಗೂರು ರಾಮಚಂದ್ರಪ್ಪ ಹಾಗೂ ಹೆಚ್.ಎಸ್. ರಾಘವೇಂದ್ರರಾವ್ ರವರು ಪಾರಿವಾಳವೆಂಬ ಚಲನಶೀಲ ಸಂಖ್ಯೇತದ ಮೂಲಕ ತಮ್ಮ ಸಮುದಾಯಗಳ ನಿನ್ನೆ, ಇಂದು, ನಾಳೆಗಳನ್ನು ಒಂದು ಬೀಸಿನಲ್ಲಿ ಹಿಡಿಯುವ 'ಡವ್ ಕೋಟೆ' ಸಾಕಷ್ಟು ಒಳ್ಳೆಯ ಕತೆ. ರಾಜಕೀಯ,

ಸಾಮಾಜಿಕತೆ, ಚರಿತ್ರೆಯ ಸೃಜನಶೀಲ ಅವಲೋಕನ ಮನುಷ್ಯನ ಸಂಬಂಧಗಳು ಅನಾರೋಗ್ಯ ಇವೆಲ್ಲಾವನ್ನು ಬೇರೆ ಬೇರೆ ಎಂದು ಬಗೆಯದೆ ಒಟ್ಟಂದದಲ್ಲಿಯೇ ಹಿಡಿಯಲು ಬಯಸುವ ಅಂಬಲ ಇಲ್ಲಿದೆ. ನಿರೂಪಣೆ, ವರ್ಣಣೆ ಮತ್ತು ವೈಚಾರಿಕತೆಗಳು ಔಚಿತ್ಯ ಪೂರ್ಣವಾಗಿ ಬಳಕೆಯಾಗಿದೆ. ಕೆಲವು ವಾಚ್ಯವಾಗಿ ಬಿಡುವ ಅತಿ ವಿವರಣೆ ಮತ್ತು ಅನಗತ್ಯವೆನ್ನಿಸುವ ಉಪಶೀರ್ಷಿಕೆಗಳು ಕತೆಯ ಪರಿಣಾಮವನ್ನು ಕುಂದಿಸುತ್ತವೆ. ಐತಿಹಾಸಿಕ ಮಹತ್ವವನ್ನು ಸಾರುವ, ಅದರ ವಿನಾಶ ಅಂಚನ್ನು ಗುರುತಿಸುವ ಈ ಕತೆ ಓದುಗರಿಗೆ ಅರಿವನ್ನು ಮುಡಿಸುತ್ತದೆ ಎಂದಿದ್ದಾರೆ.

೨೦೦೭ರಲ್ಲಿ ಮೋಹನ್ ಹಬ್ಬುರವರ 'ವೃತ್ತದೊಳಗೊಂದು ವೃತ್ತ' ಎಂಬ ಕತೆಯು ಪ್ರತಿಯೊಂದು ಮಧ್ಯಮವರ್ಗದ ಕುಟುಂಬದಲ್ಲಿ ಸಂಬವಿಸುವ ಆರ್ಥಿಕ ಪರಿಸ್ಥಿತಿಯನ್ನು ಬಿಚ್ಚಿಡುತ್ತದೆ. ಇಂದಿನ ಬ್ರಾಹ್ಮಣ ಜನಾಂಗದ ಜೀವನ ವಿಧಾನವನ್ನು ಅವರು ಪಡುವ ಸಂಕಷ್ಟಗಳನ್ನು ತೆರೆದಿಡುತ್ತದೆ. ಬಡತನದ ಬೇನೆಗೆ ಸಿಲುಕಿ ಸಂಸಾರವನ್ನು ಸಾಗಿಸಲು ಅಸಾಧ್ಯವಾದಂತ ವ್ಯಕ್ತಿಯೋರ್ವ ಮನೆ ತೊರೆದು ಹೋಗಿ ಬೇರೊಬ್ಬರ ಜೀವನದ ಕಷ್ಟವನ್ನು ಅರಿತು ತನಗೊಬ್ಬನಿಗೆ ಜೀವನದಲ್ಲಿ ಸಂಕಷ್ಟವಿದೆ. ಎಂದು ಅರಿತಿದ್ದ ಆತ ತನ್ನ ಮನಸ್ಸು ಬದಲಾಯಿಸಿ ತನ್ನ ಮನೆಗೆ ಮರಳುತ್ತಾನೆ. ಈಕತೆಯನ್ನು ತೀರ್ಪುಗಾರರಾದ ಎಂ,ಹೆಚ್ ಕೃಷ್ಣಯ್ಯ ಹಾಗೂ ಬಸವರಾಜ ಕಲ್ಗುಡಿಯವರು ಈ ಕತೆಗೆ ಅಗಾದದದನ್ನು ದರ್ಶನದಲ್ಲಿ ಹಿಡಿಯುವ ಆಶಯವಿದೆ. ಆದರೆ ಸಾಧ್ಯತೆಗಳನ್ನು ಪಡೆದಿಲ್ಲ. ಆದರೆ ಹುಡುಕಾಟದ ಪ್ರಯತ್ನವನ್ನು ಹೇಳುವ ನಿರೂಪಣೆ ಕುತೂಹಲ ಹುಟ್ಟಿಸುತ್ತದೆ. ಮುಖ್ಯವಾಗಿ ಬದುಕಿನಲ್ಲಿದ್ದೇ ಗಟ್ಟಿತನ ಕಾಣುವ ಹೆಂಡತಿಯ ಪಾತ್ರ ಮೆಚ್ಚುಗೆ ಗಳಿಸುತ್ತದೆ. ಕತೆಗಾರನ ಉದ್ದೇಶವನ್ನು ಮೀರಿ ಈ ಹೆಣ್ಣಿನ ಪಾತ್ರವು ಕತೆಯಲ್ಲಿ ಗಟ್ಟಿಗಿತ್ತಿಯಾಗಿ ಕಾಣುವುದು ಕತೆಯ ಬಲವನ್ನು ಹೆಚ್ಚಿಸಿದೆ. ಬದುಕನ್ನು ಸಮರ್ಪಕವಾಗಿ ಅರ್ಥೈಸುವ ಈ ಕತೆ ಓದುಗರಿಗೆ ಹೊಸ ಅನುಭವವನ್ನು ಬದುಕಿನ ರಹಸ್ಯವನ್ನು ಕಟ್ಟಿಕೊಡುತ್ತದೆ. ಎಂದಿದ್ದಾರೆ.

೨೦೦೨ರಲ್ಲಿ ಬಹುಮಾನ ಪಡೆದ ಗಂಗಾಧರ ಬೀಚನಹಳ್ಳಿ ಯವರ 'ಜೀಮಾತಾ ವಾಹನ' ಕತೆಯಲ್ಲಿ ಕಳ್ಳನೋರ್ವ ಒಂದು ಮನೆಗೆ ಕಳ್ಳತನ ಮಾಡಲು ಬಂದಾಗ, ಕಳ್ಳನನ್ನು ಕಂಡಂತಹ ಮನೆಯೊಡೆಯ ಕಳ್ಳನ ಬಗ್ಗೆ ಊಹಿಸಿಕೊಳ್ಳುವ ಪ್ರಸಂಗಗಳು ಈ ಕತೆಯಲ್ಲಿ ಸ್ವಾರಸ್ಯವಾಗಿ ಮೂಡಿ ಬಂದಿವೆ. ಈ ಕತೆಯನ್ನು ಕತೆಗಾರ ಕನಸಿನಲ್ಲಿ ಕಂಡದನ್ನು ಹೇಳುತ್ತಾನೋ, ನಿಜವಾಗಿಯೂ ಈ ಪ್ರಸಂಗ ನಡೆಯಿತೋ ಎಂದು ಓದುಗನನ್ನು ದ್ವಂದ್ವತೆಗೆ ತಳ್ಳುವ ರೀತಿಯಲ್ಲಿ ಚಿತ್ರಣಗೊಂಡಿದೆ. ಈ ಕತೆಯನ್ನು ಕುರಿತು ಪ್ರೊ. ಸುಧಾಕರ್ ಮತ್ತು ಡಾ. ರಾಜೇಂದ್ರ ಚೆನ್ನಿಯವರ ಮೊದಲನೆ ಬಹುಮಾನ ಪಡೆದ ಜೀಮಾತಾ ವಾಹನ ಎಂಬುದು

ಗಮನ ಸೆಳೆದ ಕತೆ. ಕಳ್ಳತನದ ನಾನಾ ರೂಪ, ನಾನಾ ವೇಷಗಳ ದಾಖಲಾತಿಯೊಂದಿಗೆ ಕಳ್ಳರಿಗಿಂತ ಮಹಾಗಳ್ಳರತ್ತ ಗಮನ ಸೆಳೆಯುವ ಕಳ್ಳತನದ ವಿರಾಟ್ ರೂಪವನ್ನು ವಿಶ್ಲೇಷಿಸುವ ಉತ್ತಮ ಕತೆ ಎಂದು ಅಭಿಪ್ರಾಯ ಪಡುತ್ತಾರೆ. ಇವೆಲ್ಲಾ ನಡೆಯುವುದು ನನಸಿನಲ್ಲೋ? ಕನಸಿನಲ್ಲೋ ಕಳ್ಳನ ಬಗೆಗೆ ಮಾನವೀಯವಾಗಿ ಸ್ಪಂದಿಸುವ ಕ್ಷಮಿಸುವ ನಾಯಕನ ಗುಣ ಔದಾರ್ಯದ್ದೋ? ಪುಕ್ಕಲುತನದ್ದೋ? ಎಂಬುದು ಧ್ವನಿಪೂರ್ಣವಾಗಿ ಚಿತ್ರಣಗೊಂಡಿದೆ ಎನ್ನುತ್ತಾರೆ.

೨೦೦೩ರಲ್ಲಿ ಬಹುಮಾಡ ಪಡೆದ ಮಂಜುನಾಥ್ ಗೀತಾರವರ : 'ಒಳಗಲ ಜ್ಯೋತಿಯು' ಈ ಕತೆಯಲ್ಲಿ ದಲಿತ ಹಾಗೂ ಬಡವನಾದ ಸಿಡಿಯನ ಕುಟುಂಬ ದ್ಯಾವಪ್ಪ ಎಂಬ ಭೂಒಡೆಯನ ಕಪಿಮುಷ್ಟಿಗೆ ಸಿಲುಕಿ ನೋವಿನಿಂದ ನರಳುವುದು ಹಾಗೂ ಸಿಡಿಯನ ಮಗ ಅದನ್ನು ಪ್ರತಿರೋಧಿಸಿ ದ್ಯಾವಪ್ಪನ ಮಗಳನ್ನು ಮದುವೆಯಾಗುತ್ತಾನೆ. ಕೊನೆಯಲ್ಲಿ ಸಿಡಿಯನ ಕುಟುಂಬ ನೆಮ್ಮದಿಯ ತಾಣವನ್ನು ತಲುಪುತ್ತದೆ. ಈ ಕತೆಯಲ್ಲಿ ದಲಿತರ ನೋವು ಅಸಹಾಯಕತೆ ಸ್ಪಷ್ಟವಾಗಿ ಬಿಂಬಿತವಾಗಿದೆ. ಅದೇ ರೀತಿ ದಲಿತರು ರೊಚ್ಚಿಗೆದ್ದರೆ ಏನಾಗುತ್ತದೆ ಎಂಬುದು ಈ ಕತೆಯಲ್ಲಿ ಚಿತ್ರಣಗೊಂಡಿದೆ. ಈ ಕತೆಯನ್ನು ಕುರಿತು ಮನು ಹಾಗು ನೇಮಿ ಚಂದ್ರರವರು ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಗೆಂದು ಬಂದ ಕತೆಗಳ ಸಂಖ್ಯೆ ಸುಮಾರು ೬೫೦. ಇವುಗಳನ್ನು ಸೋಸಿ ಜರಡಿ ಹಿಡಿದು ತೀರ್ಪುಗಾರರಿಗೆ ಕಳುಹಿಸಿದ ಕಥೆಗಳ ಸಂಖ್ಯೆ. ಸಾಮಾನ್ಯ ವಿಭಾಗ–೨೭. ವಿದ್ಯಾರ್ಥಿ ವಿಭಾಗ–೫, ಒಟ್ಟು ೩೨.

ಹಾಗೆ ನೋಡಿದರೆ ಈ ಸಂಖ್ಯೆಗಳು ವಿಶೇಷವಾಗಿ ಏನನ್ನೂ ಹೇಳುವುದಿಲ್ಲ. ಆದರೆ ಕಥಾಸ್ಪರ್ಧೆಗೆ ಕಥೆಗಳನ್ನು ಕಳುಹಿಸುವವರ ಸಂಖ್ಯೆ ಇನ್ನೂ ಕುಗ್ಗಿಲ್ಲ ಎಂಬುದು ಸಮಾಧಾನಕರವಾದ ಅಂಶ. ಕನ್ನಡ ಕಥಾ ಸಾಹಿತ್ಯ ಕ್ಷೇತ್ರದಲ್ಲಿ ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಗೆ ತನ್ನದೇ ಆದ ವಿಶೇಷ ಸ್ಥಾನವಿದೆ ಎಂಬುದನ್ನು ಸಾಹಿತ್ಯ ಇತಿಹಾಸಕಾರರು ದಾಖಲಿಸಲೇಬೇಕಾದ ಅಂಶ. ಸುಮಾರು ಐದು ದಶಕಗಳಲಿಗೂ ಮೇಲ್ಪಟ್ಟ ಕಾಲದಲ್ಲಿ ಹೊಸ ಕಥೆಗಾರರನ್ನು ಸೃಷ್ಟಿಸುವ, ಕಥೆಗಾರರ ಬೆನ್ನು ತಟ್ಟಿ ಉತ್ತೇಜನ ನೀಡುವ ಕೆಲಸವನ್ನು ಈ ಕಥಾ ಸ್ಪರ್ಧೆ ಮಾಡುತ್ತಾ ಬಂದಿವೆ, ಈ ಸ್ಪರ್ಧೆಯ ಮೂಲಕ ಗುರುತಿಸಲ್ಪಟ್ಟ ಅನೇಕರು ಭವಿಷ್ಯದಲ್ಲಿ ಗಣ್ಯಮಾನ್ಯ ಕಥೇಗಾರರಾಗಿ ಪ್ರವರ್ಧಮಾನಕ್ಕೆ ಬಂದರು.

ಹಾಗಿರುವಾಗ ಈ ಸ್ಪರ್ಧೆಗೆ ಉದಯೋನ್ಮುಖ ಕಥೆಗಾರರು ಮಾತ್ರವಲ್ಲದೆ. ಕಥೆಯ ಕಥನದಲ್ಲಿ ಪರಿಣಿತಿ ಪಡೆದವರೂ ಭಾಗವಹಿಸಲು ಇಚ್ಚಿಸುವುದು ಸಹಜ, ಹಾಗಾಗಿ ಒಂದು ಮಟ್ಟದಲ್ಲಿ ವ್ಯತ್ಯಾಸ ಕಂಡು ಬರಬಹುದು. ಆದರೆ ಕಥೆ ಹೇಳುವವನ ಶಕ್ತಿ ಸಾಮರ್ಥ್ಯಗಳು,

ಶೋಷಿತ ವರ್ಗಗಳಿಂದ ಬಂದವರು. ಅವಮಾನ, ದಮನ, ಶೋಷಣೆ, ಅವನತಿಗಳಂಥ ಅನುಭವ ದ್ರವ್ಯದಲ್ಲಿ ಸೃಜನಶೀಲ ಅಭಿವ್ಯಕ್ತಿಯನ್ನು ಕಂಡುಕೊಂಡವರು. ಈ ವರ್ಷದ 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿಯೂ ಹೊಸಕಥೆಗಾರರು ನಮ್ಮ ನಡುವಿನ ಸಾಂಸ್ಕೃತಿಕ ಸಂದರ್ಭದ ಅನೇಕ ಮುಖಗಳನ್ನು ತೆರೆದು ತೋರಿಸಿದ್ದಾರೆ. ಈ ಕಥೆಗಳನ್ನು ಓದುವಾಗ ಕಥೆಗಾರರು ಧ್ವನಿಸುವ, ಹುಡುಕಾಡುವ, ಕ್ರಿಯೆಯ ಒಡನಾಟ ನಮಗೆ ಸಂತೋಷವನ್ನುಂಟುಮಾಡಿದೆ. ಆದರೆ ಕಥಾ ಸಾಹಿತ್ಯದಲ್ಲಿ ಸುದೀರ್ಘ ಪರಂಪರೆಯುಳ್ಳ ಮಹಿಳೆಯರು ಹಲವು ದಶಕಗಳಲ್ಲಿ ಈ ಸ್ಪರ್ಧೆಯಲ್ಲಿ ಸತ್ವಯುತ ಕಥೆಗಳನ್ನು ನೀಡುವಲ್ಲಿ ಏಕೆ ವಿಫಲರಾಗಿದ್ದಾರೆ. ಎಂಬುದು ಆಚ್ಚರಿಯ ಅಂಶ. ಇನ್ನು ಮುಂದೆ ನಮ್ಮ ಪರಿಶೀಲನೆಗೆ ಒಳಗಾದ ಹದಿನೈದು ಕಥೆಗಳ ವೈಶಿಷ್ಟ್ಯ ವೈವಿಧ್ಯ ಮತ್ತು ಸತ್ವವನ್ನು ಗ್ರಹಿಸಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ.

ಈ ಕಥೆಗಳಲ್ಲಿ ಗಮನಸೆಳೆದ ಮೊದಲ ಅಂಶವೆಂದರೆ ನಮ್ಮ ಕಥೆಗಾರರಲ್ಲಿ ಕಂಡು ಬರುವ ವಸ್ತು ವೈವಿಧ್ಯ ಮತ್ತು ಪ್ರಗತಿಶೀಲ ಆಶಯ. ಜೊತೆಗೆ ಭಾಷೆಯನ್ನು ಎಚ್ಚರದಿಂದ ಬಳಸಿಕೊಳ್ಳುವ ವಿಧಾನ, ಬಹುಪಾಲು ಕಥೆಗಳಲ್ಲಿ. ಕಥೆಯನ್ನು ಮುಕ್ತಾಯಗೊಳಿಸುವಲ್ಲಿ ಕಂಡು ಬಂದಿರುವ ಆತುರ ಹಾಗೂ ಗೊಂದಲ ಎದ್ದು ಕಾಣುತ್ತವೆ. ಕೆಲವು ಕಥೆಗಳು ಹೇಲಿಕೆಗಳಿಗೆ ಶರಣಾದರೆ. ಮತ್ತೆ ಕೆಲವು ವ್ಯಾಖ್ಯಾನದ ಭಾರದಿಂದ ಸುಸಿದಿವೆ. ಈ ಕಥೆಗಳು ಈ ಗೋಜಲುಗಳಿಂದ ಸಂಕೀರ್ಣತೆಯನ್ನು ಧ್ವನಿಶಕ್ತಿಯನ್ನು ಕಳೆದುಕೊಂಡಿರುವುದು. ಕಟು ಸತ್ಯ.

'ಕಾದ ಬೆಳಂದಿಗಳ ಸಿರಿ' ಮಹಾತ್ವಾಕಾಂಕ್ಷೆಯಿಂದ ಮೂಡಿಬಂದಿರುವ ಕತೆ. ಸಾಹೇಬಗೌಡನ ಮಗ ವಿರೂಪಾಕ್ಷಗೌಡನ ಖೂನಿಯಿಂದ ಕಥೆ ಹರಡಿಕೊಳ್ಳುತ್ತಾ ಮನವೀಯ ಸಂಬಂಧಗಳನ್ನು ಪ್ರಶ್ನಿಸುತ್ತದೆ. ಆದರೆ ಗೌಡನ ಸೊಸೆ ತವರಿಗೆ ಹೊರಟು ನಿಂತ ಪ್ರಸಂಗದಲ್ಲಿ ಬಸ್ಲಿಂಗಪ್ಪನ ಮಾತು ಸಂಕೀರ್ಣತೆಯನ್ನು ಕಳೆದುಕೊಳ್ಳುತ್ತದೆ. ಕತೆಯ ಕೇಂದ್ರ ಬಿಂದು ಬದಲಾಗುತ್ತಾ ಹೋಗುವುದರಿಂದ ಕತೆಯ ದೃಷ್ಟಿ ಸ್ಪಷ್ಟವಾಗುವುದಿಲ್ಲ. ಕತೆಯ ಕಾವ್ಯಾತ್ಮಕ ಶೀರ್ಷಿಕೆಗೂ, ಕತೆಯ ಆಶಯಕ್ಕೂ ಕಷ್ಟಪಟ್ಟು ಸಂಬಂಧವನ್ನು ಹುಡುಕುವಂತೆ ಮಾಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

೨೦೦೫ರಲ್ಲಿ ಬಹುಮಾನ ಪಡೆದ ಶರ್ಜಾಶಂಕರ್ ಹರಳಿಮಠ ರವರ 'ಬಾರಯ್ಯ ಬೆಳದಿಂಗಳೇ' ಈ ಕತೆಯಲ್ಲಿ ಅಂತರ್ ಜಾತಿ ವಿವಾಹವಾಗಿದ್ದ ಇಬ್ಬರೂ ದಂಪತಿಗಳು ಪಟ್ಟಣದಲ್ಲಿ ರಾತ್ರಿಯ ವೇಳೆ ತಮ್ಮ ಮನೆಯ ಮುಂದಿನ ಬೆಳದಿಂಗಳಲ್ಲಿ ಮಲಗಿ ತಮ್ಮ ಹಿಂದಿನ ಜೀವನದ ಸವಿನೆನಪುಗಳನ್ನು ಮೆಲಕು ಹಾಕುತ್ತಾರೆ. ಈ ಕತೆಯಲ್ಲಿ ನಿರಾಶ್ರಿತರಾದ ಬ್ರಾಹ್ಮಣ

ಭಾಷೆಯನ್ನು ದುಡಿಸಿಕೊಳ್ಳುವ ರೀತಿ, ಪಾತ್ರ ರಚನೆ, ಕಥೆಯಲ್ಲಿರುವ ಅಂತಃಸತ್ವ ಈ ವ್ಯತ್ಯಾಸವನ್ನು ಅಳಿಸಿ ಬಿಡುತ್ತದೆ. ಹಾಗಾಗಿ ಮೊದಲ ಬಾರಿ ಬರೆಯುತ್ತಿರುವವನೂ ಅದ್ಭುತ ಕಥೆಯ ಸೃಷ್ಟಿಕರ್ತನಾಗಬಲ್ಲ.

ಮೊದಲನೆಯ ಬಹುಮಾನ ಪಡೆದಿರುವ 'ಒಳಗಲ ಜೋತಿಯು' ವಿಶಿಷ್ಟವಾಗಿ ನಮ್ಮನ್ನು ಸೆರೆಹಿಡಿಯುವ ಕೃತಿ. ಈ ಕತೆಯಲ್ಲಿ ಭಾಷೆಯನ್ನು ದುಡಿಸಿಕೊಳ್ಳುವ ರೀತಿ, ಕೆಲವೇ ಪಾತ್ರಗಳ ಮೂಲಕ ವಿಶಾಲವಾದ ಚಿತ್ರವನ್ನು ಬಿಡಿಸುವ ಪರಿ ಮೆಚ್ಚುಗೆಯಾಗುತ್ತದೆ. ದುರಂತವೇ ಕಥೆಯ ಚಿತ್ರವಾಗುತ್ತದೇನೋ ಎಂಬಂತೆ ಅಂತ್ಯದಲ್ಲಿ ನುಸುಳುವ ಮೋಡದ ಬಿಳಿ ಅಂಚು ಓದುಗನನ್ನು ನಿರಾಳವಾಗಿ ಉಸಿರಾಡುವಂತೆ ಮಾಡುತ್ತದೆ. ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೨೦೦೧ರಲ್ಲಿ ಬಹುಮಾನ ಪಡೆದ ಮಂಜುನಾಥ ಗೀತಾರವರ 'ನಗೆ ನಮ್ಮ ಕುಲದೇವರು' ಈ ಕತೆಯಲ್ಲಿ ಕುಣಿತವನ್ನೇ ತನ್ನ ಜೀವನ ಎಂದು ನಂಬಿ ಊರಿನ (ಕೇರಿಯ) ಜನರ ಮನಸ್ಸನ್ನು ಸೂರೆಗೊಂಡಿದ್ದ ವ್ಯಕ್ತಿ, ಕೆಲವು ದುಷ್ಟರ ಮಾತು ಕೇಳಿ ಎಲೆಕ್ಷನ್‌ಗೆ ನಿಲ್ಲುತ್ತಾನೆ. ಎಲೆಕ್ಷನ್‌ಗೆ ನಿಂತು ಊರಿನ ಜನರ ಮನಸ್ಸಿನಿಂದ ದೂರವಾಗಿ ಆತ ಎಲೆಕ್ಷನಿನಲ್ಲಿ ಸೋತು ತನ್ನ ವ್ಯಕ್ತಿತ್ವವನ್ನೇ ಹಾಳು ಮಾಡಿಕೊಳ್ಳುತ್ತಾನೆ. ಹೀಗೆ ಈ ಕತೆಯಲ್ಲಿ ದೇವರ ಮುಂದೆ ಕುಣಿಯುವ ವ್ಯಕ್ತಿ ಕೊನೆಗೆ ತನ್ನ ತನವನ್ನೇ ಕಳೆದು ಕೊಳ್ಳುತ್ತಾನೆ. ಈ ಕತೆಯಲ್ಲಿ ನಿರೂಪಕ ಅಂಕ ಎನ್ನುವ ಪಾತ್ರದ ಮೂಲಕ ಈ ಕತೆಯನ್ನು ಸ್ವಾರಸ್ಯವಾಗಿ ಕಟ್ಟಿಕೊಡುತ್ತಾನೆ. ಈ ಕತೆಯನ್ನು ಕುರಿತು ರಾಮದಾಸ್ ಮತ್ತು ಡಾ. ವಿಜಯಾ ಸುಬ್ಬರಾವ್ ರವರು ಈ ಕತೆ ರಾಜಕೀಯ ವಿವಿಧ ಮುಖವನ್ನು ಚಿತ್ರಸುತ್ತದೆ. ಇಂದಿನ ರಾಜಕೀಯ ವ್ಯವಸ್ಥೆ ನಮ್ಮ ಸಂಸ್ಕೃತಿ ಮತ್ತು ಜನರ ಮನೋಭಾವದ ಮೇಲೆ ಯಾವ ರೀತಿ ದುಷ್ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಸೊಗಸಾಗಿ ವಿವರಿಸಲಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

೧೯೯೭ರಲ್ಲಿ ಬಹುಮಾನ ಪಡೆದ ರಾಜಶೇಖರ ಹತಗುಂದಿಯವರ 'ಕಾಡ ಬೆಳದಿಂಗಳ ಸಿರಿ' ಎಂಬ ಕತೆಯಲ್ಲಿ ಸಾಹೇಬಗೌಡ ಎಂಬ ವ್ಯಕ್ತಿ ದೊಡ್ಡ ರಾಜಕಾರಣಿ, ಈತ ತಮ್ಮ ಮಗನನ್ನು ತಿದ್ದಲು ಪ್ರಯತ್ನಪಟ್ಟು ಅದು ಅಸಾಧ್ಯವೆಂದು ಸುಮ್ಮನಾಗುತ್ತಾನೆ. ಸಾಹೇಬಗೌಡನ ಮಗ ತನ್ನ ಕೆಟ್ಟ ನಡವಳಕೆಯಿಂದ ಕೆಲವು ದುಷ್ಕರ್ಮಿಗಳಿಂದ ಕೊಲೆಗೀಡಾಗುತ್ತಾನೆ. ಆಗ ಮಗನ ಕೊಲೆಯಿಂದ ಸಾಹೇಬಗೌಡ ಪರಿತಪಿಸುವಂತಹ ಚಿತ್ರಣ ಈ ಕತೆಯಲ್ಲಿ ವ್ಯಕ್ತವಾಗಿದೆ. ಈ ಕತೆಯನ್ನು ಕುರಿತು ಟಿ.ಜಿ. ರಾಘವ ಮತ್ತು ಚಿ. ಶ್ರೀನಿವಾಸರಾಜು ರವರು ಕನ್ನಡ ಸಣ್ಣಕಥೆ ಸಮೃದ್ಧವಾಗಿ ಬೆಳೆದ ಸಾಹಿತ್ಯ ಪ್ರಕಾರ ಬಹುಪಾಲು ಹೊಸ ಅಲೆಯ ಕಥೆಗಾರರು ಸಮಾಜದ

ಕುಟುಂಬದ ಸಂಕಷ್ಟವನ್ನು ಹಾಗೂ ದಲಿತ ಜನಾಂಗದವರಾದ ಗಂಗಾ ಮತ್ತು ಆಕೆಯ ಅಜ್ಜಿಯು ಹಳ್ಳಿಯ ಕಟ್ಟುಪಾಡುಗಳಿಂದ ಹೊರಬಂದು ಜೀವಿಸುವುದನ್ನು ಈ ಕತೆ ಚಿತ್ರಿಸುತ್ತದೆ. ಈ ಕತೆಯನ್ನು ಕುರಿತು ಡಾ. ಕೆ.ವಿ. ನಾರಾಯಣ ಹಾಗೂ ರಾಘವೇಂದ್ರ ಪಾಟೀಲರು ಈ ಕತೆ ೩ನೇ ಸ್ಥಾನವನ್ನು ಪಡೆದುಕೊಂಡಿದೆ. ತನ್ನ ಭಾವಗೀತಾತ್ಮಕ ಗುಣದಿಂದ ತಾನು ಒಳಗೊಂಡ ಅರ್ಥ ವಿನ್ಯಾಸಗಳ ಸಾಧ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ತನ್ನನ್ನು ಪ್ರಕರವಾಗಿ ಮುಂದೊಡ್ಡಿಕೊಳ್ಳುತ್ತದೆ. ಇಡೀ ಕಥೆಯಲ್ಲಿ ಬೆಳದಿಂಗಳು ಕಥೇಯ ಒಂದು ಪಾತ್ರವಾಗಿ ಒಂದು ಆವರಣವಾಗಿ ದಟ್ಟವಾಗಿ ಬರುತ್ತದೆ ಈ ಬೆಳದಿಂಗಳು ವಾತ್ಸಲ್ಯವಾಗುತ್ತದೆ. ಪ್ರೀತಿ ಪ್ರೇಮವಾಗುತ್ತದೆ. ಸಮಾಜವನ್ನು ಒಂದಾಗಿ ಹಿಡಿದಿಟ್ಟಿರುವ ಸೌಹಾರ್ದವಾಗುತ್ತದೆ. ಹೀಗೆ ಒಟ್ಟು ಪೋಷಕ ಮೌಲ್ಯವಾಗುತ್ತದೆ. ಈ ಎಲ್ಲ ಅರ್ಥ ಸಾಧ್ಯತೆಗಳ ಬೆಳದಿಂಗಳಿನ ಹೊಳೆಯಲ್ಲಿ ಮೀಯುತ್ತ ಮೇಲ್ಜಾತಿಯ ಮೋಹನನ ಅಪ್ಪ ತನ್ನ ಸಂಕುಚಿತತೆಯ ಭೂತದ ಪಾಪಲೇಪವನ್ನು ಕಳೆದುಕೊಳ್ಳುತ್ತಿದ್ದರೆ. ಹೊಲೆಯರ ಗಂಗಾ ಮತ್ತು ಆಕೆಯ ಅಜ್ಜಿ ತಮ್ಮ ಭೂತ ಸಂಕೋಲೆಗಳನ್ನು ಕಳೆದುಕೊಳ್ಳುತ್ತಾರೆ. ಬೆಳದಿಂಗಳು ಏನೆಲ್ಲ ಪಲ್ಲಟಗಳಿಗೆ ಸಾಕ್ಷಿಯಾಗುತ್ತದೆ. ಸಾವಿನ ಮುಂದೆ ನಿಮತ ದೊಡ್ಡ ಹೆಗಡೆಯು ತನ್ನ ಪಾಪದ ಭಾರ ಕಡಿಮೆ ಮಾಡಿಕೊಳ್ಳಲು ನೋಡಿದರೆ, ಮೊಹನನ ಅಪ್ಪ ಸಾವಿವ ನಂತರದಲ್ಲಿ ಜಾತಿ ಸಂಕೋಚವನ್ನು ಮೀಂದ ಹಕ್ಕಿಯಾಗಿ ಹಾರುತ್ತ ತಿಂಗಳಿನಲ್ಲಿ ಬೆರೆತು ಬೆಳದಿಂಗಳಿಗೆ ಇನ್ನಷ್ಟು ಶೋಬೆ ತರುತ್ತಾನೆ. ಎಂದು ಈ ಕತೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

೧೯೯೬ರಲ್ಲಿ ಬಹುಮಾನ ಪಡೆದ ಬಿ.ಆರ್. ವೆಂಕಣ್ಣನವರ 'ಮುಗಿಲೊಡಲ ಮಿಂಚು' ಕತೆಯಲ್ಲಿ ಪದವೀದರನೊಬ್ಬ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಪೊಲೀಸ್ ವ್ಯವಸ್ಥೆಯಲ್ಲಿ ಕಂಡು ಬರುವ ದುರಾಡಳಿತವನ್ನು ಕಂಡು ಅಸಹ್ಯಪಡುವ ಹಾಗೂ ಆತ ತನ್ನ ಗ್ರಾಮದಲ್ಲಿ ತನ್ನ ಕುಟುಂಬದಿಂದ ಅನುಭವಿಸುವ ಸಂಕಷ್ಟವನ್ನು ಈ ಕತೆ ಚಿತ್ರಿಸುತ್ತದೆ. ಈ ಕತೆಯನ್ನು ಕುರಿತು ಕೆ.ಎಸ್. ನಿಸಾರ್ ಅಹಮದ್ ಮತ್ತು ಅ.ರಾ. ಮಿತ್ರ ರವರ ಸಣ್ಣಕಥೆ ಒಂದು ಸಂಕೀರ್ಣ ರಚನೆ. ನಮ್ಮ ಮಣ್ಣಿನ. ಪ್ರಕೃತಿಯ ಜನ ಜೀವನದ ವಿಶಿಷ್ಟ ಮುಖಗಳನ್ನು ನಿರ್ದಿಷ್ಟ ವ್ಯಕ್ತಿ, ಘಟನೆಗಳ, ಭಾಷೆಯ ಹಿನ್ನೆಲೆಯಲ್ಲಿ ಶೋಧಿಸುವ ಇಕ್ಕಟ್ಟಿನ ರಚನೆಯ ಕೌಶಲವನ್ನು ಸಣ್ಣ ಕತೆಗಾರ ಮೆರಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಗೆ ಬಂದಿದ್ದ ಕತೆಗಳನ್ನು ಪರಿಶೀಲಿಸಬೇಕಾಗುತ್ತದೆ.

ವರ್ಷದಿಂದ ವರ್ಷಕ್ಕೆ ಕಥೆ ಬರೆಯುವವರ ಸಂಖ್ಯೆ ಕ್ಷೀಣಿಸುತ್ತಿದೆ. ಇದು ಗುಣಮಟ್ಟಕ್ಕೂ ಅನ್ವಯಿಸುತ್ತದೆ. ಕಳೆದ ವರ್ಷಕ್ಕಿಂತ ಈ ವರ್ಷ ಸ್ಪರ್ಧೆಗೆ ಬಂದಿದ್ದ ಕಥೆಗಳ ಸಂಖ್ಯೆ ಇಳಿದಿದೆ. ೧೯೯೬ರ ದೀಪಾವಳಿ ಕತಾಸ್ಪರ್ಧೆಗೆ ಸಾಮಾನ್ಯ ವಿಭಾಗಕ್ಕೆ ೧೪೫ ಕಥೆಗಳೂ

ವಿದ್ಯಾರ್ಥಿ ವಿಭಾಗಕ್ಕೆ ೨೩ ಕಥೆಗಳೂ ಬಂದಿದ್ದವು. ಸಂಪಾದಕೀಯ ವಿಭಾಗದವರ ಪ್ರಾಥಮಿಕ ಪರಿಶೀಲನೆ ನಂತರ ತೀರ್ಪುಗಾರರ ಪ್ರಾಥಮಿಕ ಪರಿಶೀಲನೆ ನಂತರ ತೀರ್ಪುಗಾರರ ಅವಗಾಹನೆಗೆ ಬಂದದ್ದು ಸಾಮಾನ್ಯ ವಿಭಾಗದಲ್ಲಿ ಒಟ್ಟು ೧೩ ಮತ್ತು ವಿದ್ಯಾರ್ಥಿ ವಿಭಾಗದಲ್ಲಿ ೨ ಕಥೆಗಳು ಮಾತ್ರ.

ಈ ವರ್ಷ ಪ್ರಥಮ ಬಹುಮಾನಕ್ಕೆ ಅರ್ಹವಾದ ಕಥೆ 'ಮುಗಿಲೊಡಲ ಮಿಂಚು' ಸಮಾಜದಲ್ಲಿ ಕೌಟುಂಬಿಕ ಹಾಗೂ ಗ್ರಾಮೀಣ ಕ್ರೌರ್ಯಗಳನ್ನು ಎದುರಿಸಿದ ಒಬ್ಬ ಪದವೀಧರ ಕೊನೆಗೆ ಪೊಲೀಸ್ ಕಾನ್ಸ್ ಟೇಬಲ್ ಹುದ್ದೆಗಿಟ್ಟಿಸಿಕೊಂಡರೆ ಅಲ್ಲಿ ನನ್ನ ನರ್ತನ ಮಾಡುವಷ್ಟು ಹುಚ್ಚೆದ್ದ ಕ್ರೌರ್ಯವನ್ನು ಕಾಣುವುದು. ಈ ಸೊಗಸಾದ ಕಥೆಯ ವಸ್ತು, ಕಥೆಯ ಉದ್ದಕ್ಕೂ ಎಲ್ಲೂ ಸಿಡಿದು ಬೀಳದ ನಿರುಪಾಯನಾಗಿ ಎಲ್ಲವನ್ನು ನೂಗಿಕೊಳ್ಳುವ ಈ ಹುಡುಗ ಕೊನೆಗೆ ಆ ಸ್ಪೋಟಿಸಿ ವ್ಯವಸ್ಥೆಯನ್ನು ಎದುರಿಸಬಲ್ಲೆ ಎಂಬ ದೈರ್ಯವನ್ನು ಇತ್ಯಾತ್ಮಕವಾಗಿ ಪ್ರಕಟಿಸಿದ್ದೇ ಈ ಕಥೆಯ ವೈಶಿಷ್ಟ್ಯ ಎಂದು ಈ ಕತೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

೨೦೦೩ರಲ್ಲಿ ಬಹುಮಾನ ಪಡೆದ ಸಂದೀಪ ನಾಯಕರ 'ಉರುಳಿದ ವೃಕ್ಷ' ಕತೆಯಲ್ಲಿ ಮಾವಿನ ಮರ ಪ್ರಧಾನವಾಗಿ ಕಾಣಿಸುವ ಈ ಕತೆಯಲ್ಲಿ ಮಾವಿನ ಮರ ಬೃಹದಾಕಾರದ ತನ್ನ ವಿಸ್ತಾರವನ್ನು ತನ್ನ ಪರೋಪಕಾರಿ ಗುಣವನ್ನು ತೋರಿ ಆದರ್ಶವಾಗಿದೆ. ಈ ಕತೆಯಲ್ಲಿ ಊರಿನ ಜನ ಯಾವುದೋ ಕುರುಡು ನೆಪವೊಂದನ್ನು ಮಾಡಿಕೊಂಡು ಮಾವಿನ ಮರದ ಒಡೆಯನನ್ನು ಸಂಕಷ್ಟ ಪರಿಸ್ಥಿತಿಗೆ ಸಿಲುಕಿನ ಆ ಮರವನ್ನು ಕಡಿಯುವ ಚಿತ್ರ ಬಹಳ ವಿದ್ರಾವಕವಾಗಿ ಚಿತ್ರಣಗೊಂಡಿದೆ.

ಈ ಕತೆಯನ್ನು ಕುರಿತು 'ಮನು' ನೇಮಿಚಂದ್ರರವರ ೩ನೇ ಬಹುಮಾನ ಪಡೆದ 'ಉರುಳಿದ ವೃಕ್ಷ' ಕತೆಯಲ್ಲಿ ಮರ ಉರುಳುವ ಒಂದು ತೀರಾ ಚಿಕ್ಕ ಘಟನೆಯ ಸುತ್ತ ಆರಂಭವಾಗಿ ಪರಿಸರ ಸಂರಕ್ಷಣೆಯಂತಹ ವಸ್ತುವಿನ ಬಗ್ಗೆ ಗಂಭೀರರವಾಗಿ ಯೋಚಿಸುವಂತಹ ಕಥೆಯಾಗಿ ಬೃಹದಾಕಾರವಾಗಿ ಬೆಳೆದು ನಿಂತು ನಮ್ಮ ಎದೆಯನ್ನು ತಟ್ಟುತ್ತದೆ. ಹಾಗಾಗಿ ಕಥಾ ಹಂದರಕ್ಕಿಂತ ಕಥೆಯನ್ನು ಮನಮುಟ್ಟಿ ಹೇಳುವ ಕಥೆಗಾರನ ಶಕ್ತಿ ಸಣ್ಣ ಕತೆಯಲ್ಲಿ ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಕನ್ನಡ ಕಥಾಸಾಹಿತ್ಯದಲ್ಲಿ ಭಾಷೆಯ ಕಥಾಹಂದರದ ಕಥನ ಶೈಲಿಯ ದೃಷ್ಟಿಯಿಂದ ವಿವಿಧ ರೀತಿಯಲ್ಲಿ ಪ್ರಯೋಗ ನಡೆಸುವವರು ಇನ್ನೂ ಇದ್ದಾರೆ. ಎಂಬುದು ಮನಸ್ಸಿಗೆ ತೃಪ್ತಿ ನೀಡುವ ಸಂಗತಿ ಎಂದಿದ್ದಾರೆ.

೨೦೦೪ ರಲ್ಲಿ ಬಹುಮಾನ ಪಡೆದ ಡಾ. ವಿನಯಾ ರವರ 'ಒಂದು ಖಾಸಗಿ ಪತ್ರ' ಕತೆಯಲ್ಲಿ ಹೆಣ್ಣೊಬ್ಬಳು ತನ್ನ ಬಾಲ್ಯದ ಪ್ರಿಯಕರನಾದ ಮಹೇಶನಿಗೆ ತನ್ನ ಬಾಲ್ಯದ ನೆನಪನ್ನೂ

ಹಾಗೂ ತನ್ನ ಪ್ರೀತಿಯ ಚಿತ್ರಣವನ್ನು ಜ್ಞಾಪಿಸಿಕೊಂಡು ಪತ್ರ ಬರೆಯುತ್ತಾಳೆ. ಇಷ್ಟು ವಯಸ್ಸಾದರೂ ಸಹ ತನ್ನ ಬಾಳಬುತ್ತಿಯ ಹಿಂದಿನ ನೆನಪು ಮಾಸದೆ ಹಾಗೆ ಉಳಿದಿರುವುದನ್ನು ಈ ಕತೆ ಸ್ವಾರಸ್ಯವಾಗಿ ಚಿತ್ರಿಸುತ್ತದೆ.

ಈ ಕತೆಯನ್ನು ಕುರಿತು ಎ.ಎನ್. ಪ್ರಸನ್ನ ಹಾಗೂ ಕುಂ. ವೀರಭದ್ರಪ್ಪನವರು ಈ ಕತೆ ಸ್ತ್ರಿ ಶತಶತಮಾನಗಳಿಂದ ತನ್ನ ಭಾವನೆಗಳನ್ನು ಹೊರಹಾಕದೆ ಮನಸ್ಸಿನಲ್ಲಿ ಕೊರಗುತ್ತಿದ್ದವಳು ತನ್ನ ಬಾಲ್ಯದ ಸಂಗತಿಗಳನ್ನು ಇಂದು ಹೊರಹಾಕುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾಳೆ ಎನ್ನುತ್ತಾರೆ. ಒಂದು ಪತ್ರವನ್ನು ಆಧರಿಸಿ ರಚನೆಯಾದ ಈ ಕತೆ ಬರಿ ಪತ್ರವಾಗಿದರೆ ಹಿಂದನ ಬದುಕಿನ ಸ್ವಾರಸ್ಯವನ್ನು ಸವಿಯುವ, ಪುನರ್ ಮನನ ಮಾಡಿಕೊಳ್ಳುವ ಕಾರ್ಯ ಇಲ್ಲಿ ನೆಡೆದಿದೆ ಎಂದು ಅಭಿಪ್ರಾಯ ಪಡುತ್ತಾರೆ.

೨೦೦೩ರಲ್ಲಿ ಬಹುಮಾನ ಪಡೆದ ಬಿ.ಎಂ. ಗಿರಿರಾಜ್ ರವರ 'ಎಲ್ಲೋ ಹುಟ್ಟಿ ಎಲ್ಲೋ ಬೆಳೆದು' ಎಂಬ ಕತೆಯಲ್ಲಿ ನಾಝುರೀನ ಎಂಬ ಮುಸ್ಲಿಂ ಮಹಿಳೆಯನ್ನು ಆಕೆಯ ಮನೆಯವರು ಹಣದಾಸೆಗಾಗಿ ಮುದುಕನಿಗೆ ಮದುವೆ ಮಾಡಿಕೊಟ್ಟಾಗ ಆತ ಆಕೆಯನ್ನು ಅತ್ಯಾಚಾರ ಮಾಡುತ್ತಾನೆ. ನಾಝುರೀನ ಚಿಕ್ಕವಯಸ್ಸಿನ ಹುಡುಗಿಯಾಗಿದ್ದು ಆಕೆ ಆತ ಕೊಡುವ ಹಿಂಸೆಯನ್ನು ತಾಳಲಾರದೆ ಪೊಲೀಸರ ನೆರವನ್ನು ಬೇಡುತ್ತಾಳೆ. ಪೊಲೀಸರ ನೆರವಿನಿಂದ ಹಾಗೂ ಶಿವಸುಂದರಂ ರವರ ನೆರವಿನಿಂದ ತನ್ನ ಬದುಕನ್ನು ಹಸನಾಗಿಸಿಕೊಳ್ಳುತ್ತಾಳೆ. ಈ ಕತೆಯಲ್ಲಿ ಮುಸ್ಲಿಂ ಧರ್ಮದ ಹಾಗು ಆ ಜನಾಂಗದವರ ಕೆಟ್ಟ ಆಚರಣೆ ಮತ್ತು ಜೀವನ ಪದ್ದತಿ ಮೂಡಿಬಂದಿದೆ.

ಈ ಕತೆಯನ್ನು ಕುರಿತು ಮನು ಮತ್ತು ನೇಮಿಚಂದ್ರರವರು ಇಸ್ಲಾಂ ಧರ್ಮದ ಕ್ರೂರ ಮುಖವನ್ನು ನಝುರೀನಾಳ ಬದುಕನ್ನು ಕುರಿತ ಈ ಕತೆ ಧರ್ಮದ ಸಂಕೋಲೆಗಳನ್ನು ಸಡಲಿಸುವ, ದಿಟ್ಟ ಬದುಕನ್ನು ಎತ್ತಿತೋರುವ ರೀತಿಯಲ್ಲಿ ಈ ಕತೆ ಮೂಡಿ ಬಂದಿದೆ. ಈ ಕತೆ ಸ್ತ್ರೀ ಸ್ವಾಭಿಮಾನಿಯಾಗಿ ಎಲ್ಲರಂತೆ ಬದುಕಬಲ್ಲಳು ಅವಳನ್ನು ಬೆಳೆಯಲು ಬಿಡಿ ಎಂಬ ಅಂಶವನ್ನು ಬಿಂಬಿಸುತ್ತದೆ ಎಂದಿದ್ದಾರೆ.

೨೦೦೦ರಲ್ಲಿ ಬಿ.ಎಲ್. ವೇಣುರವರ 'ಸುಡುಗಾಡು ಸಿದ್ದನ ಪ್ರಸಂಗ' ಎಂಬ ಕತೆಯಲ್ಲಿ ಸುಡುಗಾಡು ಸಿದ್ದನಲ್ಲಿ ಅಡಗಿರುವ ಮಾನವೀಯ ಅಂಶಗಳು ಚಿತ್ರಿತವಾಗಿವೆ. ಮನುಷ್ಯನ ಭಾಂದವ್ಯ ಯಾವ ರೀತಿಯಾದದ್ದು ಅದಕ್ಕೆ ಐಶ್ವರ್ಯ ಎನ್ನುವ ಸಂಕೇತಾತ್ಮಕ ವಸ್ತು ಬಾಂದವ್ಯವನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳುತ್ತದೆ. ಎಂಬ ಅಂಶವನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಸಾವು ಎಂಬುದು ಮನುಷ್ಯನಿಗೆ ಬಂದಾಗ ಸತ್ತವನನ್ನು ನಿಂದಿಸುವ ಮತ್ತು ಆತನ ಸಾಧನೆಗೆ

ಸಿಗುವ ಪ್ರತಿಫಲ ಎಂತಹದ್ದು ಎಂಬುದು ಸ್ವಾರಸ್ಯವಾಗಿ ಚಿತ್ರಣಗೊಂಡಿದೆ. ಈ ಕತೆಯನ್ನು ಕುರಿತು ಬರಗೂರು ರಾಮಚಂದ್ರಪ್ಪ ಹಾಗೂ ಬಸವರಾಜು ಕಲ್ಗುಡಿ ಯವರು ಈ ವರ್ಷ ಪ್ರಜಾವಾಣಿ ಕಥಾ ಸ್ಪರ್ಧೆಗೆ ಬಂದ ಕಥೆಗಳಲ್ಲಿ , ಬಹುಪಾಲು ಯಥಾ ಪ್ರಕಾರ, ಜನಪ್ರಿಯ ಸಂಸ್ಕೃತಿಯ ವ್ಯಾಮೋಹದಿಂದ ಬಂದಿತವಾದವುಗಳು, ವರ್ಷವರ್ಷಕ್ಕೂ ಇಂತ ಕಥೆಗಳ ಸರಾಸರಿ ಹೆಚ್ಚುತ್ತಿರುವಂತೆ ತೋರುತ್ತದೆ. ಈ ವರ್ಷದ ಇಂತ ಕಥೆಗಳಲ್ಲಿ , ಮಾಮೂಲಿನ – ಸುಖಜೀವನ ಹಣ ವ್ಯಾಮೋಹ, ಗಾಸಿಪ್ಪುಗಳು ಇವುಗಳ ವಸ್ತು ಮುಖ್ಯವಾಗಿರುವುದಷ್ಟೇ ಅಲ್ಲದೆ, ಕೊಂಚ ದೈವಭಕ್ತಿ ಹಾಗೂ ಅಮೇರಿಕ ಇವೂ ಈ ಬಾರಿ ಹೊಸದಾಗಿ ಶಾಮೀಲಾಗಿವೆ. ಇಂತ ಕಥೇಗಳನ್ನು ಬದಿಗಿಕ್ಕಿ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾಳಜಿಗಳುಳ್ಳ ಕಥೆಗಳನ್ನು ಹೆಕ್ಕಿ ತೆಗೆಯಲು ಹೊರಟರೆ ಈ ವರ್ಷ ತೃಪ್ತಿಕೊಡುವ ಕಥೆಗಳು ಇಲ್ಲವೆಂದು ತೀವ್ರವಾಗಿ ನಮಗೆ ಅನ್ನಿಸಿದೆ. ಇಂತ ಅನ್ನಿಸಿಕೆಗೆ ಹಲವಾರು ಕಾರಣಗಳಿವೆ. ಕೆಲವನ್ನು ಇಲ್ಲಿ ವಿವರಿಸಿದ್ದೇವೆ.

ಆಧುನಿಕ ಸಾಹಿತ್ಯ ರಚನೆಯಲ್ಲಿ ಕಥೆಯು ಒಂದು ವಿಶಿಷ್ಟ ಪ್ರಕಾರ, ಸ್ಥಳ ಮತ್ತು ಕಾಲ ಇಲ್ಲಿ ಒಂದು ವಿಶಿಷ್ಠ ಚೌಕಟ್ಟಿಗೆ ಒಳಪಟ್ಟಿರುತ್ತವೆ. ಇದೇ ಅದರ ಮುಖ್ಯ ಲಕ್ಷಣವೂ ಹೌದು, ಕಥೆಯ ಹಂದರದಿಂದ ಹಿಡಿದು. ಪಾತ್ರಗಳ, ಮಾನಸಿಕ ಹಾಗೂ ಕ್ರಿಯಾತ್ಮಕ ನಡಾವಳಿಗಳನ್ನು ರೂಪಿಸುವ ಹಾಗು ವಿಶಿಷ್ಟ ದರ್ಶನವನ್ನು ಒದಗಿಸುವ – ಈ ಎಲ್ಲ ಅಂಶಗಳನ್ನು ಸೂಕ್ಷ್ಮ ಕಲೆಗಾರಿಕೆಯಂತೆ ಇಲ್ಲಿ ಅಳವಡಿಸಬೇಕಾಗುತ್ತದೆ. ಇಂತ ಸನ್ನಿವೇಶದಲ್ಲಿ ಕಥಾವಸ್ತು ಹಾಗೂ ಪಾತ್ರ ರಚನೆಯಲ್ಲಿ ಭಾಷೆಯ ಸೂಕ್ಷ್ಮ ಬಳಕೆ ಅನಿವಾರ್ಯವಾಗುತ್ತದೆ. ಈ ವರ್ಷದ ಬಹುಪಾಲು ಕತೆಗಳು, ಕಥಾ ಪ್ರಕಾರ ಈ ವೈಶಿಷ್ಟ್ಯವನ್ನು ಮನಗಂಡಂತಿಲ್ಲ. ಒಂದು ಘಟನೆಯನ್ನು ಅನವಶ್ಯಕವಾಗಿ ದೀರ್ಘವಾಗಿ ಲಂಬಿಸಿ ವರ್ಣಿಸುವುದು. ವಿವರಿಸುವುದು ಕಥಾ ಬರವಣಿಗೆಯ ಮುಖ್ಯ ವಿಧಾನವಾಗಿ ಇವುಗಳಲ್ಲಿ ರೂಪುಗೊಂಡಿದೆ. ಹೀಗಾಗಿ ಕತೆಗಳಿಗೆ ಒಂದು ಸಾಂದ್ರತೆಯು ಅಭ್ಯವಾಗಿಲ್ಲ. ಭಾಷೆಯೂ ಪರಿಣಾಮಕಾರಿಯಾಗಿ ಬಳಕೆಯಾಗಿಲ್ಲ. ಕಾದಂಬರಿಗಳಿಗೆ ಬಹುಶಃ ಸಹಜವಾಗಬಹುದಾದ ಈ ತಂತ್ರ ವಿನ್ಯಾಸವನ್ನು ಅನೇಕ ಕಥೆಗಳು ಬಳಸಿರುವುದರಿಂದ ಇವು ಕಾದಂಬರಿಯೊಂದರ ಅಧ್ಯಾಯಾಯದಂತೆ ತೋರುತ್ತದೆ.

ಈ ವರ್ಷದ ಇಲ್ಲಿನ ಅನೇಕ ಕಥೆಗಳು, ನಿರ್ಲಕ್ಷಿತ ಸಾಮಾಜಿಕ ಅನುಭವ ಲೋಕದ ವಿವರಣೆಯಲ್ಲಿ ಹೆಚ್ಚು ಕುತೂಹಲವನ್ನು ತೋರಿವೆ. ದಲಿತ– ಬಂಡಾಯ ಸಾಹಿತ್ಯ ಚಳುವಳಿ ಇಂಥ ಅನುಭವ ಲೋಕದೊಳಗೆ ಸಾಗುವ ಪ್ರೇರಕ ಧೋರಣೆಯನ್ನು ಎಂಬತ್ತರ ದಶಕದಲ್ಲಿ ತೋರಿಸಿತು. ಲೋಕ ಗ್ರಹಿಕೆಯಲ್ಲಿ ಹೊಸ ವಿನ್ಯಾಸವನ್ನು ಸಾಹಿತ್ಯ ಪ್ರಕಾರಗಳು ಮೂಡಿಸಿದವು.

ಕೆಲವು ಬರಹಗಾರರಲ್ಲಿ ಈ ಹೊಸ ಅನುಭವ ಲೋಕವು ಕೇವಲ ಎತ್ನಿಕ್ ದಾಖಲೆಯ ವಿವರವೆಂಬಂತೆ ರೂಪುಗೊಂಡಿರುವ ಅಪಾಯವೂ ಇದೆ.

ಅಲ್ಲಿಯ ವಿವರಗಳು ಪ್ರಾಮಾಣಿಕವಾಗಬೇಕೆಂಬ ಕಾರಣದಿಂದಲೋ ಏನೋ ಭಾಷೆಯ ಬಳಕೆಯನ್ನು ಉಪ ಭಾಷಿಕ ವೈಲಕ್ಷ್ಯಣ್ಯಗಳನ್ನು ಕಥೆಯ ನಿರೂಪಣೆಯಲ್ಲೂ ಕಥಾ ವರ್ಣನೆಗಳಲ್ಲೂ ಅತಿರೇಕವಾಗಿ ಬಳಸಿರುವುದುಮಟು. ವಾಸ್ತವನಾಗಿ ಈ ಅತಿರೇಕತೆಯು ಬರಹಗಾರನ ಸೃಜನಶೀಲತೆಯ ಸಂವೇದನೆಗೆ ಅಡ್ಡಿಯಾಗುವ ಸಾಧ್ಯತೆಯೇ ಹೆಚ್ಚು. ಈ ವರ್ಷದ ಇಲ್ಲಿನ ಅನೇಕ ಕಥೆಯ ಭಾಷೆಯ ಬಳಕೆಯಲ್ಲಿ ಇಂತ ಅತಿರೇಕತೆಗೆ ಒಳಗಾಗಿವೆ.

'ಸುಡುಗಾಡು ಸಿದ್ಧನ ಪ್ರಸಂಗ' ಕತೆಯಲ್ಲಿ ಅನೇಕ ದೀರ್ಘ ವಿವರಣಾತ್ಮಕ ಬರವಣಿಗೆಯಿಂದ ಕಥೆಯ ಬಿಗಿ ಬಂಧವನ್ನು ಕಳೆದುಕೊಂಡಿದೆ ಎನ್ನುತ್ತಾರೆ. ಈ ಕತೆಯಲ್ಲಿ ಮನುಷ್ಯ ಸಂಬಂಧವನ್ನು ಕುರಿತಂತೆ ಸಂಪತ್ತು ಹಾಗೂ ಸ್ವಾರ್ಥ ಇವುಗಳು ಉಂಟುಮಾಡುವ ಪರಿಣಾಮವನ್ನು ಕೆಲವು ಕುತೂಹಲ ಘಟನೆಗಳ ಮೂಲಕ ಚಿತ್ರಿಸಲು ಯತ್ನಿಸದೆ ಎನ್ನುತ್ತಾರೆ. ಈ ಕಾರಣಕ್ಕಾಗಿ ಓದುಗರ ಆಸಕ್ತಿಯನ್ನು ಕೊನೆಯವರೆವಿಗೂ ಉಳಿಸಿಕೊಳ್ಳುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ದೀಪಾವಳಿ ವಿಶೇಷಾಂಕದ ಕತೆಗಳು ಆಧುನಿಕ ದೋರಣಾ ವಿಧಾನಗಳನ್ನೊಳಗೊಂಡು ರಚನೆಯಾಗಿರುವುದನ್ನು ಕಾಣಬಹುದು. ಹಲವು ಕತೆಗಳು ತಮ್ಮ ಪ್ರಾದೇಶಿಕ ಭಾಷೆಗಳಿಂದ ಕೂಡಿದ್ದು, ತಮ್ಮ ಸಂಸ್ಕೃತಿಯನ್ನು ತಮ್ಮದೇ ಆದಂತಹ ರೀತಿಯಲ್ಲಿ ಅಭಿವ್ಯಕ್ತ ಪಡಿಸುತ್ತವೆ. ಕತೆಯ ತಂತ್ರಗಾರಿಕೆಯು ಆಧುನಿಕ ಬರಹಗಾರದಲ್ಲಿ ವಿಶಿಷ್ಟವಾಗಿ ಮೂಡಿ ಬಂದಿರುವುದನ್ನು ಕಾಣಬಹುದು. ಕತೆಗಳಿಗೆ ಹಲವು ಪ್ರಸಂಗಗಳನ್ನು ಸೇರಿಸಿಕೊಂಡು ಎಲ್ಲಾ ಪ್ರಸಂಗಗಳೂ ಒಂದೇ ನೆಲೆಯಲ್ಲಿ ನಿಂತು ಮುಂದುವರೆಯುವಂತ ರೀತಿಯಲ್ಲಿ ಕತೆಗಳು ರೂಪುಗೊಂಡಿವೆ. ಸಮಕಾಲೀನ ಸಮಾಜಕ್ಕೆ ಹಾಗೂ ಸಮಕಾಲೀನ ಸಾಹಿತ್ಯದ ದೋರಣೆಗಳಿಗೆ ಹತ್ತಿರವಾದ ವಸ್ತು ವೈಚಿತ್ರವನ್ನು ಕತೆಗಳು ತಮ್ಮಲ್ಲಿ ಅರಗಿಸಿಕೊಂಡಿವೆ.

ತೀರ್ಪುಗಾರರು ಇಲ್ಲಿನ ಕತೆಗಳಲ್ಲಿ ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇತ್ತೀಚಿನ ಸಣ್ಣಕತೆಗಳು ಹಿಂದಿನ ಕತೆಗಳಷ್ಟು ಸತ್ವಯುತವಾಗಿಲ್ಲ. ನಿರೂಪಣಾ ವಿಧಾನವನ್ನು ಸರಿಯಾಗಿ ರೂಢಿಸಿ ಕೊಂಡಿಲ್ಲ, ಜನಪ್ರಿಯ ಸಂಸ್ಕೃತಿಯ ವ್ಯಾಮೋಹದಿಂದ ಬಂದಿತವಾದವುಗಳು ಎಂದು ಹೇಳುತ್ತಾರೆ. ಸ್ಥಳ ಮತ್ತು ಕಾಲ ಇಲ್ಲಿ ಒಂದು ವಿಶಿಷ್ಟ ಚಾಕಟ್ಟಿಗೆ ಒಳಪಟ್ಟಿರುತ್ತದೆ. ಇಲ್ಲಿನ ಹಲವು ಕತೆ, ಕಾದಂಬರಿ ಮತ್ತು ಸಣ್ಣ ಕತೆಗಳ ನಡುವೆ ಇರಬೇಕಾದ ಅಂತರವನ್ನು ಕಾಣಲಾರದೆ ಕಾಪಾಡಿಕೊಳ್ಳಲಾರದೆ ತೊಳಲುತ್ತವೆ. ಘಟನೆಗಳನ್ನು ಓಗ್ಗಿಸುವ –

ಕುಗ್ಗಿಸುವ, ಪಾತ್ರಗಳನ್ನು ಶಿಥಿಲಗೊಳಿಸುವ, ವರದಿಗಳಿಗೆ ಮೊರೆ ಹೋಗುವ ಉಪಾಯಗಳನ್ನು ಮಾಡಿದರೂ ಅವು ವಿಫಲವಾಗುತ್ತವೆ. ಇಡೀ ಜೀವನದ ವ್ಯಾಪಕತೆಯನ್ನು ಒಂದು ಕಥೆಯ ಒಡಲೊಳಗೆ ಹಿಡಿಯಬಯಸುವವನು ಅದಕ್ಕೆ ಅಗತ್ಯವಾದ ತಾಂತ್ರಿಕ ಪರಿಕರ ಮತ್ತು ಪರಿಣತಿಗಳನ್ನು ರೂಢಿಸಿಕೊಳ್ಳಬೇಕು. ಕಥಾ ಸಾಹಿತ್ಯದಲ್ಲಿ ಸುದೀರ್ಘ ಪರಂಪರೆಯುಳ್ಳ ಮಹಿಳೆಯರು ಹಲವು ದಶಕಗಳಲ್ಲಿ ಈ ಸ್ಪರ್ಧೆಯಲ್ಲಿ ಸತ್ವಯುತ ಕಥೆಗಳನ್ನು ನೀಡುವಲ್ಲಿ ಏಕೆ ವಿಫಲರಾಗುತ್ತಿದ್ದಾರೆ ಎಂಬುದು ಅಚ್ಚರಿಯ ಅಂಶ ಎಂದು ಹೇಳುತ್ತಾರೆ.

ಕಥಾ ಸ್ಪರ್ಧೆಯಲ್ಲಿ ಪರಿಣಿತಿ ಪಡೆದವರೂ ಭಾಗವಹಿಸಲು ಇಚ್ಚಿಸುವುದು ಸಹಜ ಹಾಗಾಗಿ ಒಂದು ಮಟ್ಟದಲ್ಲಿ ವ್ಯತ್ಯಾಸ ಕಂಡು ಬರಬಹುದು. ಆದರೆ ಕಥೆ ಹೇಳುವವನ ಶಕ್ತಿ ಸಾಮರ್ಥ್ಯಗಳು, ಭಾಷೆಯನ್ನು ದುಡಿಸಿಕೊಳ್ಳುವ ರೀತಿ, ಪಾತ್ರ ರಚನೆ, ಕತೆಯಲ್ಲಿರುವ ಅಂತಃ ಸತ್ವ ಈ ವ್ಯತ್ಯಾಸವನ್ನು ಅಳಿಸಿ ಬಿಡುತ್ತದೆ. ಹಾಗಾಗಿ ಮೊದಲ ಬಾರಿ ಬರೆಯುವವನೂ ಅದ್ಭುತ ಕಥೆಯ ಸೃಷ್ಟಿಕರ್ತನಾಗಬಲ್ಲ. ಕನ್ನಡ ಸಣ್ಣಕತೆ ಇಂದು ಕತೆಯ ವ್ಯಾಪ್ತಿಯನ್ನು ಮೀರಿ ಹೆಚ್ಚಿನ ವಿಸ್ತಾರವನ್ನು ಗಳಿಸಿಕೊಳ್ಳುತ್ತ ಬದುಕಿನ ನಿಗೂಢತೆಯನ್ನು ಹಿಡಿದುಕೊಡುತ್ತ ಅತ್ಯಂತ ಜೀವಂತವಾದ ಸಾಹಿತ್ಯ ಪ್ರಕಾರವಾಗಿ ಹೊರಮೊಮ್ಮಿದೆ ಎನ್ನುತ್ತಾರೆ. ಗ್ರಾಮೀಣ ಬದುಕಿನಲ್ಲಿನ ವರ್ಗ ಶೋಷಣೆಗಳ ಬಗೆಗಿನ ಆಕರ್ಷಣೆ ಎದ್ದು ಕಾಣುತ್ತವೆ. ನವುರಾದ ಮನುಷ್ಯ ಸಂಬಂಧಗಳು ಕುಟುಂಬದ ಸೀಮಿತ ಪರಿಸರದಲ್ಲಿಯೇ ಕಾಣಬರುವ ಬಿರುಕುಗಳು, ಸಂಘರ್ಷಗಳ ಸೂಕ್ಷ್ಮತೆ ಹೊಸ ಬರಹಗಾರರ ಗಮನ ಸೆಳೆಯುತ್ತಿಲ್ಲ. ಬಹುಶಃ ಅಂತಹ ವಸ್ತುಗಳ ನಿರ್ವಹಣೆ, ಕಷ್ಟ ಸಾಧ್ಯವೆನ್ನಿಸುತ್ತಿರಬಹುದೆ, ಟಿ.ವಿ. ಸಂಸ್ಕೃತಿಯ ಹೊಸ ಉತ್ಪ್ರೇಕ್ಷಿತ ವಾತಾವರಣದಲ್ಲಿ ಎನ್ನಿಸುತ್ತದೆ. ಎಂದು ತೀರ್ಪುಗಾರರು ವಿಶೇಷಾಂಕದಲ್ಲಿ ಬಹುಮಾನವಾಗಿ ಆಯ್ಕೆಯಾದಂತಹ ಕತೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.

ಕೊನೆ ಟಿಪ್ಪಣಿ

ತೀರ್ಪುಗಾರರ ಹೇಳಿಕೆಗಳು

೧. ೧೯೯೫ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಪ್ರೊ. ಸುಮತೀಂದ್ರ ನಾಡಿಗ್ ಮತ್ತು ಪ್ರೋ. ಎಂ. ಹೆಚ್. ಕೃಷ್ಣಯ್ಯ. (ಪು.ಸಂ. ೪೭)

೨. ೨೦೦೨ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಪ್ರೊ. ಸುಧಾಕರ್ ಮತ್ತು ಡಾ. ರಾಜೇಂದ್ರ ಚೆನ್ನಿ. (ಪು.ಸಂ. ೪೯, ೫೬)

೩. ೨೦೦೫ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಡಾ. ಕೆ.ವಿ. ನಾರಾಯಣ ಹಾಗೂ ರಾಘವೇಂದ್ರ ಪಾಟೀಲರು. (ಪು.ಸಂ. ೫೧, ೫೩, ೬೦)

೪. ೨೦೦೪ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಕುಂ. ವೀರಭದ್ರಪ್ಪ ಹಾಗೂ ಎ.ಎಸ್. ಪ್ರಸನ್ನ. (ಪು.ಸಂ. ೫೩, ೬೨,)

೫. ೨೦೦೬ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಸಿ.ಎನ್. ರಾಮಚಂದ್ರನ್ ಮತ್ತು ಚಿ. ಶ್ರೀನಿವಾಸರಾಜು. (ಪು.ಸಂ. ೫೪,)

೬. ೨೦೦೮ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಬರಗೂರು ರಾಮಚಂದ್ರಪ್ಪ ಹಾಗೂ ಎಚ್. ಎಸ್. ರಾಘವೇಂದ್ರ ರಾವ್. (ಪು.ಸಂ. ೫೫,)

೭. ೨೦೦೭ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಎಂ. ಎಚ್. ಕೃಷ್ಣಯ್ಯ ಹಾಗೂ ಬಸವರಾಜ ಕಲ್ಗುಡಿ (ಪು.ಸಂ. ೫೬,)

೮. ೨೦೦೩ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಮನು ಮತ್ತು ನೇಮಿಚಂದ್ರ.(ಪು. ಸಂ. ೫೬, ೫೭ ೬೧, ೬೨,)

೯. ೨೦೦೧ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ರಾಮದಾಸ ಮತ್ತು ಡಾ. ವಿಜಯಾ ಸುಬ್ಬರಾವ್. (ಪು.ಸಂ. ೫೮,)

೧೦. ೧೯೯೭ ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಟಿ.ಜಿ. ರಾಘವ ಮತ್ತು ಚಿ. ಶ್ರೀನಿವಾಸ. (ಪು.ಸಂ. ೫೮,)

೧೧. ೧೯೯೬ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಕೆ.ಎಸ್. ನಿಸಾರ್ ಅಹಮದ್ ಮತ್ತು ಅ.ರಾ. ಮಿತ್ರ. (ಪು.ಸಂ. ೬೦)

೧೨. ೨೦೦೦ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ತೀರ್ಪುಗಾರರು :- ಬರಗೂರು ರಾಮಚಂದ್ರಪ್ಪ ಹಾಗೂ ಬಸವರಾಜ ಕಲ್ಗುಡಿ. (ಪು.ಸಂ. ೬೩,)

ಅಧ್ಯಾಯ– ೬

ಸಮಾರೋಪ

ಕನ್ನಡ ಸಣ್ಣಕತೆ ಇಂದು ಕತೆಯ ವ್ಯಾಪ್ತಿಯನ್ನು ಮೀರಿ ಹೆಚ್ಚಿನ ವಿಸ್ತಾರವನ್ನು ಗಳಿಸಿಕೊಳ್ಳುತ್ತ ಬದುಕಿನ ನಿಗೂಢತೆಯನ್ನು ಹಿಡಿದುಕೊಡುತ್ತಾ ಅತ್ಯಂತ ಜೀವಂತವಾದ ಸಾಹಿತ್ಯ ಪ್ರಕಾರವಾಗಿ ಹೊರಹೊಮ್ಮಿದೆ. ಸಣ್ಣ ಕಥಾ ಸಾಹಿತ್ಯ, ದಲಿತ ಬಂಡಾಯ ಕಾಲಘಟ್ಟದಲ್ಲಿ ತನ್ನ ವ್ಯಾಪ್ತಿಯನ್ನು ಹೆಚ್ಚಾಗಿ ವಿಸ್ತರಿಸಿಕೊಂಡು ಬೆಳೆಯುತ್ತಿರುವುದನ್ನು ನಾವು ಕಾಣಬಹುದು. ಇಂದು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಮನುಷ್ಯ ದೀರ್ಘವಾಗಿ ಕುಳಿತು, ಓದಲು ಸಾಧ್ಯವಿಲ್ಲದಿರುವುದರಿಂದ ಇಂದು ಸಣ್ಣ ಕತೆ ಓದುಗರ ಮನಸೆಳೆದಿದೆ. ಸಣ್ಣ ಕತೆಯು ಓದುಗರಲ್ಲಿ ಅರಿವನ್ನು ಮೂಡಿಸುವ ಹಾಗೂ ಸಮಾಜದಲ್ಲಿರುವ ಹಳೆಯ ನೀರನ್ನು ತೆಗೆದು ಹೊಸ ನೀರನ್ನು ತುಂಬುವಂತಹ ಕೆಲಸವನ್ನು ಮಾಡುತ್ತಿದೆ. ಸಣ್ಣಕತೆಗಳು ಪ್ರಸ್ತುತ ಸಮಾಜದಲ್ಲಿ ನಾವು ದಿನನಿತ್ಯ ಕಾಣುವಂತಹ ಪ್ರಸಂಗಗಳನ್ನೇ ಕಣ್ಣಿಗೆ ಕಟ್ಟುವಂತೆ ಸ್ವಾರಸ್ಯವಾಗಿ ಚಿತ್ರಿಸುತ್ತವೆ. ಇತ್ತೀಚಿನ ಕತೆಗಳು ಮನುಷ್ಯರಲ್ಲಿ ಅರಿವನ್ನು ಮೂಡಿಸುವ, ತಮಗಾಗುವ ಶೋಷಣೆಯ ವಿರುದ್ಧ ಹೋರಾಡುವ, ದರ್ಪಿಷ್ಟ ಸಮಾಜವನ್ನು ಎದುರಿಸಿ ನಿಲ್ಲುವ ಮನೋದೋರಣೆಗಳನ್ನು ಹೊಂದಿವೆ. ಅದೇ ರೀತಿಯಾಗಿ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಬಹುಮಾನಿತ ಆಯ್ದ ಕತೆಗಳು ಸಹ ಇಂತಹ ಅಂಶಗಳನ್ನೆ ಪ್ರತಿಬಿಂಬಿಸುತ್ತವೆ.

ದೀಪಾವಳಿ ವಿಶೇಷಾಂಕದ ಕತೆಗಳಲ್ಲಿ ಕಂಡು ಬರುವ ಫಲಿತಗಳನ್ನು ಈ ಕೆಳಗಿನಂತೆ ಕಾಣಬಹುದು.

- ಈ ಕತೆಗಳು ಸಮಕಾಲೀನ ಸಮಾಜವನ್ನು, ಇಲ್ಲಿನ ಜನರ ಸಾಂಸ್ಕೃತಿ ಆಚರಣಾ ವಿಧಾನಗಳನ್ನು ತಿಳಿಸಿಕೊಡುತ್ತವೆ.
- ಪ್ರಾದೇಶಿಕವಾಗಿ ಗ್ರಾಮೀಣ ಜನರ ಭಾಷೆ, ಪ್ರಾದೇಶಿಕ ವ್ಯತ್ಯಾಸಯುಕ್ತ ಅಂಶಗಳನ್ನು ತಮ್ಮ ಕತೆಗಳಲ್ಲಿ ಸ್ವಾರಸ್ಯವಾಗಿ ಚಿತ್ರಿಸಿವೆ.
- ಇಂದಿನ ರಾಜಕೀಯ ಪರಿಸ್ಥಿತಿ, ಇದರಲ್ಲಿರುವ ಹುಳುಕು, ದುರಾಡಳಿತಗಳು, ಮುನ್ನಡೆಯುತ್ತಿರುವ ದಾರಿಯ ಬಗ್ಗೆ ಸ್ಪಷ್ಟೀಕರಿಸುತ್ತವೆ.
- ಮನುಷ್ಯನ ಮಾನಸಿಕ ಸಂಘರ್ಷಗಳು, ಕ್ರೌರ್ಯ ಹಾಗೂ ವಿನಾಶಕಾರಿ ಮನಸ್ಥಿತಿ ಕತೆಗಳಲ್ಲಿ ಚಿಂತಿತ ಅಂಶವಾಗಿದೆ.

❖ ಜಾನಪದ ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿಗಳ ಮುಖಾಮುಖಿಯಲ್ಲಿ ಜಾನಪದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕಾರ್ಯ ಈ ಕತೆಗಳಲ್ಲಿ ನಡೆದಿದೆ.

❖ ಈ ಕತೆಗಳಲ್ಲಿ ಸ್ತ್ರೀ ಪುರುಷನನ್ನು ವಿರೋಧಿಸಿ ದಿಟ್ಟತನದಿಂದ ತಾನು ಪುರುಷನಿ ಗಿಂತಲೂ ಕಡಿಮೆಯಲ್ಲಾ ಎಂಬ ರೀತಿಯಲ್ಲಿ ಜೀವನ ಸಾಗಿಸುವುದನ್ನು ನೋಡ ಬಹುದು.

❖ ಈ ಕತೆಗಳಲ್ಲಿ ಪುರುಷ ಸ್ತ್ರೀ ಶೋಷಣೆಯ ಮತ್ತೊಂದು ಮುಖವಾಗಿ ಕಾಣಿಸಿ ಕೊಳ್ಳುತ್ತಾನೆ. ಮಹಿಳೆಯನ್ನು ಹೆಜ್ಜೆ ಹೆಜ್ಜೆಗೂ ಅಪಮಾನ ಮತ್ತು ಮಾನಸಿಕ ಹಿಂಸೆಗೆ ದೂಡುವ ಚಿತ್ರಣವನ್ನು ಇಲ್ಲಿ ಕಾಣಬಹುದು.

❖ ಇಂದಿನ ಬ್ರಾಹ್ಮಣ ಜನಾಂಗದ ಸ್ಥಿತಿಗತಿ ಹಾಗೂ ಅವರು ಇಂದು ದಲಿತ ಜನಾಂಗ ದವರಂತೆ ಬಡತನದ ಬೇಗೆಯಲ್ಲಿ ಸೊರಗುತ್ತಿರುವುದನ್ನು ಕಾಣಬಹುದು.

❖ ಮಾನವ ಇಂದು ಪರಿಸರವನ್ನು ನಾಶಮಾಡಿ ನಮ್ಮ ಸುತ್ತಲಿನ ಗಿಡಮರಗಳನ್ನು ಹೇಗೆ ಕುತಂತ್ರ -ಗಳಿಂದ ನಾಶಮಾಡುತ್ತಿದ್ದಾನೆ ಎಂಬುದನ್ನು ತಿಳಿಯಬಹುದು.

❖ ಶತಶತಮಾನಗಳಿಂದ ಮೂಲೆ ಗುಂಪಾಗಿದ್ದ ಸ್ತ್ರೀ ಇಂದು ತನ್ನ ಭಾವನೆಗಳನ್ನು ನಿರ್ಭಯವಾಗಿ ಕತೆಗಳಲ್ಲಿ ವಿವರಿಸುತ್ತಿರುವುದನ್ನು ಗಮನಿಸಬಹುದು.

❖ ಮಾನವ ತನ್ನ ಸುತ್ತಲಿನ ಬಂದು ಬಾಂಧವರೊಂದಿಗೆ ಯಾವ ರೀತಿ ಅಭಿವ್ಯಕ್ತಿಸುತ್ತಿದ್ದಾನೆ. ಆತ ಯಾವ ರೀತಿ ಒಳ್ಳೆಯ ಭಾಂದವ್ಯವನ್ನು ಹೊಂದಬೇಕು ಎಂಬುದನ್ನು ತೋರಿಸಿಕೊಡುತ್ತದೆ.

❖ ಈ ಕತೆಗಳು ಸ್ತ್ರೀಪ್ರಜ್ಞೆ, ಮುಸ್ಲಿಂ ಸಂವೇದನೆ, ದಲಿತಸಂವೇದನೆಯ ಪರವಾಗಿ ಚಿತ್ರಣಗೊಂಡಿವೆ.

ಈ ರೀತಿಯಾಗಿ ದೀಪಾವಳಿ ವಿಶೇಷಾಂಕದ ಕತೆಗಳು ಸಮಾಜದ ಡೊಂಕನ್ನು ತಮ್ಮ ಕತೆಗಳಲ್ಲಿ ಚಿತ್ರಿಸುತ್ತಾ ಓದುಗರಲ್ಲಿ ಅರಿವನ್ನು ಮೂಡಿಸುತ್ತಿವೆ. ಅನೇಕ ಕತೆಗಾರರಿಗೆ ಪ್ರಜಾವಾಣಿ ಪತ್ರಿಕೆ ಕಥಾ ಸ್ಪರ್ಧೆಯ ಮೂಲಕ ರಂಗಪ್ರವೇಶ ದೊರಕಿಸಿಕೊಟ್ಟಿದೆ. ಮುಂದೆ ಬರುವ ಕತೆಗಾರಿಗೆ ವಸ್ತು ಮತ್ತು ತಂತ್ರಗಳನ್ನು ಹೊಸದಾಗಿ ರೂಪಿಸಿ ಸಾಹಿತ್ಯದ ನವೀಕರಣಕ್ಕೆ ಕಾರಣವಾಗುತ್ತಿವೆ. ಸಾಹಿತ್ಯ ನಿಂತ ನೀರಾಗಿರದೆ ಚಲನಶೀಲವಾದದ್ದು ಎಂಬುದನ್ನು ತಿಳಿಸಿ ಹೇಳುತ್ತವೆ. ಸ್ತ್ರೀ ಸಂವೇದನೆ ದಲಿತ ಸಂವೇದನೆ, ಮುಸ್ಲಿಂ ಸಂವೇದನೆಗಳನ್ನು ತಮ್ಮ ಕತೆಗಳಲ್ಲಿ ಸ್ವಾರಸ್ಯವಾಗಿ ಚಿತ್ರಿಸಿವೆ. ಮಹಿಳಾ ಲೇಖಕರಿಗೆ ಉತ್ತಮ ಸ್ಪೂರ್ತಿಯನ್ನು ಹೊಸ ಹೊಸ ಚಿಂತನಾ ಕ್ರಮಗಳನ್ನು ರೂಪಿಕೊಡುತ್ತವೆ .ಈ ರೀತಿ ಈ ಕತೆಗಳು ಉತ್ತಮ ಆಲೋಚನಾ ಕ್ರಮಗಳನ್ನು ಹೊಸ ಹೊಸ ದೋರಣೆಗಳನ್ನು ಕಟ್ಟಿಕೊಡುತ್ತವೆ.

ಅಧ್ಯಾಯ-೭

ಆಕರಗ್ರಂಥಗಳು

ಪ್ರಧಾನ ಆಕರಗಳು

೧. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೧೯೯೫; ಪ್ರಜಾವಾಣಿ;ಬೆಂಗಳೂರು.

೨. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೧೯೯೬; ಪ್ರಜಾವಾಣಿ;ಬೆಂಗಳೂರು.

೩. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೧೯೯೭; ಪ್ರಜಾವಾಣಿ;ಬೆಂಗಳೂರು.

೪. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೧೯೯೮; ಪ್ರಜಾವಾಣಿ;ಬೆಂಗಳೂರು.

೫. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೧೯೯೯; ಪ್ರಜಾವಾಣಿ;ಬೆಂಗಳೂರು.

೬. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೦; ಪ್ರಜಾವಾಣಿ;ಬೆಂಗಳೂರು.

೭. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೧; ಪ್ರಜಾವಾಣಿ;ಬೆಂಗಳೂರು.

೮. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೨; ಪ್ರಜಾವಾಣಿ;ಬೆಂಗಳೂರು.

೯. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೩; ಪ್ರಜಾವಾಣಿ;ಬೆಂಗಳೂರು.

೧೦. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೪; ಪ್ರಜಾವಾಣಿ;ಬೆಂಗಳೂರು.

೧೧. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೫; ಪ್ರಜಾವಾಣಿ;ಬೆಂಗಳೂರು.

೧೨. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೬ ಪ್ರಜಾವಾಣಿ;ಬೆಂಗಳೂರು.

೧೩. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೭; ಪ್ರಜಾವಾಣಿ;ಬೆಂಗಳೂರು.

೧೪. ಪ್ರಜಾವಾಣಿ ದೀಪಾವಳಿ ವಿಶೇಷಾಂಕ; ೨೦೦೮; ಪ್ರಜಾವಾಣಿ;ಬೆಂಗಳೂರು.

ಅನುಕ್ಷಂಗಿಕ ಆಕರಗಳು

ಕರೀಗೌಡ ಬೀಚನಹಳ್ಳಿ ; ೨೦೦೩; ಶತಮಾನದ ಸಣ್ಣಕತೆಗಳ ಸಮೀಕ್ಷೆ; ಕರ್ನಾಟಕ ಸಾಹಿತ್ಯ ಅಕಾಡೆಮಿ ; ಬೆಂಗಳೂರು.

ಕೋದಂಡರಾಮ ಎನ್.ಕೆ. ; ೧೯೯೬ ; ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ ; ಗಾಯಿತ್ರಿ ಸ್ಮಾರಕ ಗ್ರಂಥಮಾಲೆ; ಮೈಸೂರು.

ಕೀರ್ತಿನಾಥ ಕುರ್ತಕೋಟಿ ; ೨೦೦೨ ; ಯುಗಧರ್ಮ ಹಾಗೂ ಸಾಹಿತ್ಯ ದರ್ಶನ; ಮನೋಹರ ಗ್ರಂಥಮಾಲೆ; ಧಾರವಾಡ

ಕೀರ್ತಿನಾಥ ಕುರ್ತಕೋಟಿ; ೨೦೦೮ ; ಕನ್ನಡ ಸಾಹಿತ್ಯ ಸಂಗಾತಿ ' ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ; ಧಾರವಾಡ

ಗವಿಸಿದ್ಧಪ್ಪ ಹೆಚ್. ಪಾಟೀಲ ; ೨೦೦೫; ಸಾಹಿತ್ಯ ಸಂಕಥನ

ಗಿರಿಶಾಸ್ತ್ರೀಯ : ೨೦೦೦; ಆಧುನಿಕ ಸಣ್ಣ ಕತೆಗಳು ಒಂದು ಅಧ್ಯಯನ ; ಕನ್ನಡ ವಿಶ್ವವಿದ್ಯಾಲಯ; ಹಂಪಿ

ದಿವಾಕರ್ ಎಸ್. (ಸಂ) ; ೧೯೯೭, ಶತಮಾನದ ಸಣ್ಣ ಕತೆಗಳು ; ಪ್ರಿಸಂ. ಬುಕ್ಸ್ ಪ್ರೈ.ಲಿ.,

ನಾಯಕ್ ಜಿ.ಹೆಚ್. (ಸಂ) ; ೨೦೦೦ ; ಶತಮಾನದ ಕನ್ನಡ ಸಾಹಿತ್ಯ

ಬರಗೂರು ರಾಮಚಂದ್ರಪ್ಪ (ಸಂ) ; ೧೯೯೨ ; ಕನ್ನಡ ಸಾಹಿತ್ಯ ಸಮೀಕ್ಷೆ ; ಕರ್ನಾಟಕ ಸಾಹಿತ್ಯ ಅಕಾಡೆಮಿ ; ಬೆಂಗಳೂರು.

ಮಲ್ಲಿಕಾಘಟ್ಟಿ ; ೧೯೯೪ ; ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ ; ಯುವಲೋಕ ಪ್ರಕಾಶನ ; ಧಾರವಾಡ.

ಮೀರಾ ಎಲ್.ಜಿ. ೨೦೦೪ ; ಸ್ತ್ರೀ ಸಂಯೋಜನೆಯಲ್ಲಿ ಕನ್ನಡ ಕಥನ ; ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ; ಬೆಂಗಳೂರು.

ಶಾಮರಾಯ ತ.ಸು. ; ಕನ್ನಡ ಸಾಹಿತ್ಯ ಚರಿತ್ರೆ, ಒಂದು ಸಮೀಕ್ಷೆ ; ತ.ವೆಂ.ಸ್ಮಾರಕ ಗ್ರಂಥಮಲೆ ; ಮೈಸೂರು.

ಶೇಷಾಗಿರಿರಾವ್ ಎಲ್.ಎಸ್. ; ೧೯೯೯ ; ಹೊಸಗನ್ನಡ ಸಾಹಿತ್ಯ ಚರಿತ್ರೆ ; ಅಂಕಿತಪುಸ್ತಕ ; ಬೆಂಗಳೂರು.

ಹನುಮಂತಯ್ಯ ಎಲ್. ೧೯೯೯ ; ಕಥಾಕಥನ (ಬಂಡಾಯ) ಕತೆಗಳಲ್ಲಿ ದಲಿತ ಪ್ರಜ್ಞೆ; ಸಿ.ಜಿ. ಪಬ್ಲಿಕೇಷನ್ಸ್ ; ಬೆಂಗಳೂರು.